ಸಂಪುಟ: 05 ಸಂಚಿಕೆ: 30 ಪುಟಗಳು: 08 ಸೋಮವಾರ 14 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

# ಉದಯ ವಾಹಿನಿ

UV
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಶಸ್ವಿಯಾಗಬೇಕೆಂಬ ನನ್ನ ದೃಢನಿಶ್ಚಯವು ಸಾಕಷ್ಟು ಬಲವಾಗಿದ್ದರೆ ವೈಫಲ್ಯ ಎಂದಿಗೂ ನನ್ನನ್ನು ಹಿಂದಿಕ್ಕುವುದಿಲ್ಲ.

## ತಮಿಳುನಾಡು ಗವರ್ನರ್ ರಾಜಿನಾಮೆಗೆ ಆಗ್ರಹ

• **ಉದಯವಾಹಿನಿ, ಬೆಂಗಳೂರು**

'ಜೈ ಶ್ರೀ ರಾಮ್' ಘೋಷಣೆ ಕೂಗಿ ಎಂದ ಮೂರು ವರ್ಷಗಳಿಂದ 10 ಬಿಲ್‌ಗಳನ್ನು ತಡೆಹಿಡಿದಿದ್ದಕ್ಕಾಗಿ ಸುಪ್ರೀಂ ಕೋರ್ಟ್ ಗವರ್ನರ್ ರವಿಯವರನ್ನು ತರಾಟೆಗೆ ತೆಗೆದುಕೊಂಡಿತ್ತು ಅದಾಗಿ ಕೆಲ ದಿನಗಳಲ್ಲಿ ತಮಿಳುನಾಡಿನ ರಾಜ್ಯಪಾಲ ತಮಿಳುನಾಡು ಗವರ್ನರ್ ಆರ್.ಎನ್. ರವಿ ಮತ್ತೆ ಹೊಸ ವಿವಾದಕ್ಕೆ ಕಾರಣರಾಗಿದ್ದಾರೆ. ಮಧುರೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ವಿದ್ಯಾರ್ಥಿಗಳಿಗೆ 'ಜೈ ಶ್ರೀ ರಾಮ್' ಘೋಷಣೆ ಕೂಗುವಂತೆ ಹೇಳುವ ಮೂಲಕ ವ್ಯಾಪಕ ಟೀಕೆಗೊಳಗಾಗಿದ್ದಾರೆ. ಅವರ ಈ ನಡೆಯನ್ನು ಆಡಳಿತ ಪಕ್ಷದ ನಾಯಕರು ಮತ್ತು ಶೈಕ್ಷಣಿಕ ಸಂಸ್ಥೆಗಳು ಖಂಡಿಸಿವೆ. ಅಲ್ಲದೆ, ಅವರನ್ನು ಗವರ್ನರ್ ಹುದ್ದೆಯಿಂದ ತೆಗೆದು ಹಾಕುವಂತೆ ಒತ್ತಾಯಿಸಲಾಗಿದೆ. ಆರ್.ಎನ್. ರವಿ ಅವರು ತಮ್ಮ ಪ್ರಮಾಣ ವಚನವನ್ನು ಉಲ್ಲಂಘಿಸಿದ್ದಾರೆ. ಅವರು ಸಂವಿಧಾನ ಮತ್ತು ಅದರ ಆದರ್ಶಗಳನ್ನು ಗೌರವಿಸಿಲ್ಲ. ಭಾರತದ ಸಂವಿಧಾನ ಅನುಚ್ಛೇದದ 159 ಅನ್ನು ಉಲ್ಲಂಘಿಸಿದ್ದಕ್ಕಾಗಿ ಅವರನ್ನು ಗವರ್ನರ್ ಹುದ್ದೆಯಿಂದ ತಕ್ಷಣವೇ ತೆಗೆದುಹಾಕಬೇಕು ಎಂದು ಸರ್ಕಾರೇತರ ಸಂಸ್ಥೆ ಹೇಳಿಕೆ ಆಗ್ರಹಿಸಿದೆ. ಸುಪ್ರೀಂ ಕೋರ್ಟ್‌ನಿಂದ ತರಾಟೆಗೆ ಒಳಗಾದ ನಂತರ ಮತ್ತು ರಾಜ್ಯ ಸರ್ಕಾರದಿಂದ ನಿರ್ಬಂಧಿಸಲ್ಪಟ್ಟ ನಂತರ, ಅವರು ವಿದ್ಯಾರ್ಥಿಗಳನ್ನು 'ಜೈ ಶ್ರೀ ರಾಮ್' ಎಂದು ಹೇಳುವಂತೆ ಮಾಡುವ ಮೂಲಕ ಕಿರಿಕಿರಿ ಉಂಟುಮಾಡುತ್ತಿದ್ದಾರೆ. ಕೋರ್ಟ್ ನನ್ನ ವಿರುದ್ಧ ತೀರ್ಪು ನೀಡಿದರೂ, ನನ್ನ ಕಾರ್ಯಸೂಚಿ ಪಾಲಿಸಲು ಬೇರೆ ಮಾರ್ಗಗಳನ್ನು ಕಂಡುಕೊಳ್ಳುತ್ತೇನೆ ಎಂಬ ಸಂದೇಶವನ್ನು ಅವರು ರವಾನಿಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಸಂವಿಧಾನದ ತತ್ವಗಳನ್ನು ದುರ್ಬಲಗೊಳಿಸುವ ಅಪಾಯಕಾರಿ ಧೋರಣೆ ಯಾಗಿದೆ ಕಾಂಗ್ರೆಸ್ ನಾಯಕ ಶಶಿಕಾಂತ್ ಸೆಂಥಿಲ್ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿ ವ್ಯಂಗ್ಯ ವಾಡಿದ್ದಾರೆ.

## ಸರ್ಕಾರಿ ನೌಕರರ ಆಸ್ತಿ ವಿವರ ಸಲ್ಲಿಕೆ ಕಡ್ಡಾಯ : ಮಹತ್ವದ ಆದೇಶ

• **ಉದಯವಾಹಿನಿ, ಬೆಂಗಳೂರು**

ಪ್ರತಿ ವರ್ಷ ಸರ್ಕಾರಿ ನೌಕರರು ಆಸ್ತಿ ವಿವರ ಸಲ್ಲಿಸುವುದು ಕಡ್ಡಾಯ ಎಂದು ರಾಜ್ಯ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರ ಆರೋಪಗಳು ಹೆಚ್ಚಾಗುತ್ತಿವೆ. ಎಲ್ಲಾ ನೌಕರರೂ ಚರಾಸ್ತಿ-ಸ್ಥಿರಾಸ್ತಿಗಳನ್ನು ವೆಬ್‌ಸೈಟ್‌ನಲ್ಲಿ ಘೋಷಿಸಬೇಕು ಎಂದು ಲೋಕಾಯುಕ್ತ ಹೇಳಿತ್ತು. ಆದರೆ, ಇದಕ್ಕೆ ಸರ್ಕಾರಿ ನೌಕರರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಹೊತ್ತಲ್ಲಿ ಸರ್ಕಾರ ಜಾಣನಡೆ ಅನುಸರಿಸಿದೆ. ಪ್ರತಿಯೊಬ್ಬ ಸರ್ಕಾರಿ ನೌಕರರು ಸರ್ಕಾರಿ ಸೇವೆಗೆ ಸೇರುವಾಗ ಹಾಗೂ ಪ್ರತಿ ವರ್ಷ ನೌಕರರ ಹಾಗೂ ಕುಟುಂಬದ ಆಸ್ತಿ ವಿವರ ಸಲ್ಲಿಸೋದು ಈಗಾಗಲೇ ಕಡ್ಡಾಯವಾಗಿದೆ. ಅದರಂತೆ ಲೋಕಾಯಕ್ತದವರು ಯಾವ ಅಧಿಕಾರಿಗಳ ಬಗ್ಗೆ ಆಸ್ತಿ ವಿವರ ಕೇಳುತ್ತಾರೋ ವಿಳಂಬವಿಲ್ಲದೇ ಲೋಕಾಯುಕ್ತಕ್ಕೆ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಸೂಚನೆಗಳನ್ನು ಪಾಲಿಸದಿದ್ದರೆ ಇಲಾಖಾ ಮುಖ್ಯಸ್ಥರು ಹಾಗೂ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತೆ ಅಂತಾ ಸರ್ಕಾರ ಎಚ್ಚರಿಕೆ ನೀಡಿದೆ.

## ಬೆಂಗಳೂರು ಟನೆಲ್ ರಸ್ತೆಯ ಪ್ಲಾನಿಂಗ್‌ನಲ್ಲಿ ದೋಷ!



• **ಉದಯವಾಹಿನಿ, ಬೆಂಗಳೂರು**

ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಬೆಂಗಳೂರು ಸುರಂಗ ಮಾರ್ಗ. ಆದ್ರೆ, ಬಿಬಿಎಂಪಿ ಇದಕ್ಕೆ 9 ಕೋಟಿ ವೆಚ್ಚ ಮಾಡಿ ಡಿಟೈಲ್ ಪ್ರಾಜೆಕ್ಟ್ ವರದಿ ತಯಾರಿಸಿದ್ದು, ಇದರಲ್ಲಿ ತಪ್ಪುಗಳಿರುವುದು ಪತ್ತೆಯಾಗಿದೆ. ಹೀಗಾಗಿ ಇದರ ಮರುಪರಿಶೀಲನೆಗೆ ಸರ್ಕಾರದಿಂದಲೇ ರಚಿಸಲ್ಪಟ್ಟ ತಜ್ಞರ ಸಮಿತಿಗೆ ಜವಾಬ್ದಾರಿ ವಹಿಸಲಾಗಿದೆ.

ಬೆಂಗಳೂರಿನ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 16 ಕಿಮೀ ಉದ್ದದ ಸುರಂಗ ರಸ್ತೆ ನಿರ್ಮಾಣ ಆಗಲಿದೆ. ಆದರೆ ಈ ಯೋಜನೆಯನ್ನು ಸರ್ಕಾರವು ಪರಿಶೀಲನೆಗೆ ಒಳಪಡಿಸಿದೆ. ಈ ಯೋಜನೆಯ ಡಿಪಿಆರ್ ಅನ್ನು ತಜ್ಞರ ಸಮಿತಿಗೆ ಕಳುಹಿಸಲಾಗಿದೆ. ಟನೆಲ್ ರಸ್ತೆಯ ತಾಂತ್ರಿಕ ಮತ್ತು ಆರ್ಥಿಕ ಅಂಶಗಳನ್ನು ಸಮಿತಿ ಪರಿಶೀಲಿಸಲಿದೆ. ಬಿಬಿಎಂಪಿಗಾಗಿ ಖಾಸಗಿ ಸಂಸ್ಥೆಯೊಂದು ತಯಾರಿಸಿದ ಡಿಪಿಆರ್ ನಲ್ಲಿ ತಪ್ಪುಗಳಿದ್ದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ. ಸುರಂಗ ರಸ್ತೆಯು ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ. ಆದರೆ, ಈ ಯೋಜನೆಯಿಂದ ಮೆಟ್ರೋ ರೈಲು ಯೋಜನೆಗೂ ತೊಂದರೆಯಾಗಬಹುದು ಎಂಬ ಆತಂಕ ವ್ಯಕ್ತವಾಗಿವೆ.

**ತಜ್ಞರ ಸಮಿತಿಯಲ್ಲಿ ಯಾರ್ಯಾರು?**

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಯೋಜನೆಯ ಅನುಮೋದನೆಗಾಗಿ ಡಿಪಿಆರ್ ಸಲ್ಲಿಸಿದ್ದರು. ಆದರೆ, ನಗರ ಅಭಿವೃದ್ಧಿ ಇಲಾಖೆಯ ತಾಂತ್ರಿಕ ವಿಭಾಗದಲ್ಲಿ ಪರಿಣಿತರು ಇಲ್ಲದ ಕಾರಣ, ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಿದೆ. ಸುರಂಗ ನಿರ್ಮಾಣದ ಸಂಕೀರ್ಣತೆಯನ್ನು ಅರಿತು, ಸರ್ಕಾರವು ಸಮಗ್ರ ಮೌಲ್ಯಮಾಪನ ನಡೆಸಲು ತಜ್ಞರ ಸಮಿತಿಯನ್ನು ರಚಿಸಲು ನಿರ್ಧರಿಸಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.




## ಜಾತಿ ಗಣತಿ ವರದಿಯ ಬಗ್ಗೆ ಆತುರದ ನಿರ್ಧಾರವಿಲ್ಲ

# ಜಾತಿ ಗಣತಿ ವಿಚಾರ ಬೇಡ ಆತುರ!

**ಜಾತಿ ಗಣತಿ ವರದಿಯಿಂದ ಜಾತಿ, ಜಾತಿಗಳ ಮಧ್ಯೆ ಒಡಕು**

## ಜಾತಿ ಗಣತಿ ವರದಿ ಬಹಿರಂಗ: ಪರಿಶಿಷ್ಟ ಜಾತಿ ನಂ.1

## ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವಂತೆ ಆಯೋಗ ಶಿಫಾರಸು..!

• **ಉದಯವಾಹಿನಿ, ಬೆಂಗಳೂರು**

ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ಜಾತಿವಾರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ವರದಿ (ಜಾತಿ ಗಣತಿ) ಬಹಿರಂಗವಾಗಿದ್ದು, ವರದಿ ಪ್ರಕಾರ ರಾಜ್ಯದಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ಜಾತಿ ಎಂದರೆ ಅದು ಪರಿಶಿಷ್ಟ ಜಾತಿ ಎಂಬುದಾಗಿ ತಿಳಿದುಬಂದಿದೆ. ಹಲವು ಚರ್ಚೆ, ವಿರೋಧದ ನಡುವೆಯೂ ಸಚಿವ ಸಂಪುಟದಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ-2015 ಮಂಡನೆ ಆಗಿದೆ. ಸಮಗ್ರ ಚರ್ಚೆಗೆ ಮುಂದಿನ ಗುರುವಾರದ ಸಚಿವ ಸಂಪುಟ ಸಭೆಯ ಮುಹೂರ್ತ ನಿಗದಿ ಮಾಡಲಾಗಿದೆ. ಜಾತಿ ಗಣತಿ' ವರದಿ ಕುರಿತು ಸರ್ಕಾರ ಯಾವುದೇ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಸಚಿವ ಸಂಪುಟ ಈ ವರದಿಯನ್ನು ಪರಿಶೀಲಿಸುತ್ತದೆ ಮತ್ತು ಚರ್ಚಿಸುತ್ತದೆ. ಸತ್ಯಗಳ ಆಧಾರದ ಮೇಲೆ ಎಲ್ಲರಿಗೂ ನ್ಯಾಯ ಒದಗಿಸುತ್ತದೆ. ವರದಿ ವಿರುದ್ಧ ನೀಡಲಾಗುತ್ತಿರುವ ಹೇಳಿಕೆಗಳು ರಾಜಕೀಯ ಪ್ರೇರಿತ' ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭಾನುವಾರ ಹೇಳಿದ್ದಾರೆ. ಇತ್ತೀಚೆಗೆ ರಾಜ್ಯ ಸಚಿವ ಸಂಪುಟದ ಮುಂದೆ ಮಂಡಿಸಲಾದ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯು ಜಾತಿ ಗಣತಿ ಎಂದೇ ಹೆಚ್ಚು ಚರ್ಚೆಯಲ್ಲಿದೆ. ಸಚಿವ ಸಂಪುಟವು ಈ ವರದಿಯನ್ನು ಪರಿಶೀಲಿಸಲಿದೆ ಮತ್ತು ಈ ಬಗ್ಗೆ ಚರ್ಚಿಸಲಿದೆ ಹಾಗೂ ವಾಸ್ತವಾಂಶಗಳ ಆಧಾರದ ಮೇಲೆ ಎಲ್ಲರಿಗೂ ನ್ಯಾಯ ಒದಗಿಸುವ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ಅಲ್ಲದೆ ವರದಿಯ ಬಗ್ಗೆ ನೀಡಲಾಗುತ್ತಿರುವ ಹೇಳಿಕೆಗಳು ರಾಜಕೀಯ ಪ್ರೇರಿತವಾಗಿವೆ ಎಂದು ಅವರು ಆರೋಪಿಸಿದರು. ಈ ಬಗ್ಗೆ ಸಿಎಂ ಮಾತನಾಡಿದ್ದಾರೆ. ನಾನು ನಿನ್ನೆ ಬೆಳಗಾವಿ ಮತ್ತು ಮಂಗಳೂರಿಗೆ ಭೇಟಿ ನೀಡಿದ್ದರಿಂದ ಇನ್ನೂ ವರದಿಯನ್ನು ನೋಡಿಲ್ಲ. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ನಡೆಯಬೇಕು. ಈ ಬಗ್ಗೆ ವಿಧಾನಸಭೆಯಲ್ಲೂ ಚರ್ಚಿಸಲಾಗುವುದು ಎಂದು ಸಿಎಂ ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಈ ವರದಿಯನ್ನು ಶುಕ್ರವಾರ ಸಚಿವ ಸಂಪುಟದ ಮುಂದೆ ಇಡಲಾಗಿದ್ದು, ಏಪ್ರಿಲ್ 17ರಂದು ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ವಿಸ್ತೃತವಾದ ಚರ್ಚೆ ನಡೆಯಲಿದೆ.

ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ಕಳೆದ ವರ್ಷ ಫೆ.29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿಯನ್ನು ಸಲ್ಲಿಸಿತ್ತು. ವರದಿಯ ಬಗ್ಗೆ ಸಮಾಜದ ಕೆಲವು ವರ್ಗಗಳು ಆಕ್ಷೇಪಣೆ ಎತ್ತಿವೆ ಹಾಗೂ ಆಡಳಿತಾರೂಢ ಕಾಂಗ್ರೆಸ್‌ನ ಒಳಗಿನಿಂದಲೇ ವರದಿಯ ವಿರುದ್ಧ ಮಾತುಗಳು ಕೇಳಿ ಬಂದಿವೆ.2015ರಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ ಒಟ್ಟು 5.98 ಕೋಟಿ ನಾಗರಿಕರ ಪೈಕಿ, ಸುಮಾರು 70 ಪ್ರತಿಶತ ಅಥವಾ 4.16 ಕೋಟಿ ಜನ ವಿವಿಧ ಒಬಿಸಿ ವರ್ಗಗಳ ಅಡಿಯಲ್ಲಿ ಬರುತ್ತಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಒಬಿಸಿ ಕೋಟಾವನ್ನು ಪ್ರಸ್ತುತ ಶೇಕಡಾ 32 ರಿಂದ 51 ಕ್ಕೆ ಹೆಚ್ಚಿಸಲು ಆಯೋಗ ಶಿಫಾರಸು ಮಾಡಿದೆ ಎಂದು ಮೂಲಗಳು ಹೇಳಿವೆ. ಎಸ್ಸಿಗಳಿಗೆ ಈಗಿರುವ ಶೇಕಡಾ 17 ಮತ್ತು ಎಸ್ಟಿಗಳಿಗೆ ಶೇಕಡಾ 7ರಷ್ಟು ಮೀಸಲಾತಿಯೊಂದಿಗೆ ಒಬಿಸಿಗಳಿಗೆ ಶೇಕಡಾ 51ರಷ್ಟು ಮೀಸಲಾತಿ ಕೋಟಾ ನೀಡುವ ಮೂಲಕ, ವರದಿಯ ಪ್ರಕಾರ ರಾಜ್ಯದ ಒಟ್ಟು ಮೀಸಲಾತಿಯು ಶೇಕಡಾ 75ಕ್ಕೆ ಏರಿಕೆಯಾಗಬಹುದು. ಒಟ್ಟಾಗಿ 1.52 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಎಸ್/ಎಸ್ಟಿ) ರಾಜ್ಯದ ಅತಿದೊಡ್ಡ ಸಮುದಾಯವಾಗಿದೆ ಎಂದು ವರದಿಯಲ್ಲಿ ಹೇಳಿರುವುದಾಗಿ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಒಬಿಸಿಗಳ ಜಾತಿವಾರು ವಿಭಜನೆ ಇನ್ನೂ ವರದಿಯಿಂದ ಲಭ್ಯವಿಲ್ಲವಾದರೂ, ಒಬಿಸಿಯ ಪ್ರವರ್ಗ-2ಬಿ ಅಡಿಯಲ್ಲಿ ಬರುವ ಮುಸ್ಲಿಮರು 75.25 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದರೆ, ಸಾಮಾನ್ಯ ವರ್ಗವು 29.74 ಲಕ್ಷ ಜನಸಂಖ್ಯೆಯನ್ನು ಹೊಂದಿದೆ ಎಂದು ತಿಳಿದು ಬಂದಿದೆ.

ಸರಕಾರದ ಪ್ರತಿಯೊಂದು ಯೋಜನೆಗಳು ಎಲ್ಲರಿಗೂ ಸಿಗಬೇಕೆಂದು ಜಾತಿ ಗಣತಿ ವರದಿ ಜಾರಿಗೊಳಿಸಲಾಗುತ್ತದೆ. ಪ್ರಮುಖ 54 ಮಾನದಂಡವಿಟ್ಟುಕೊಂಡು ಜಾತಿ ಗಣತಿ ಮಾಡಿದ್ದೇವೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

**ಎಲ್ಲ ಸಮುದಾಯದ ಬಡವರಿಗಾಗಿ ಜಾತಿಗಣತಿ**



ಬಿಜೆಪಿಯವರಿಗೆ ಬಡವರ ಬಗ್ಗೆ ಚಿಂತನೆ ಇಲ್ಲ. ಎಲ್ಲಾ ಸಮುದಾಯದಲ್ಲಿಯೂ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿದ್ದಾರೆ, ಎಂದರು. ''ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಂಗಳ ಹಿಂದೆ ನೀಡಿರುವ ಹೇಳಿಕೆ ಒಮ್ಮೆ ನೋಡುವುದು ಒಳಿತು. 1.66 ಲಕ್ಷ ಅಧಿಕಾರಿಗಳು ಪ್ರತಿ ಮನೆಗೆ ಭೇಟಿ ನೀಡಿದ್ದಾರೆ. 1.55 ಲಕ್ಷ ಶಿಕ್ಷಕರು ಮನೆಮನೆಗೆ ಭೇಟಿ ನೀಡಿ ಜಾತಿ ಗಣತಿ ವರದಿ ಸಿದ್ದಪಡಿಸಿದ್ದಾರೆ. ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣ ಸಮುದಾಯದಲ್ಲೂ ಬಡವರಿದ್ದಾರೆ. ಸರಕಾರದ ಯೋಜನೆ ಅವರಿಗೂ ತಲುಪಿಸಬೇಕು ಎಂದು ಜಾತಿ ಗಣತಿ ವರದಿ ತಂದಿದ್ದಾರೆ. ಏ.17ಕ್ಕೆ ವಿಶೇಷ ಸಚಿವ ಸಂಪುಟ ಸಭೆ ಕರೆದು ಚರ್ಚಿಸಲಾಗುತ್ತದೆ, ಎಂದರು.

ಪ್ರಾಧಿಕಾರಗಳಿಗೆ ಹಣ ಬಿಡುಗಡೆಯಾಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ''ರಾಜ್ಯದ ಎಲ್ಲಾ ಪ್ರಾಧಿಕಾರಗಳಿಗೂ ಅನುದಾನ ನೀಡಲಾಗಿದೆ. ಅದಕ್ಕೆ ಸಂಬಂಧಪಟ್ಟ ಇಲಾಖೆ ಸಚಿವರು ಹಾಗೂ ಅಧಿಕಾರಿಗಳ ಗಮನಕ್ಕೆ ತರುತ್ತೇನೆ. ಅದರಂತೆ ಬನವಾಸಿ ಅಭಿವೃದ್ಧಿ ಪ್ರಾಧಿಕಾರಕ್ಕೂ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತದೆ, ಎಂದರು.

**ಒಕ್ಕಲಿಗರ ಮೂಗಿಗೆ ತುಪ್ಪ**

ವರದಿಯಲ್ಲಿ ಒಕ್ಕಲಿಗರ ಮೀಸಲು ಹೆಚ್ಚಳಕ್ಕೆ ಶಿಫಾರಸು ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಒಕ್ಕಲಿಗರ ಮೀಸಲು ಹೆಚ್ಚಳ ಸಾಧ್ಯವಿಲ್ಲ. ಈ ವರದಿ ಮೂಲಕ ಒಕ್ಕಲಿಗರ ಮೂಗಿಗೆ ತುಪ್ಪ ಸವರಲಾಗಿದೆ. ಈಗಾಗಲೇ 50% ಮೀಸಲಾತಿ ಮಿತಿ ಇರಬೇಕು ಅಂತ ಇದೆ. ಸರ್ಕಾರ ಸುಳ್ಳು ಹೇಳ್ತಿದೆ, ಹಾಗಾದ್ರೆ ಆದೇಶ ಹೊರಡಿಸಲಿ. ಮೀಸಲಾತಿ ಜಾಸ್ತಿ ಮಾಡುವ ಹಾಗಿದ್ದಿದ್ರೆ ನಾವು ಇದ್ದಾಗಲೇ ಕೊಡ್ತಿರ್ಲಿಲ್ವಾ. ಮೀಸಲಾತಿ ಹೆಚ್ಚಳ ರಾಜ್ಯಕ್ಕೆ ಅಧಿಕಾರ ಇಲ್ಲ ಎಂದು ಸ್ಪಷ್ಟಪಡಿಸಿದರು.



ಜಾತಿ ಜನಗಣತಿ ವರದಿ ಸಿದ್ದರಾಮಯ್ಯಗೆ ಮರಣ ಶಾಸನವಾಗಬಹುದು. ಹಾಗಾಗಿ, ವರದಿ ತಿರಸ್ಕರಿಸಲಿ. ಈ ಸಮೀಕ್ಷೆ ವೈಜ್ಞಾನಿಕವಾಗಿ ನಡೆದಿಲ್ಲ. ಪಾರದರ್ಶಕವಾಗಿಯೂ ಇಲ್ಲ. ವರದಿ ಜಾರಿಯಾದರೆ ಸಾಮಾನ್ಯ ಜನರೂ ಸಿದ್ದರಾಮಯ್ಯಗೆ ಶಾಪ ಹಾಕ್ತಾರೆ. ಸಿದ್ದರಾಮಯ್ಯರಿಗೆ ಪೂರ್ಣ ಸತ್ಯ ಗೊತ್ತಿದೆ. ಆದ್ರೆ ಅವರು ಕುರ್ಚಿ ಉಳಿಸಿಕೊಳ್ಳಲು ವರದಿ ಜಾರಿಗೆ ಮುಂದಾಗಿದ್ದಾರೆ.

-ವಿ.ಸೋಮಣ್ಣ ಕೇಂದ್ರ ಸಚಿವ



ಜಾತಿ ಗಣತಿ ವರದಿಯ ಮೂಲಕ ಲಿಂಗಾಯತರು, ಒಕ್ಕಲಿಗರು, ದಲಿತರಿಗೆ ಪಂಗನಾಮ ಹಾಕಿದ್ದಾರೆ. ಕಾಂತರಾಜು ಅವರನ್ನು ಮನೆಗೆ ಕರೆಸಿಕೊಂಡು ಸಿದ್ದರಾಮಯ್ಯ ಡಿಕ್ಟೇಟ್ ಮಾಡಿ ಬರೆಸಿದ ವರದಿ ಇದು. ಈ ವರದಿಯಲ್ಲಿ ಸೀಕ್ರೆಟ್ ಏನೂ ಇಲ್ಲ, ಎಲ್ಲಾ ಜಗಜ್ಜಾಹೀರಾಗಿದೆ. ಜಾತಿ, ಜಾತಿಗಳನ್ನು, ಧರ್ಮ ಧರ್ಮಗಳನ್ನು ಒಡೆಯುವ ವರದಿ. ಜನರನ್ನು ಕೂಡಿಸೋದು ಕಷ್ಟ, ಒಡೆಯೋದು ಸುಲಭ. ಜಾತಿ, ಧರ್ಮಗಳ ಮಧ್ಯೆ ಒಡಕು ತರ್ತಿದ್ದಾರೆ.

- ಆರ್.ಅಶೋಕ್ ವಿರೋಧ ಪಕ್ಷದ ನಾಯಕ



ಜಾತಿ ಜನಗಣತಿ, ಜನಗಣತಿ ಮಾಡುವ ಅಧಿಕಾರ ಸಂವಿಧಾನಬದ್ಧವಾಗಿ ಕೇಂದ್ರಕ್ಕೆ ಮಾತ್ರ ಇರೋದು. ಈಗಲೇ ಸತ್ಯ-ಸುಳ್ಳು ಪ್ರತಿಕ್ರಿಯೆ ಕಷ್ಟ. ಅನಧಿಕೃತವಾಗಿ ಸೋರಿಕೆಯಾಗಿರೋದನ್ನು ಸತ್ಯ ಎಂದು ಭಾವಿಸಿದರೆ ಚರ್ಚೆ ಹುಟ್ಟುಹಾಕುತ್ತೆ ಅಷ್ಟೆ. ಅಲ್ಪಸಂಖ್ಯಾತರು ಯಾರು ರಾಜ್ಯದ ಜನಸಂಖ್ಯೆಯಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರೋರು ಅಲ್ಪಸಂಖ್ಯಾತರಾಗುತ್ತಾರಾ ಮೀಸಲಾತಿ ಸಂಬಂಧ ಕೋರ್ಟ್‌ನಲ್ಲಿ ಮೊಕದ್ದಮೆ ಇದ್ದಾಗ ಕೇಂದ್ರ, ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸಿತ್ತು, ಬಡ್ತಿ ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸಿತ್ತು.


-ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

## ಇತಿಹಾಸದಲ್ಲೇ ಮೊದಲ ಬಾರಿ ಪೂಜಾರಿ ದುಡ್ಡಲ್ಲೇ ಉತ್ಸವ!

• **ಉದಯವಾಹಿನಿ, ಬೆಂಗಳೂರು**

ಐತಿಹಾಸಿಕ ಬೆಂಗಳೂರು ಕರಗ ಉತ್ಸವವು ಈ ಬಾರಿ ಸಂಪೂರ್ಣ ಪೂಜಾರಿ, ದೇವಸ್ಥಾನ ಆಡಳಿತ ಮಂಡಳಿ ಹಣದಲ್ಲಿಯೇ ನಡೆದಿದೆ. ಸರ್ಕಾರದಿಂದ ಸಕಾಲಕ್ಕೆ ಒಂದು ರೂಪಾಯಿ ಹಣವೂ ಬಿಡುಗಡೆಯಾಗದಿರುವುದು ಭಾರೀ ಮುಜುಗರಕ್ಕೆ ಕಾರಣವಾಗಿದೆ. ದೇವಸ್ಥಾನವನ್ನು ಮುಜರಾಯಿ ಇಲಾಖೆಯಿಂದ ತೆಗೆದು ಬೆಂಗಳೂರು ಕರಗ ಉತ್ಸವ ಏಪ್ರಿಲ್ 4 ರಿಂದ ಆರಂಭವಾಗಿ 13 ವರೆಗೂ ನಡೆಯಲಿದೆ. ಏಪ್ರಿಲ್ 12 ರಂದು ಉತ್ಸವ ಪ್ರಮುಖ ದಿನವಾಗಿದ್ದು, ಕರಗ ಹೊತ್ತು ಪೂಜಾರಿ ಮೆರವಣಿ ಇರುತ್ತದೆ. ಕರಗ ನಡೆಯುವ ಧರ್ಮರಾಯಸ್ವಾಮಿ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಪ್ರತಿ ವರ್ಷವೂ ಸರ್ಕಾರದಿಂದ ಉತ್ಸವಕ್ಕೆ ಅಗತ್ಯ ಅನುದಾನ ನೀಡುತ್ತದೆ. ಬಿಬಿಎಂಪಿ ಬಜೆಟ್‌ನಲ್ಲಿಯೇ ಹಣ ಮೀಸಲಿಡಲಾಗುತ್ತದೆ. ಸದ್ಯ ಉತ್ಸವ ಮುಕ್ತಾಯವಾದರೂ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ. ಅನಿವಾರ್ಯವಾಗಿ ಕರಗದ ಹೂವಿಗೂ ಪೂಜಾರಿಯೇ ಲಕ್ಷಾಂತರ ರೂ ಹಣವನ್ನು ತನ್ನ ಕೈಯಿಂದ ಹಾಕಿದ್ದಾರೆ. ಇದರ ಭಕ್ತರು ಹಾಗೂ ದೇವಸ್ಥಾನ ಆಡಳಿತ ಮಂಡಳಿಯ ಬೇಸರಕ್ಕೆ ಕಾರಣವಾಗಿದೆ.

**ನಮ್ಮ ದೇವಸ್ಥಾನ ನಮಗೆ ಕೊಡಿ:** ಕರಗ ಪೂಜಾರಿ 20 ಲಕ್ಷ ರೂ. ಕೊಟ್ಟಿದ್ದಾರೆ. ಹೂವಿಗೂ ಹಣ ಇಲ್ಲ, ನನ್ನ ಕೈಯಿಂದ 20 ಲಕ್ಷ ರೂ., ಬಾಲಕೃಷ್ಣ ಎಂಬುವವರು 20 ಲಕ್ಷ ರೂ. ಒಟ್ಟಾರೆ 60 ಲಕ್ಷ ರೂ. ಈಗಾಗಲೇ ಕರಗಕ್ಕೆ ಖರ್ಚು ಮಾಡಲಾಗಿದೆ. ಕರಗ ನಡೆಸಲು ಸರ್ಕಾರಕ್ಕೆ ಯೋಗ್ಯತೆ ಇಲ್ಲ ಅಂದರೆ ಬಿಟ್ಟುಬಿಡಲಿ. ಮುಜರಾಯಿ ಇಲಾಖೆಯಿಂದ ತೆಗೆದು ನಮ್ಮ ಕೈಗೆ ದೇವಸ್ಥಾನವನ್ನು ಕೊಡಿ. ಸರ್ಕಾರಕ್ಕೆ ದೇವಾಲಯದ ಹುಂಡಿ ದುಡ್ಡು ಬೇಕು. ದೇವಸ್ಥಾನದ ಆಸ್ತಿ, ಅಂಗಡಿಗಳ ಬಾಡಿಗೆ ಬೇಕು. ಆದರೆ, ಕರಗಕ್ಕೆ ದುಡ್ಡು ಕೊಡಲು ಆಗಲ್ಲ ಎಂದು ಕೆ ಸತೀಶ್ ಸರ್ಕಾರದ ವಿರುದ್ಧ ಕಿಡಿಕಾರಿದರು.



**ನಾವೇ ಸ್ವಂತ ಖರ್ಚು ಮಾಡಿ ಕರಗ ನಡೆಸುತ್ತಿದ್ದೇವೆ**

ಕರಗ ಉತ್ಸವಕ್ಕೆ ಬಿಬಿಎಂಪಿಯು 1.50 ಕೋಟಿ ರೂ. ಅನುದಾನ ಒದಗಿಸಿದೆ. ಆದರೆ ಉತ್ಸವ ಆರಂಭವಾಗಿ 10 ದಿನ ಕಳೆದರೂ, ಈವರೆಗೆ ಹಣ ಬಿಡುಗಡೆಯಾಗಿಲ್ಲ. ಬೆಂಗಳೂರು ನಗರ ಜಿಲ್ಲಾಧಿಕಾರಿಯು 40 ಲಕ್ಷ ರೂ. ಗಳನ್ನು ಪಾಲಿಕೆಯು ಬಿಡುಗಡೆ ಮಾಡಿದೆ ಎನ್ನುತ್ತಿದ್ದಾರೆ. ಆದರೆ, ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಖಾತೆಗೆ ವರ್ಗಾಯಿಸಿಲ್ಲ. ಹಣ ನೀಡಿಲ್ಲವೆಂದು ಕರಗ ನಿಲ್ಲಿಸಲಾಗುವುದಿಲ್ಲ. ಹೀಗಾಗಿ, ನಾವೇ ಸ್ವಂತ ಖರ್ಚು ಮಾಡಿ ಕರಗ ನಡೆಸುತ್ತಿದ್ದೇವೆ. ಇತಿಹಾಸದಲ್ಲಿಯೇ ಪೂಜಾರಿ ಹಣದಲ್ಲಿ ಕರಗ ನಡೆದಿದ್ದು ಇದೇ ಮೊದಲು ಎಂದು ಧರ್ಮರಾಯಸ್ವಾಮಿ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ ಸತೀಶ್ ಬೇಸರ ವ್ಯಕ್ತಪಡಿಸಿದ್ದಾರೆ.

## ಬೆಂಗಳೂರು ಏರ್‌ಪೋರ್ಟ್ ಡ್ಯಾಶ್‌ಬೋರ್ಡ್‌ಗಳಲ್ಲಿ ಹಿಂದಿ ಕಿತ್ತಾಕಿ, ಕನ್ನಡಕ್ಕೆ ಆದ್ಯತೆ!


■ ಕೆಂಪೆಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1 ರಲ್ಲಿ ಒಂದು ಅಚ್ಚರಿ ಕಾದಿತ್ತು ■ ಮಾಹಿತಿಗಳು ಬರೀ ಇಂಗ್ಲಿಷ್ ಹಾಗೂ ಕನ್ನಡದಲ್ಲಿ

• **ಉದಯವಾಹಿನಿ, ಬೆಂಗಳೂರು**

ಇತ್ತೀಚೆಗಷ್ಟೇ ಕನ್ನಡ ವೆಬ್‌ಸೈಟ್ ಆರಂಭಿಸಿದ್ದ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಈಗ ಮತ್ತೊಂದು ಹೆಜ್ಜೆ ಮುಂದೆ ಹೋಗಿ ವಿಮಾನ ಆಗಮನ, ನಿರ್ಗಮನ ಮಾಹಿತಿ ನೀಡುವ ಡ್ಯಾಶ್‌ಬೋರ್ಡ್‌ನಲ್ಲಿ ಹಿಂದಿ ತೆಗೆದು ಹಾಕಿ ಕನ್ನಡದಲ್ಲಿ ಮಾಹಿತಿ ನೀಡಲಾಗುತ್ತಿದೆ.

ಬೆಂಗಳೂರು ವಿಮಾನ ನಿಲ್ದಾಣದ ಡ್ಯಾಶ್‌ಬೋರ್ಡ್‌ಗಳಲ್ಲಿ ಕನ್ನಡ ಕಂಡು ಕನ್ನಡಿಗ ಪ್ರಯಾಣಿಕರು ಖುಷಿಪಟ್ಟಿದ್ದಾರೆ. ಇತ್ತ ಹಿಂದಿ ಮರೆಯಾಗಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಒಂದಿಷ್ಟು ಪರ ವಿರೋಧ ಚರ್ಚೆಗಳು ನಡೆಯುತ್ತಿವೆ.

ವಿಮಾನ ವೇಳಾಪಟ್ಟಿ ನೀಡಿವ ಡ್ಯಾಶ್‌ಬೋರ್ಡ್‌ನಲ್ಲಿ ಕನ್ನಡ ಕಂಡ ಬಗ್ಗೆ ನೆಟ್ಟಿಗರೊಬ್ಬರು ಅಚ್ಚರಿಯಿಂದ ಟ್ವೀಟ್ ಮಾಡಿದ್ದಾರೆ. ಇಂದು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1 ರಲ್ಲಿ ಒಂದು ಅಚ್ಚರಿ ಕಾದಿತ್ತು. ಎಲ್ಲಾ ಡಿಜಿಟಲ್ ಬೋರ್ಡುಗಳಲ್ಲಿ ವಿಮಾನಗಳ ಹಾರಾಟದ ಮಾಹಿತಿ, ವಿಮಾನಗಳ ಬರುವ ಮತ್ತು ಹೊರಡುವ ವೇಳಪಟ್ಟಿ ಮತ್ತಿತರ ಮಾಹಿತಿಗಳು ಬರೀ ಇಂಗ್ಲಿಷ್ ಹಾಗೂ ಕನ್ನಡದಲ್ಲಿತ್ತು ಎಂದು ಹೇಳಿದ್ದಾರೆ.




**ಪ್ರಾದೇಶಿಕ ಭಾಷೆಗೆ ಉತ್ತೇಜನ**

**ಟರ್ಮಿನಲ್ - 2 ಗೆ 5 ಸ್ಟಾರ್ ಮಾನ್ಯತೆ**

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಟರ್ಮಿನಲ್- 2 ಸ್ಕೈಟ್ರಾಕ್ಸ್ 5 ಸ್ಟಾರ್ ಮಾನ್ಯತೆ ಪಡೆದ ಭಾರತದ ಮೊದಲ ಟರ್ಮಿನಲ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತ ಮತ್ತು ದಕ್ಷಿಣ ಏಷ್ಯಾದ ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ ಎಂಬ ಹಿರಿಮೆಯನ್ನು ಸತತ ಎರಡನೇ ಬಾರಿ ಮುಡಿಗೇರಿಸಿಕೊಂಡಿದೆ. ಆ ಮೂಲಕ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರಮುಖ ಜಾಗತಿಕ ವಿಮಾನಯಾನ ಕೇಂದ್ರವಾಗಿ ಹೊರಹೊಮ್ಮಿದೆ ಎಂದು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರಿ ಮರಾರ್ ತಿಳಿಸಿದ್ದಾರೆ.

**ವ್ಯಾಪಕ ಚರ್ಚೆ:** ಈ ಬಗ್ಗೆ ಕರ್ನಾಟಕ ಪೋರ್ಟ್‌ಪೋಲೀಯೋ ಎಂಬ ಟ್ವೀಟರ್ ಪೇಜ್ ಕೂಡ ಟ್ವೀಟ್ ಮಾಡಿದೆ. ಬೆಂಗಳೂರು ವಿಮಾನ ನಿಲ್ದಾಣದ ಪ್ರದರ್ಶನ ಫಲಕಗಳಿಂದ ಹಿಂದಿ ಭಾಷೆಯನ್ನು ತೆಗೆದು ಹಾಕಿದ ನಂತರ ಕರ್ನಾಟಕದಲ್ಲಿ ಮತ್ತೊಂದು ಭಾಷಾ ವಿವಾದ ಭುಗಿಲೆದ್ದಿದೆ. ಹೊಸ ಫಲಕಗಳು ಈಗ ಇಂಗ್ಲಿಷ್ ಮತ್ತು ಕನ್ನಡವನ್ನು ಮಾತ್ರ ಒಳಗೊಂಡಿವೆ. ಇದು ಸಾರ್ವಜನಿಕರಲ್ಲಿ ವ್ಯಾಪಕ ಚರ್ಚೆ ಮತ್ತು ಪ್ರತಿಕ್ರಿಯೆಯನ್ನು ಹುಟ್ಟುಹಾಕಿದೆ. ಅನೇಕ ನಾಗರಿಕರು ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಲು ಸಾಮಾಜಿಕ ಮಾಧ್ಯಮ ಮತ್ತು ಸಾರ್ವಜನಿಕ ವೇದಿಕೆಗಳಿಗೆ ಹೋಗಿದ್ದಾರೆ.

ಕನ್ನಡೇತರ ಭಾಷಿಕರ ಒಳಗೊಳ್ಳುವಿಕೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಟ್ವೀಟ್‌ನಲ್ಲಿ ತಿಳಿಸಿದೆ. ಪ್ರಾದೇಶಿಕ ಭಾಷೆಯನ್ನು ಉತ್ತೇಜಿಸುವುದು ಮುಖ್ಯವಾದರೂ, ಪ್ರಮುಖ ಅಂತರರಾಷ್ಟ್ರೀಯ ದ್ವಾರದಿಂದ ಹಿಂದಿಯನ್ನು ಸಂಪೂರ್ಣವಾಗಿ ಹೊರಗಿಡುವುದು ತಪ್ಪು ಸಂದೇಶವನ್ನು ರವಾನಿಸುತ್ತದೆ ಮತ್ತು ಪ್ರವಾಸಿಗರು, ವಲಸಿಗರು ಮತ್ತು ಇತರ ರಾಜ್ಯಗಳ ಪ್ರಯಾಣಿಕರ ಮೇಲೆ ಪರಿಣಾಮ ಬೀರಬಹುದು ಎಂದು ವಿಮರ್ಶಕರು ವಾದಿಸುತ್ತಾರೆ. ಮತ್ತೊಂದೆಡೆ, ಈ ಕ್ರಮದ ಬೆಂಬಲಿಗರು ಅದನ್ನು ರಾಜ್ಯದ ಭಾಷಾ ಗುರುತನ್ನು ಸಂರಕ್ಷಿಸುವ ಮತ್ತು ಆದ್ಯತೆ ನೀಡುವತ್ತ ಒಂದು ಹೆಜ್ಜೆ ಯಾಗಿ ಸಮರ್ಥಿಸಿಕೊಳ್ಳುತ್ತಾರೆ.

ಇನ್ನೊಂದೆಡೆ ನಾಗರಿಕರು ಸರ್ಕಾರ ಮತ್ತು ವಿಮಾನ ನಿಲ್ದಾಣ ಅಧಿಕಾರಿಗಳು ನಿರ್ಧಾರವನ್ನು ಮರುಪರಿಶೀಲಿಸುವಂತೆ ಮತ್ತು ಸ್ಥಳೀಯ ಸಂಸ್ಕೃತಿ ಮತ್ತು ರಾಷ್ಟ್ರೀಯ ವೈವಿಧ್ಯತೆಯನ್ನು ಗೌರವಿಸುವ ಹೆಚ್ಚು ಒಳಗೊಳ್ಳುವ ವಿಧಾನವನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಪೋರ್ಟ್‌ಪೋಲೀಯೋ ಪೇಜ್ ಟ್ವೀಟ್ ಮಾಡಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.99 ₹/L ಬಂಗಾರ: ₹9,567/Gram24ct ₹8,770/Gram22ct ಬೆಳ್ಳಿ: ₹100.00/Gram

## ಘಾಟಿ ಸುಬ್ರಹ್ಮಣ್ಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ: ಡಿಸಿಎಂ ಡಿಕೆಶಿ ದಂಪತಿ

• ಉದಯವಾಹಿನಿ, ದೊಡ್ಡಬಳ್ಳಾಪುರ



ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಭಾನುವಾರ ಬೆಳಿಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ತಮ್ಮ ಪತ್ನಿಯೊಂದಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಬೆಂಗಳೂರಿನ ಪ್ರಸಿದ್ಧ ಆದಿಶಕ್ತಿ ದ್ರೌಪದಮ್ಮ ಐತಿಹಾಸಿಕ ಕರಗ ಶಕ್ತ್ಯೋತ್ಸವ, ಧರ್ಮರಾಯಸ್ವಾಮಿ ಕರಗೋತ್ಸವದಲ್ಲಿ ಪಾಲ್ಗೊಂಡ ಬಳಿಕ ದೊಡ್ಡಬಳ್ಳಾಪುರದ ಘಾಟಿ ಕ್ಷೇತ್ರಕ್ಕೆ ಭೇಟಿ ನೀಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಕಂಟನಕುಂಟೆ ಬಳಿ ಯುವ ಕಾಂಗ್ರೇಸ್ ಘಟಕದ ಅಧ್ಯಕ್ಷ ಶರತ್ ಪಾಟೀಲ್ ನೇತೃತ್ವದ ಪದಾಧಿಕಾರಿಗಳು ಹೂಗುಚ್ಛ ನೀಡುವ ಮೂಲಕ ಸ್ವಾಗತ ಕೋರಿದರು. ಬಳಿಕ ಘಾಟಿ ಸುಬ್ರಹ್ಮಣ್ಯ ದೇವಾಲಯದಲ್ಲಿ ಡಿಸಿಎಂ ದಂಪತಿಗಳಿಗೆ ದೇವಾಲಯದ ಆಡಳಿತ ಮಂಡಳ ಅದ್ದೂರಿ ಸ್ವಾಗತ ಕೋರಿ, ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ವಿಶೇಷ ಪೂಜೆ ಸಲ್ಲಿಸ ಲಾಯಿತು. ರಾಜಕೀಯ ವಿದ್ಯಮಾನಗಳ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಉಪಮುಖ್ಯಮಂತ್ರಿಗಳು, ಪವಿತ್ರ ಕ್ಷೇತ್ರಕ್ಕೆ ಬಂದಿದ್ದೇವೆ. ಇಲ್ಲಿ ರಾಜಕೀಯ ಮಾತನಾಡುವುದು ಬೇಡ. ಈ ಬಾರಿ ಉತ್ತಮ ಮಳೆ, ಬೆಳೆಯಾಗಿ ಸುಭೀಕ್ಷೆಯಿಂದಿರಲಿ ಎಂದು ದೇವರಲ್ಲಿ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

## ಪರಿಷತ್‌ನ ನಾಲ್ಕು ಸ್ಥಾನಕ್ಕೆ ಭಾರೀ ಪೈಪೋಟಿ, ಲಾಬಿ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನದ ಸದಸ್ಯರ ನೇಮಕಾತಿಗೆ ಭಾರೀ ಪೈಪೋಟ ನಡೆ ಯುತ್ತಿದ್ದು, ಸಿಎಂಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಬಲಿಗರ ನಡುವೆ ಪೈಪೋಟಿ ಏರ್ಪಟ್ಟಿದೆ. ಇತ್ತೀಚೆಗೆ ದೆಹಲಿ, ಗುಜರಾತ್‌ನಲ್ಲಿ ನಡೆದ ಪ್ರತ್ಯೇಕ ಸಭೆಗಳಲ್ಲಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯನವರು ಪ್ರತ್ಯೇಕ ಪಟ್ಟಿಯನ್ನು ಹೈಕಮಾಂಡ್ ನಾಯಕರಿಗೆ ಸಲ್ಲಿಸಿದ್ದಾರೆ. ಇಬ್ಬರೂ ತಲಾ 10 ಮಂದಿ ಸದಸ್ಯರ ಪಟ್ಟಿಯನ್ನು ಸಲ್ಲಿಸಿದ್ದು, ತಮ್ಮ ಬೆಂಬಲಿಗರಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ.

ಒಕ್ಕಲಿಗ ಸಮುದಾಯ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಜಾತಿಗೆ ತಲಾ ಒಂದು ಸ್ಥಾನಗಳನ್ನು ನೀಡಲು ಈ ಬಾರಿ ನಿರ್ಧರಿಸಲಾಗಿದೆ. ಒಕ್ಕಲಿಗ ಸಮುದಾಯದಿಂದ ಬಿ.ಎಲ್.ಶಂಕರ್ ಅವರ ಹೆಸರು ಬಹುತೇಕ ಖಚಿತವಾಗಿತ್ತು. ಆದರೆ ಅದಕ್ಕೆ ಅಲ್ಪಸಂಖ್ಯಾತ ಸಮುದಾಯದ ಕೆಲ ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ.



ರಮೇಶ್‌ಬಾಬು, ಮಾಲತಿ ಕೃಷ್ಣಮೂರ್ತಿ ಮತ್ತಿತರರ ಹೆಸರುಗಳು ಚರ್ಚೆಯಲ್ಲಿವೆ. ಈ ಹಿಂದೆ ಸಿಎಂಅವರ ಮಾಧ್ಯಮ ಸಲಹೆಗಾರರಾಗಿ ಕೆಲಸ ಮಾಡಿದ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಮೈಸೂರಿನ ಪತ್ರಕರ್ತ ಶಿವಕುಮಾರ್, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ದಲಿತ ಸಂಘರ್ಷ ಸಮಿತಿಯ ಡಿ.ಜಿ.ಸಾಗರ್ ಸೇರಿದಂತೆ ಹಲವರ ಹೆಸರುಗಳು ಚರ್ಚೆಯಲ್ಲಿದೆ. ಅಲ್ಪಸಂಖ್ಯಾತರ ಸಮುದಾಯದಿಂದ ಆಘಾ ಸುಲ್ತಾನ್ ಸೇರಿದಂತೆ ಇನ್ನೂ ಹಲವರ ಹೆಸರು ಚರ್ಚೆಯಲ್ಲಿವೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಸಲ್ಲಿಸಿರುವ ಪಟ್ಟಿಯನ್ನು ಪರಿಶೀಲಿಸಿ ಹೈಕಮಾಂಡ್ ಶೀಘ್ರವೇ ಅಂತಿಮ ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯಕ್ಕೆ ರವಾನೆ ಮಾಡುವ ಸಾಧ್ಯತೆಯಿದೆ. ಮತ್ತಷ್ಟು ಮಂದಿ ಕೂಡ ವಿಧಾನಪರಿಷತ್ ನೇಮಕಗೊಳ್ಳಲು ತರಹೇವಾರಿ ಲಾಬಿ ಮಾಡುತ್ತಿದ್ದಾರೆ.

### ಪರ್ಯಾಯವಾಗಿ ಚರ್ಚೆ

**ಬಿ.ಎಲ್.ಶಂಕರ್ ಆರ್‌ಎಸ್‌ಎಸ್ ಜೊತೆ ಗುರುತಿಸಿಕೊಂಡಿದ್ದು, ಅವರ ನೇಮಕಾತಿ ಮಾಡಿದರೆ ಅಲ್ಪಸಂಖ್ಯಾತರಿಗೆ ಕಾಂಗ್ರೇಸ್ ಮೇಲೆ ವಿಶ್ವಾಸ ತಗ್ಗುವಂತಾಗಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ದೂರು ನೀಡಲಾಗಿದೆ. ಹೀಗಾಗಿ ರಘುನಂದನ್ ರಾಮಣ್ಣ ಅವರ ಹೆಸರು ಪರ್ಯಾಯವಾಗಿ ಚರ್ಚೆಗೆ ಬಂದಿದೆ.**

## ಮುಸ್ಲಿಂ ತುಷ್ಟೀಕರಣ ನೀತಿ ರಾಜ್ಯದಲ್ಲಿ ಪಶ್ಚಿಮ ಬಂಗಾಳದಂತಹ ಪರಿಸ್ಥಿತಿಗೆ ಕಾರಣವಾಗಬಹುದು

• ಉದಯವಾಹಿನಿ, ಬೆಂಗಳೂರು



ಸರ್ಕಾರದ ಓಲೈಕೆ ರಾಜಕಾರಣದಿಂದಾಗಿ ಪಶ್ಚಿಮ ಬಂಗಾಳದ ಹಿಂಸಾಚಾರ ಪೀಡಿತ ಮುರ್ಷಿದಾಬಾದ್ ಜಿಲ್ಲೆಯಿಂದ ಹಿಂದೂಗಳು ಪಲಾ ಯನ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ ನಾಯಕ ಪಿಸಿ ಮೋಹನ್, ಕರ್ನಾಟಕ ಕಾಂಗ್ರೇಸ್‌ನ ತುಷ್ಟೀಕರಣ ತಂತ್ರ ಗಳಿಂದ ಇಲ್ಲಿಯೂ ಇದೇ ರೀತಿಯ ಪರಿಸ್ಥಿತಿಗೆ ಕಾರಣವಾಗ ಬಹುದು ಎಂದು ಹೇಳಿದ್ದಾರೆ. ಸರ್ಕಾರದ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡುವ ರಾಜ್ಯ ಸರ್ಕಾರದ ಕ್ರಮವನ್ನು ತುಷ್ಟೀಕರಣ ತಂತ್ರ ಎಂದು ಕರೆದ ಬೆಂಗಳೂರು ಕೇಂದ್ರ ಸಂಸದರು, ಹಿಂದೂಗಳು ಎಚ್ಚರಗೊಳ್ಳುವಂತೆ ಕರೆ ನೀಡಿದ್ದಾರೆ. ಮುರ್ಷಿದಾಬಾದ್‌ನಲ್ಲಿ ನಡೆಯುತ್ತಿರುವ ಘಟನೆಗಳು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರದ ಅಪಾಯಕಾರಿ ಓಲೈಕೆ ರಾಜಕಾರಣದ ನೇರ ಪರಿಣಾಮವಾಗಿದೆ. ಇದು ಹಿಂದೂಗಳನ್ನು ಪಲಾಯನ ಮಾಡುವಂತೆ ಮಾಡಿದೆ. ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಂರಿಗೆ ಶೇ 4ರಷ್ಟು ಮೀಸಲಾತಿಯಂತಹ ಕರ್ನಾಟಕ ಕಾಂಗ್ರೇಸ್‌ನ ಓಲೈಕೆಯ ತಂತ್ರಗಳು ಸಹ ಇದೇ ರೀತಿಯ ಪರಿಸ್ಥಿತಿಗೆ ಕಾರಣವಾಗಬಹುದು. ಹಿಂದೂಗಳೇ, ಎದ್ದೇಳಿ! ಎಂದು 'X' ನಲ್ಲಿ ಪೋಸ್ಟ್ ಮಾಡಿ ದ್ದಾರೆ. ಜನರು ತಮ್ಮ ಕುಟುಂಬಗಳು ಮತ್ತು ವಸ್ತುಗಳೊಂದಿಗೆ ಮುರ್ಷಿದಾಬಾದ್‌ನಿಂದ ಪಲಾಯನ ಮಾಡುತ್ತಿರುವುದನ್ನು ತೋರಿಸುವ ವಿಡಿಯೋವನ್ನು ಮೋಹನ್ ಹಂಚಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ವಕ್ಫ್ ಕಾಯ್ದೆಯನ್ನು ವಿರೋಧಿಸಿ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಮೂವರು ಸಾವಿಗೀಡಾಗಿದ್ದಾರೆ.

## ಖಳನಟ ವಿರುದ್ಧ ರೇಪ್ ಆರೋಪ ಪ್ರಕರಣ; ಬಿ-ರಿಪೋರ್ಟ್ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ಸ್ಯಾಂಡಲ್ ವುಡ್‌ನ ಖಳನಟ ಶೇಷಗಿರಿ ಬಸವರಾಜು ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ತನಿಖೆ ನಡೆಸಿ ಕೋರ್ಟ್‌ಗೆ ಬಿರಿಪೋರ್ಟ್ ಸಲ್ಲಿಕೆ ಮಾಡಲಾಗಿದೆ. 2014ರಲ್ಲಿ ಸಂತ್ರಸ್ತ ಮಹಿಳೆಯ ಪರಿಚಯವಾಗಿತ್ತು, ಪರಿಚಯ ಸ್ನೇಹಕ್ಕೆ ತಿರುಗಿತ್ತು.

ಒಂದು ದಿನ ಮಹಿಳೆಗೆ ಪ್ರಜ್ಞೆ ತಪ್ಪುವ ಮಾತ್ರೆ ನೀಡಿ ಅತ್ಯಾಚಾರ ಮಾಡ ಲಾಗಿದೆ. ನಂತರ ವಿಡಿಯೋ ಫೋಟೋಗಳನ್ನು ತೆಗೆದುಕೊಂಡು ಬೆದರಿಕೆ ಹಾಕಲಾಗಿದೆ ಅಂತ ಮಹಿಳೆ ಶೇಷಗಿರಿ ವಿರುದ್ಧ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಈ ಪ್ರಕರಣದ ತನಿಖೆ ನಡೆಸಿದ ಪೊಲೀಸರಿಗೆ ಸಂತ್ರಸ್ತ ಮಹಿಳೆಯ ವೈದ್ಯಕೀಯ ಪರೀಕ್ಷೆಯಲ್ಲಿ ದೈಹಿಕ ಸಂಪರ್ಕ ನಡೆದಿಲ್ಲ ಎಂದು ವರದಿ ಬಂದಿತ್ತು. ಬಳಿಕ ಆರೋಪದ ಬಗ್ಗೆ ಯಾವುದೇ ಸಾಕ್ಷಿಗಳು ಕೂಡ ಇರಲಿಲ್ಲ. ಹೀಗಾಗಿ ಈ ಪ್ರಕರಣ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ್ದು, ಸಾಕ್ಷ್ಯಾಧಾರಗಳ ಕೊರತೆಯಿಂದ ಕೂಡಿದೆ ಎಂದು ಪೊಲೀಸರು ಬಿ-ರಿಪೋರ್ಟ್ ಸಲ್ಲಿಕೆ ಮಾಡಿದ್ದಾರೆ.

## ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಇಂದಿನಿಂದ 3 ದಿನಗಳ ಕಾಲ ಮಳೆ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಸೇರಿದಂತೆ ರಾಜ್ಯದ ಹಲವೆಡೆ ಇಂದಿನಿಂದ ಮೂರು ದಿನಗಳ ಕಾಲ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರಿನಲ್ಲಿಂದು ಸಾಧಾರಣದಿಂದ ಹಗುರ ಮಳೆಯಾಗಲಿದ್ದು, ಮೋಡ ಕವಿದ ವಾತಾವರಣ ಇರಲಿದೆ. ಮಧ್ಯಾಹ್ನ ಬಿಸಿಲಿನ ವಾತಾವರಣ ಇರಲಿದ್ದು, ಸಂಜೆ ವೇಳೆಗೆ ಹಗುರದಿಂದ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಹೊರತುಪಡಿಸಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ವಿಜಯಪುರ ಜಿಲ್ಲೆಗಳಲ್ಲೂ ಮಳೆಯಾಗಲಿದೆ.

## ಭಾರೀ ಅಗ್ನಿ ಅವಘಡ 40ಕ್ಕೂ ಹೆಚ್ಚು ಶೆಡ್‌ಗಳು ಬೆಂಕಿಗೆ ಆಹುತಿ

• ಉದಯವಾಹಿನಿ, ಬೆಂಗಳೂರು

ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿ ಕೂಲಿ ಕಾರ್ಮಿಕರು ವಾಸವಿದ್ದ 40ಕ್ಕೂ ಹೆಚ್ಚು ಶೆಡ್‌ಗಳು ಬೆಂಕಿಗೆ ಆಹುತಿಯಾದ ಘಟನೆ ವೀರಣ್ಣಪಾಳ್ಯದಲ್ಲಿ ನಡೆದಿದೆ. ವೀರನಪಾಳ್ಯ ಮುಖ್ಯ ರಸ್ತೆಯ ಖಾಸಗಿ ಶಾಲೆ ಪಕ್ಕದಲ್ಲಿ ಕೂಲಿ ಕಾರ್ಮಿಕರು ಸುಮಾರು 50 ಶೆಡ್ ನಿರ್ಮಿಸಿಕೊಂಡಿದ್ದರು. ಮೊದಲಿಗೆ ಒಂದು ಶೆಡ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು.

ಬಳಿಕ ಬೇರೆ ಶೆಡ್‌ಗಳಿಗೂ ಬೆಂಕಿ ತಗುಲಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಜನ ಹೊರಗೆ ಓಡಿ ಹೋಗಿದ್ದಾರೆ. ವಿಚಾರ ತಿಳಿದ ಬಳಿಕ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಗೋವಿಂದಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಹೈಕೋರ್ಟ್‌ಗೆ 2,300 ಪುಟಗಳ ಅಂತಿಮ ವರದಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ಭೋವಿ ನಿಗಮದಲ್ಲಿ ನಡೆದ ಅಕ್ರಮದ ತನಿಖೆ ಎದುರಿಸಿದ್ದ ವಕೀಲೆ ಹಾಗೂ ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 90 ದಿನಗಳ ಕಾಲ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡ 2,300 ಪುಟಗಳ ಅಂತಿಮ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದೆ.

ಕೋರ್ಟ್‌ಗೆ ಸಲ್ಲಿಸಿದ ಅಂತಿಮ ವರದಿಯಲ್ಲಿ ಮೃತ ಜೀವಾ ಡೆತ್ ನೋಟ್‌ನಲ್ಲಿದ್ದ ಬಹುತೇಕ ಆರೋಪಗಳು ಸಾಬೀತಾಗಿದೆ. ಅಲ್ಲದೇ ಡಿವೈಎಸ್‌ಪಿ ಕನಕಲಕ್ಷ್ಮಿ ಅವರು ಕಿರುಕುಳ ನೀಡಿರುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ ಇದೆಲ್ಲರ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ. ಅಲ್ಲದೇ ವಿಧಿವಿಜ್ಞಾನ ಪ್ರಯೋಗಾಲಯ ವರದಿ ಗಳು, ಮರಣೋತ್ತರ ಪರೀಕ್ಷಾ ವರದಿ, ಡೆತ್‌ನೋಟ್ ಫಾರೆನ್ಸಿಕ್ ರಿಪೋರ್ಟ್‌ಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಲು ಮೂವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿ ತಂಡವನ್ನ ರಚಿಸಲಾಗಿತ್ತು.

ಇದರಲ್ಲಿ ಸಿಸಿಬಿ ಡಿಸಿಪಿ ಹಕಾಯ್ ಅಕ್ಷಯ್ ಮಚೀಂದ್ರ, ಎಸ್ಪಿ ನಿಶಾ ಜೇಮ್ಸ್, ಸಿಬಿಐ ಎಸ್ಪಿ ವಿನಾಯಕ್ ವರ್ಮ ಅವರನ್ನೊಳಗೊಂಡ ಎಸ್‌ಐಟಿ ತಂಡ 90 ದಿನಗಳ ಕಾಲ ಸುದೀರ್ಘ ತನಿಖೆ ನಡೆಸಿತ್ತು. ಸದ್ಯ ತನಿಖೆ ಪೂರ್ಣಗೊಳಿಸಿರುವ ತಂಡ ಹೈಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸಿದೆ.

## ಬಿಬಿಎಂಪಿ ನೌಕರರಿಗೆ ಅಂಬೇಡ್ಕರ್ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂಬೇಡ್ಕರ್ ಜಯಂತಿ ಆಚರಿಸುತ್ತಿದ್ದು, ಬಿ.ಆರ್. ಅಂಬೇಡ್ಕರ್ ಸಮಾಜ ಸೇವಾ ರತ್ನ, ಬಿ.ಆರ್. ಅಂಬೇಡ್ಕರ್ ರತ್ನ ಮತ್ತು ಬಿ.ಆರ್. ಅಂಬೇಡ್ಕರ್ ಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದೆ. ನಗರದ ಪುರಭವನದಲ್ಲಿ ಏ. 15ರಂದು ನಡೆಯುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ, ಸಾಧಕ, ಸಾಧಕಿಯರು, ಮತ್ತು ಬಿಬಿಎಂಪಿ ಅಧಿಕಾರಿ, ನೌಕರರಿಗೆ ಅಂಬೇಡ್ಕರ್ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮಾಹಿತಿ ನೀಡಿದರು. ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದಿಕ್ಷೀತ್, ನ್ಯಾಯಮೂರ್ತಿ ಆರ್. ದೇವದಾಸ್, ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಭಾಗವಹಿಸಲಿದ್ದಾರೆ. ಜನಪದ ಗಾಯಕ ಗುರುರಾಜ್ ಹೊಸಕೋಟೆ, ತಂಡದವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ.

# ಪೇಟೆಗಳಲ್ಲಿ ಗೋವಿಂದ... ಗೋವಿಂದ... ನಾಮಸ್ಮರಣೆ

### ಬೆಂಗಳೂರು ನಗರದಲ್ಲಿ ಕರಗದ ಸಂಭ್ರಮ, ಸಡಗರ | ರಾತ್ರಿಯಿಡೀ ಉತ್ಸವದ ಮೆರುಗು | ಕರಗಕ್ಕೆ ಅಗತ್ಯ ಸಹಕಾರ: ಡಿಸಿಎಂ

• ಉದಯವಾಹಿನಿ, ಬೆಂಗಳೂರು

ಸಾವಿರಾರು ವೀರಕುಮಾರರ ಉದ್ಘೋಷ, ಭಕ್ತರ ಗೋವಿಂದ... ಗೋವಿಂದ... ನಾಮಸ್ಮರಣೆ, ಮಲ್ಲಿಗೆ ಹೂವಿನ ಸಮರ್ಪಣೆಯೊಂದಿಗೆ ಇತಿಹಾಸ ಪ್ರಸಿದ್ಧ ಬೆಂಗಳೂರು ಕರಗ ಸಂಭ್ರಮ, ಸಡಗರದಿಂದ ಶನಿವಾರ ತಡರಾತ್ರಿಯಿಂದ ಭಾನುವಾರ ನಸುಕಿನವರೆಗೆ ನಗರದ ಪೇಟೆಗಳ ಮುಖ್ಯರಸ್ತೆ, ಗಲ್ಲಿಗಳಲ್ಲಿ ಜರುಗಿತು. ಚೈತ್ರ ಪೌರ್ಣಮಿಯಾದ ಶನಿವಾರ, ಅರ್ಚಕ ಎ. ಜ್ಞಾನೇಂದ್ರ ಅವರು ಪೂರ್ವ ಪೂಜಾಕ್ರಮಗಳನ್ನು ಪೂರೈಸಿ, ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಬಂದರು.



ಹಸಿ ಕರಗವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿದ ನಂತರ ಮಲ್ಲಿಗೆ ಹೂವಿನಿಂದ ಅಲಂಕೃತಗೊಂಡಿದ್ದ ದ್ರೌಪದಿದೇವಿ ಕರಗ ಉತ್ಸವ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಶನಿವಾರ ತಡರಾತ್ರಿ ಹೊರಟಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರು ಧರ್ಮರಾಯಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಕರಗಕ್ಕೆ ಪುಷ್ಪಾರ್ಚನೆ ಮಾಡಿದರು.



### ಕರಗ ಉತ್ಸವಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ ಎಂಬ ಆರೋಪ

**ಕರಗ ಉತ್ಸವದ ಮುನ್ನ ಕಬ್ಬನ್ ಉದ್ಯಾನದಲ್ಲಿರುವ ಶನಿವಾರ ಮಧ್ಯಾಹ್ನ ಕರಗದ ಕುಂಟೆಯಲ್ಲಿ ಪೂಜೆ ಸಲ್ಲಿಸಲಾಯಿತು. ಎಲ್ಲರೂ ಉತ್ಸಾಹ ಸಡಗರದಿಂದ ಇದ್ದ ಈ ಸಂದರ್ಭದಲ್ಲೇ ಕರಗ ಉತ್ಸವಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ ಎಂಬ ಆರೋಪ ಕೇಳಿಬಂತು. ಕರಗದ ಉತ್ಸವದ ಅಂಗವಾಗಿ ಹೂವಿನ ಅಲಂಕಾರ ಸೇರಿದಂತೆ ಹಲವು ರೀತಿಯ ಸಿದ್ಧತೆಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ್ದೇವೆ. ಕೋಟ್ಯಂತರ ಹಣ ಮೀಸಲಿಡಲಾಗಿದೆ ಎಂದು ಹೇಳಲಾಗಿದ್ದರೂ ಇನ್ನೂ ಹಣ ಬಿಡುಗಡೆ ಮಾಡಿಲ್ಲ ಎಂದು ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್, ಕರಗದ ಪೂಜಾರಿ ಎ. ಜ್ಞಾನೇಂದ್ರ ದೂರಿದರು. ಶುಕ್ರವಾರ ಬೆಳಿಗ್ಗೆಯೇ 40 ಲಕ್ಷವನ್ನು ಜಿಲ್ಲಾಧಿಕಾರಿಯವರ ಖಾತೆಗೆ ವರ್ಗಾಯಿಸಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿತು.**

ದ್ರೌಪದಿದೇವಿ ಕರಗ ಶಕ್ತ್ಯೋತ್ಸವದ ಅಂಗವಾಗಿ ತಿಗಳರಪೇಟೆ, ನಗರ್ತರಪೇಟೆ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯ ಮುಖ್ಯರಸ್ತೆ ಹಾಗೂ ಗಲ್ಲಿಗಲ್ಲಿಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ಸಹಸ್ರಾರು ಸಂಖ್ಯೆಯಲ್ಲಿದ್ದ ವೀರಕುಮಾರರು ದೀಧಿತ್ತಿ... ಎಂಬ ಉದ್ಘಾರದೊಂದಿಗೆ ಕತ್ತಿಯನ್ನು ಎದೆಗೆ ಬಡಿಕೊಂಡು ನಮಸ್ಕರಿಸಿದರು.

ಗೋವಿಂದ... ಗೋವಿಂದಾ.. ಎಂಬ ಘೋಷಣೆ ಮೊಳಗುತ್ತಿದ್ದವು. ಭಕ್ತರು ಕರಗದ ಮೇಲೆ ಮಲ್ಲಿಗೆ ಹೂವನ್ನು ಚೆಲ್ಲಿ ಭಕ್ತಿಭಾವ ಮೆರೆದರು.

ಹಲವೆಡೆಗಲ್ಲಿಗಳಲ್ಲಿ, ಮನೆಯ ಮೇಲೆನಿಂತಿದ್ದ ನಾಗರಿಕರು ಅಲ್ಲಿಂದಲೇ ಮಲ್ಲಿಗೆಯನ್ನು ಎರಚಿ,



ಮಲ್ಲಿಗೆಯ ಅಭಿಷೇಕವನ್ನೂ ಮಾಡಿದರು. ನಗರ್ತಪೇಟೆ, ಸಿದ್ದಣ್ಣಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಿ, ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ ಪೂಜೆ ಸ್ವೀಕರಿಸಿತು. ಬಳೇಪೇಟೆ ಹಳೇ ಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಿತು. ಕರಗ ಉತ್ಸವ ಹೊರಟ ನಂತರ ಧರ್ಮರಾಯಸ್ವಾಮಿ ಮಹಾರಥೋತ್ಸವ ಮುಖ್ಯ ರಸ್ತೆಗಳಲ್ಲಿ ಸಾಗಿತು. ಭಕ್ತರು ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ಈ ರಥದ ಹಿಂದೆ ನಗರದ ಹಲವು ಭಾಗಗಳಿಂದ ಆಗಮಿಸಿದ್ದ ನೂರಾರು ತೇರು-ರಥಗಳು, ಪಲ್ಲಕ್ಕಿಗಳು ಸಾಗಿದವು.



**ನಮಗೆ ಯಾರು ಬಂದು ಅರ್ಜಿ ನೀಡಿದ್ದಾರೋ ಅವರಿಗೆ ನೆರವು ನೀಡಲಿದ್ದೇವೆ. ಇದಕ್ಕೆ ಬಿಬಿಎಂಪಿ ಬಜೆಟ್‌ನಲ್ಲೂ ಅನುದಾನ ಮೀಸಲಿಡಲಾಗಿದೆ. ಅವರು 2-3 ಭಾಗಗಳಾಗಿದ್ದಾರೆ. ಎಲ್ಲರೂ ಒಗ್ಗಟ್ಟಾಗಿ ಬಂದರೆ ಕರಗ ಉತ್ಸವಕ್ಕೆ ಮೊದಲಿನಿಂದಲೂ ಯಾವ ರೀತಿ ನೆರವು ನೀಡುತ್ತಿದ್ದೆವೋ ಅದನ್ನೇ ನೀಡುತ್ತೇವೆ. ನಾವು ಅನುದಾನ ನೀಡದಿದ್ದರೆ ನಮಗೆ ಆಹ್ವಾನ ಯಾಕೆ ನೀಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರಗ ಉತ್ಸವಕ್ಕೆ ಅನುದಾನ ನೀಡಿಲ್ಲ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದರು.**

## ಯಾರ ಹಕ್ಕು ಕಸಿಯುವ ಉದ್ದೇಶ ಇಲ್ಲ: ಡಾ.ಮಹದೇವಪ್ಪ

### ಎಲ್ಲರಿಗೂ ಅವಕಾಶಗಳು ಸಿಗಬೇಕು | ಆ ನಿಟ್ಟಿನಲ್ಲಿ ವೈಜ್ಞಾನಿಕ ಕ್ರಮದಲ್ಲಿ ಪ್ರಯತ್ನ

• ಉದಯವಾಹಿನಿ, ಬೆಂಗಳೂರು

**ಟೀಕೆ ಮಾಡಲು ಸಾಧ್ಯ?**

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿ ಆಧರಿಸಿ ಯಾರ ಹಕ್ಕುಗಳನ್ನೂ ಕಸಿಯುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಮೀಸಲಾತಿ ಪರಿಷ್ಕರಣೆ ಮಾಡಬೇಕು ಎಂದು ವರದಿಯಲ್ಲಿ ಶಿಫಾರಸು ನೀಡಿದರೆ ಅದನ್ನು ಅಧ್ಯಯನ ನಡೆಸಲಾಗುವುದು, ಸದ್ಯದ ಪರಿಸ್ಥಿತಿಯಲ್ಲಿ ಜನಸಂಖ್ಯೆ ಸ್ಫೋಟವಾಗುತ್ತಿದೆ. ಹೀಗಾಗಿ ಎಲ್ಲರಿಗೂ ಅವಕಾಶಗಳು ಸಿಗಬೇಕು. ಆ ನಿಟ್ಟಿನಲ್ಲಿ ವೈಜ್ಞಾನಿಕ ಕ್ರಮದಲ್ಲಿ ಪ್ರಯತ್ನ ನಡೆಸಲಾಗುತ್ತಿದೆ ಎಂದರು.

2015ರಲ್ಲಿ ಸುಮಾರು 200 ಕೋಟಿ ರೂ. ಖರ್ಚು ಮಾಡಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಲಾಗಿದೆ. ಅದರಲ್ಲಿ ಜಾತಿಯ ಮಾಹಿತಿಯನ್ನು ಸಂಗ್ರಹಿ ಸಲಾಗಿದೆ. ಸಮಾಜದ ಬದಲಾವಣೆ ಕುರಿತು ಈ ಸಮೀಕ್ಷೆ ನಡೆಸಿದ್ದು, ಅದನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಬದ್ಧವಾಗಿದೆ ಎಂದರು.ಕಾಂಗ್ರೇಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ದೇಶದಲ್ಲಿ ಜಾತಿ ಜನಗಣತಿ ಆಗಬೇಕೆಂದು ಹೇಳಿತ್ತು. ಭಾರತದ ಜನಗಣತಿಯಲ್ಲಿ ಜಾತಿ ಮಾಹಿತಿ ಸಂಗ್ರ ಹಿಸಲು ಪ್ರಯತ್ನಗಳಾಗಿತ್ತು.



ಅದನ್ನು ಪಟ್ಟಭದ್ರ ಹಿತಾಸಕ್ತಿಗಳು ಎಂದು ಆರೋಪಿಸಿದ್ದರು. ಎಸ್‌ಸಿ, ಎಸ್‌ಟಿಗೆ ರಾಜ್ಯಾಂಗ ಬದ್ಧವಾಗಿ ಮೀಸಲಾತಿ ಇದೆ. ಪ್ರವರ್ಗಗಳಿಗೆ ಮೀಸಲಾತಿ ನೀಡುವ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿ ಜನಗಣತಿಯಾಗಿತ್ತು. ಸ್ವಾತಂತ್ರ್ಯ ಬಂದ ನಂತರ ದೇಶದ ಜನಸಂಖ್ಯೆ 35 ಕೋಟಿ ಇತ್ತು. ಈಗ 140 ಕೋಟಿಯಾಗಿದೆ. ಅದಕ್ಕೆ ಅನುಗುಣವಾಗಿ ಅಸಮಾನತೆಯನ್ನು ತೊಡೆದುಹಾಕಿ ಸಮಸಮಾಜ ನಿರ್ಮಾಣ ಮಾಡಲು ಈ ರೀತಿಯ ಅಧ್ಯಯನ ಅಗತ್ಯವಿತ್ತು ಎಂದರು. ಕೇಂದ್ರ, ರಾಜ್ಯಸರ್ಕಾರಗಳು ಹಿಂದುಳಿದ ಸಮುದಾಯಗಳ ಸುಧಾರಣೆಗಾಗಿ ಅಗತ್ಯ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಹಿಂದುಳಿದ ವರ್ಗಗಳ ವರದಿ ಯಾರ ಪರ ಅಥವಾ ವಿರುದ್ಧವೂ ಇಲ್ಲ. ವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಲಾಗಿದೆ. ಇದು ಅತ್ಯಂತ ಪ್ರಗತಿಪರವಾದ ವರದಿ ಆಯೋಗದ ವರದಿಯಲ್ಲಿ ಹಲವಾರು ಶಿಫಾರಸುಗಳನ್ನು ನೀಡಲಾಗಿದೆ. ಜನಸಂಖ್ಯೆ ಹೆಚ್ಚಳ, ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಯಲಿದೆ ಎಂದು ಹೇಳಿದರು. ಇದೇ 11 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯ ಕುರಿತು ಸಮಗ್ರ ಚರ್ಚೆ ನಡೆಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಕೆಲ ಸಮುದಾಯಗಳು ವಿರೋಧ ವ್ಯಕ್ತಪಡಿಸುತ್ತಿವೆ. ಮರು ಸಮೀಕ್ಷೆಯ ಆಗ್ರಹ ಮಾಡುತ್ತಿವೆ. ಇದೆಲ್ಲವನ್ನೂ ಸರ್ಕಾರ ಪರಿಶೀಲಿಸಲಿದೆ. ಬಿಜೆಪಿ ಟೀಕೆ ಮಾಡುವುದು ಸಹಜ. ಆ ಪಕ್ಷ ಸಾಮಾ ಜಿಕ ನ್ಯಾಯಕ್ಕೆ ಬದ್ಧ ವಾಗಿಲ್ಲ, ಈ ಹಿಂದೆ ಮಂಡಲ ವರದಿ ಜಾರಿಯಾದಾಗ ಕಮಂಡಲ ಹಿಡಿದು ಯಾತ್ರೆ ನಡೆಸಿದರು. ಹೀಗಾಗಿ ಬಿಜೆಪಿ ವರದಿ ಟೀಕೆ ರಾಜಕೀಯ ಪ್ರೇರಿತ ಎಂದು ತಿಳಿಸಿದರು. ದೇಶದಲ್ಲಿ ಸಾವಿರಾರು ಜಾತಿಗಳಿವೆ. ಎಲ್ಲರಿಗೂ ಸಂಪತ್ತಿನ ಸಮಾನ ಹಂಚಿಕೆಯಾಗಿದೆಯೇ?, ಸಾರ್ವಜನಿಕ ಜೀವನದಲ್ಲಿರುವವರು ಸಮಸಮಾಜದ ಬಗ್ಗೆ ಯೋಚಿಸಬೇಕೇ ಹೊರತು ಟೀಕೆ ಮಾಡುವುದನ್ನೇ ವೃತ್ತಿ ಮಾಡಿಕೊಳ್ಳಬಾರದು ಎಂದರು. ತಮ್ಮ ನೇತೃತ್ವದಲ್ಲಿ ಸಚಿವ ಸಂಪುಟ ಉಪಸಮಿತಿ ರಚನೆಯಾಗುವ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿದರು.

**ಈ ವರದಿಗೂ, ರಾಜಕೀಯಕ್ಕೂ ಸಂಬಂಧ ಇಲ್ಲ. ವಿಜ್ಞಾನವನ್ನೇ ತಿಳಿಯದೆ ಕೆಲವರು ಅವೈಜ್ಞಾನಿಕ ಎಂದು ಟೀಕೆ ಮಾಡುತ್ತಿದ್ದಾರೆ. ಅವರು ಇನ್ನೂ ವರದಿ ನೋಡಿಲ್ಲ. ಹಾಗಿದ್ದರೂ ಹೇಗೆ ಟೀಕೆ ಮಾಡಲು ಸಾಧ್ಯ?, ಈ ವರದಿ ಆಧರಿಸಿ ಯಾರ ಹಕ್ಕುಗಳನ್ನೂ ಕಸಿಯುವುದಿಲ್ಲ, ಮತ್ತಿನ್ಯಾರಿಗೋ ಹಕ್ಕು ನೀಡುವ ಉದ್ದೇಶವೂ ಇಲ್ಲ. ಒಬ್ಬರನ್ನು ಹಿಂದಿಡುವುದು, ಮತ್ತೊಬ್ಬರನ್ನು ಮುಂದೆ ತರುವ ಆಲೋಚನೆಗಳೂ ಇಲ್ಲ, ತುಂಬಿ ತುಳುಕುತ್ತಿದ್ದರೆ ಮಾತ್ರ ಅವರಿಂದ ಕಿತ್ತು ಇಲ್ಲದವರಿಗೆ ಸೌಲಭ್ಯ ಕೊಡಬಹುದು. ಸದ್ಯಕ್ಕೆ ಆ ಪ್ರಶ್ನೆ ಉದ್ಭವಿಸುವುದಿಲ್ಲ**

**- ಡಾ.ಎಚ್.ಸಿ.ಮಹದೇವಪ್ಪ**
**ಸಮಾಜ ಕಲ್ಯಾಣ ಸಚಿವ**

## ಪತ್ನಿ ಆತ್ಮಹತ್ಯೆ; ಹಳೇ ಲವರ್ ಜೊತೆಗಿದ್ದ ಅಕ್ರಮ ಸಂಬಂಧದ ಬಗ್ಗೆ ಒಪ್ಪಿಕೊಂಡ ಟೆಕ್ಕಿ ಪತಿ

• ಉದಯವಾಹಿನಿ, ಬೆಂಗಳೂರು



ಹಳೇ ಪ್ರಿಯತಮೆಯೊಂದಿಗೆ ಅಕ್ರಮ ಸಂಬಂಧವೇ ತನ್ನ ಪತ್ನಿ ಆತ್ಮತ್ಯೆಗೆ ಕಾರಣ ಎಂದು ಟೆಕ್ಕಿ ಬಶೀರ್ ಉಲ್ಲಾ ಕೊನೆಗೂ ಪೊಲೀಸರ ಎದುರು ಸತ್ಯ ಒಪ್ಪಿಕೊಂಡಿದ್ದಾರೆ. ಹೌದು. ಇತ್ತೀಚೆಗಷ್ಟೇ ತನ್ನ ಪತಿ ಅಕ್ರಮ ಸಂಬಂಧ ಹೊಂದಿರುವುದಾಗಿ ಆರೋಪಿಸಿ ಗೃಹಿಣಿ ಬಾಹರ್ ಅಸ್ಮಾ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಮಹಿಳೆಯ ಪೋಷಕರು ಟೆಕ್ಕಿ ಪತಿ ಬಶೀರ್ ಉಲ್ಲಾ ಮಗಳನ್ನ ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸುತ್ತಿದ್ದಾನೆಂದು ಆರೋಪಿಸಿದ್ದರು. ಪೊಲೀಸರು, ಟೆಕ್ಕಿ ಬಶೀರ್ ಉಲ್ಲಾ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಿಕೊಂಡು ಬಂಧನ ಮಾಡಿ ತನಿಖೆಗೆ ಒಳಪಡಿಸಿದ್ದರು. ಅಸ್ಮಾ ಸೂಸೈಡ್‌ಗೆ ಪ್ರೇರಣೆ ನೀಡಿದ್ದ ಆರೋಪದ ಮೇಲೆ ಆರೋಪಿ ಟೆಕ್ಕಿ ಬಶೀರ್ ಉಲ್ಲಾನನ್ನ ವಿಚಾರಣೆ ಮಾಡಿದಾಗ ಮಾಜಿ ಪ್ರಿಯತಮೆಯೊಂದಿಗೆ ಅಕ್ರಮ ಸಂಬಂಧ ಇದ್ದ ಬಗ್ಗೆ ಪೊಲೀಸರ ಮುಂದೆ ಒಪ್ಪಿಕೊಂಡಿದ್ದಾನೆ.

ನನಗೆ ಅಕ್ರಮ ಸಂಬಂಧ ಇತ್ತು. ಅದನ್ನು ಅವಳಿಗೆ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ ನಿತ್ಯ ನನ್ನ ಜೊತೆ ಗಲಾಟೆಗೆ ಮುಂದಾಗುತ್ತಾ ಇದ್ದಳು. ಆಕೆಯ ಗಲಾಟೆಗೆ ನಾನು ಕೇರ್ ಮಾಡದೇ ಇದ್ದುದ್ದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿ ಟೆಕ್ಕಿ ಬಶೀರ್ ಉಲ್ಲಾ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಆರೋಪಿ ಬಶೀರ್‌ಗೆ ಕಾಲೇಜು ದಿನಗಳಲ್ಲಿದ್ದ ಪ್ರಿಯತಮೆಗೆ ಮದುವೆ ಆಗಿದ ಬಳಿಕ ಸಂಪರ್ಕ ತಪ್ಪಿ ಹೋಗಿತ್ತು. ಆರೋಪಿ ಟೆಕ್ಕಿಗೆ ಮದುವೆ ಆದ ಬಳಿಕ ಪುನಃ ಮಾಜಿ ಪ್ರಿಯತಮೆಯ ಸಂಪರ್ಕಕ್ಕೆ ಸಿಕ್ಕಿದ್ದಳು. ಅಂದಿನಿಂದ ಹೆಂಡತಿಯನ್ನ ಕಡೆಗಣಿಸಿ ಆಕೆಯ ಜೊತೆ ಸಂಬಂಧ ಬೆಳೆಸಿಕೊಂಡಿದ್ದ ಬಗ್ಗೆ ಆರೋಪಿ ಹೆಬ್ಬಾಳ ಪೊಲೀಸರ ಮುಂದೆ ಬಾಯಿಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.

# ತಪಾಸಣೆ ತಪ್ಪಿಸಿಕೊಳ್ಳಲು ಡ್ರಗ್ ಪೆಡ್ಲರ್‌ಗಳಿಂದ ಕೊರಿಯರ್ ಏಜೆನ್ಸಿ ಬಳಕೆ

### ದಕ್ಷಿಣ ಆಫ್ರಿಕಾದ ಇಬ್ಬರು ಮಹಿಳೆಯರನ್ನು ಬಂಧಿಸಿ 75 ಕೋಟಿ ರೂ. ಮೌಲ್ಯದ 37.878 ಕೆಜಿ ಎಂಡಿಎಂಎ ವಶ

• ಉದಯವಾಹಿನಿ, ಬೆಂಗಳೂರು

ದಿನ ಕಳೆದಂತೆ ಮಾದಕ ವಸ್ತು ಮಾರಾಟ ಕಠಿಣವಾಗುತ್ತಿದ್ದಂತೆ, ಕಳ್ಳಸಾಗಣೆದಾರರು ಈಗ ಕೊರಿಯರ್ ಏಜೆನ್ಸಿಗಳೊಂದಿಗೆ ಶಾಮೀಲಾಗುತ್ತಿದ್ದಾರೆ, ವಿಶೇಷವಾಗಿ ಬೆಂಗಳೂರು, ಮಂಗಳೂರಿನಲ್ಲಿ ವಿಮಾನ ನಿಲ್ದಾಣಗಳಲ್ಲಿ ಎಲ್ಲಾ ಭದ್ರತಾ ತಪಾಸಣೆಗಳನ್ನು ತಪ್ಪಿಸಿ, ಮಾದಕ ವಸ್ತು ಸಾಗಣೆಗೆ ಕನಿಷ್ಠ 1 ಲಕ್ಷ ರೂ. ಪಾವತಿಸುತ್ತಿದ್ದಾರೆ.

ತಮ್ಮ ಜಾಡುಗಳನ್ನು ಮರೆಮಾಡಲು, ಕಿಂಗ್‌ಪಿನ್‌ಗಳು ಮಾದಕ ವಸ್ತುಗಳೊಂದಿಗೆ ವಿಭಿನ್ನ ಮಾನವ ಕೊರಿಯರ್‌ಗಳನ್ನು ಕಳು ಹಿಸುತ್ತಾರೆ, ಯಾರೂ ಅವರನ್ನು ಅನು ಮಾನಿಸದಂತೆ ನೋಡಿಕೊಳ್ಳುತ್ತಾರೆ. ವಿಮಾನ ನಿಲ್ದಾಣದ ಭದ್ರತಾ ತಪಾಸಣೆಗಳು ಗುಪ್ತ ಚರವನ್ನು ಆಧರಿಸಿರುವುದರಿಂದ ಮತ್ತು ಕೊರಿಯರ್ ಸೇವೆಗಳು ಪತ್ತೆಹಚ್ಚುವಿಕೆಯನ್ನು ತಪ್ಪಿಸುವ ರೀತಿಯಲ್ಲಿ ಮಾದಕ ವಸ್ತುಗಳ ಪ್ಯಾಕೇಜಿಂಗ್‌ನ್ನು ಮಾಡಲಾಗುತ್ತಿರುವುದರಿಂದ ಈ ಯೋಜನೆ ಪರಿಣಾಮಕಾರಿಯಾಗಿದೆ ಎಂದು ಕೇಂದ್ರ ಅಪರಾಧ ಶಾಖೆಯ (ಸಿಸಿಬಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸೈಬರ್ ವಂಚಕರಂತೆ ಈ ಕಳ್ಳಸಾಗಣೆದಾರರು ಸುಸಂಘಟಿತ ಶ್ರೇಣಿಯನ್ನು ಸ್ಥಾಪಿಸಿದ್ದಾರೆ ಎಂದು ಬೆಂಗಳೂರು, ಮಂಗಳೂರಿನ ಸಿಸಿಬಿಯ ಮಾದಕ ವಸ್ತು ವಿರೋಧಿ ವಿಭಾಗಗಳ ಪತ್ತೆದಾರರು ಟಿಎನ್‌ಐಇಗೆ ತಿಳಿಸಿದ್ದಾರೆ.


**ಮಾದಕ ದ್ರವ್ಯ ಸಾಗಣೆಯನ್ನು ವಶ**

**ಜನನಿಬಿಡ ನಗರಗಳಿಂದ ಪಡೆಯುವ ಮಾದಕ ವಸ್ತುಗಳು:** ಸಿಸಿಬಿ ದೆಹಲಿಯಲ್ಲಿ ಹೆಚ್ಚಾಗಿ ಉತ್ಪಾದಿಸಲಾಗುವ ಮಾದಕ ವಸ್ತುವನ್ನು ವಿಮಾನ ನಿಲ್ದಾಣಗಳಲ್ಲಿ ಸುಗಮ ಸಾಗಣೆಯನ್ನು ಖಚಿತಪಡಿಸಿಕೊಳ್ಳಲು ಈ ಕೊರಿಯರ್ ಮಾರ್ಗಗಳ ಮೂಲಕ ಇತರ ನಗರಗಳಿಗೆ ಕಳ್ಳಸಾಗಣೆ ಮಾಡಲಾಗುತ್ತದೆ. ಪೊಲೀಸರ ಪ್ರಕಾರ, ಮಂಗಳೂರಿನ ಸಿಸಿಬಿ ರಾಜ್ಯದಲ್ಲಿ ಇದುವರೆಗೆ ನಡೆದ ಅತಿದೊಡ್ಡ ಮಾದಕವಸ್ತು ಜಾಲವನ್ನು ಭೇದಿಸಿದ ನಂತರ ಈ ಅನಾಮಧೇಯ ಮಾದರಿ ಇತ್ತೀಚೆಗೆ ಬೆಳಕಿಗೆ ಬಂದಿತು, ಇದು ದಕ್ಷಿಣ ಆಫ್ರಿಕಾದ ಇಬ್ಬರು ಮಹಿಳೆಯರನ್ನು ಬಂಧಿಸಿ 75 ಕೋಟಿ ರೂ. ಮೌಲ್ಯದ 37.878 ಕೆಜಿ ಎಂಡಿಎಂಎ ವಶಪಡಿಸಿಕೊಂಡಿತು.

ಹಿರಿಯ ಸಿಸಿಬಿ ಅಧಿಕಾರಿಯೊಬ್ಬರು, ದಟ್ಟವಾದ ಜನನಿಬಿಡ, ಸ್ಥಳೀಯ ತನಿಖಾಧಿಕಾರಿಗಳಿಗೆ ಭೌಗೋಳಿಕವಾಗಿ ಪರಿಚಯವಿಲ್ಲದ ನಗರಗಳಿಂದ ಮಾದಕವಸ್ತುಗಳನ್ನು ಪಡೆಯಲಾಗುತ್ತದೆ, ಇದರಿಂದಾಗಿ ಅವುಗಳ ಮೂಲವನ್ನು ಪತ್ತೆಹಚ್ಚುವುದು ಕಷ್ಟವಾಗುತ್ತದೆ. ಅಂತಹ ನಗರಗಳು ದೂರದಲ್ಲಿವೆ ಮತ್ತು ಅಂತಿಮ ಬಿಂದುಗಳನ್ನು ತನಿಖೆ ಮಾಡುವ ತಂಡಗಳಿಗೆ ತಿಳಿದಿಲ್ಲ, ಇದು ಪೂರೈಕೆ ಸರಪಳಿಯನ್ನು ಪತ್ತೆಹಚ್ಚುವುದನ್ನು ಸವಾಲಿನ ಕೆಲಸವನ್ನಾಗಿ ಮಾಡುತ್ತದೆ ಎಂದು ಅಧಿಕಾರಿ ಹೇಳಿದರು. ಕೊರಿಯರ್‌ಗಳು, ಸಬ್-ಪೆಡ್ಲರ್‌ಗಳು ಮತ್ತು ಪೆಡ್ಲರ್‌ಗಳನ್ನು ಒಳಗೊಂಡ ವಿವಿಧ ಹಂತಗಳ ಮೂಲಕ ಮಾದಕವಸ್ತುಗಳನ್ನು ಕಳ್ಳಸಾಗಣೆ ಮಾಡಲಾಗುತ್ತದೆ - ಅವರಲ್ಲಿ ಯಾರಿಗೂ ಪರಸ್ಪರ ತಿಳಿದಿಲ್ಲ ಎಂದು ಅವರು ಹೇಳಿದರು.

**ಮಾದಕ ವಸ್ತು ಸಾಗಣೆಗೆ ಹೊಸ ಮಾರ್ಗ**

ಪ್ರತಿಯೊಂದು ಪದರವು ನಿರ್ದಿಷ್ಟ ಪ್ರಮಾಣದ ಔಷಧಿಗಳನ್ನು ನಿರ್ವಹಿಸುವುದು ಕಂಡುಬರುತ್ತದೆ. ಮೊದಲ ಪದರವು ಕೆಲವು ಗ್ರಾಂಗಳನ್ನು ಮಾತ್ರ ಹೊಂದಿರುತ್ತದೆ, ಆದರೆ ನಾಲ್ಕನೇ ಪದರವು ಹಲವಾರು ಕೆಜಿ ಔಷಧಿಗಳನ್ನು ಹೊಂದಿರುತ್ತದೆ ಎಂದು ಅಧಿಕಾರಿ ಹೇಳಿದರು. ಮಂಗಳೂರು ಮುಂತಾದ ನಗರಗಳಿಗೆ, ಕೇರಳದ ಕಾಸರಗೋಡಿನಂತಹ ಗಡಿ ಪ್ರದೇಶಗಳಿಗೆ ಮಾದಕ ದ್ರವ್ಯಗಳನ್ನು ಕಳುಹಿಸಲಾಗುತ್ತದೆ, ಆದರೆ ಉಪ-ಮಾರಾಟಗಾರರು ತಮ್ಮ ಪ್ರದೇಶಗಳಲ್ಲಿ ವಿತರಣೆಗಾಗಿ ಸಣ್ಣ ಪ್ರಮಾಣದಲ್ಲಿ, ಕೆಲವೇ ಗ್ರಾಂಗಳನ್ನು ಮಾತ್ರ ನಿರ್ವಹಿಸುತ್ತಾರೆ. ಬೆಂಗಳೂರು, ಗೋವಾ, ಚೆನ್ನೈನಂತಹ ದೊಡ್ಡ ನಗರಗಳಿಗೆ ಹೆಚ್ಚಿನ ಪ್ರಮಾಣದ ಮಾದಕ ದ್ರವ್ಯಗಳನ್ನು ಕಳುಹಿಸಲಾಗುತ್ತದೆ, ಇದು ತನಿಖೆ ಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತದೆ, ಸರಪಳಿಯನ್ನು ಮುರಿಯುತ್ತದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರತಿ ಬಾರಿ ಅವರು ಮಾದಕ ದ್ರವ್ಯ ಸಾಗಣೆಯನ್ನು ವಶಪಡಿಸಿಕೊಂಡಾಗ, ಅವರು ಫೋನ್ ಕರೆಗಳು, ಸಾಮಾಜಿಕ ಮಾಧ್ಯಮ ಸಂದೇಶಗಳು, ಬ್ಯಾಂಕ್ ವಹಿವಾಟುಗ ಳಂತಹ ಡಿಜಿಟಲ್ ಹೆಜ್ಜೆ ಗುರುತುಗಳ ಜಾಡನ್ನು ಬಹಿರಂಗಪಡಿಸಿದರು.



**ನಿಜವಾದ ಸವಾಲು ಎಂದರೆ ಸಾವಿರಾರು ವಿದೇಶಿ ಪ್ರಜೆಗಳು ಭಾರತೀಯ ಹೆಸರುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ, ಎಂದು ಅಧಿಕಾರಿಯೊಬ್ಬರು ಹೇಳಿದರು, ಈ ಸುಳ್ಳು ಗುರುತುಗಳು, ಎನ್‌ಕ್ರಿಪ್ಟ್ ಮಾಡಲಾದ ಸಂವಹನವು ತನಿಖಾಧಿಕಾರಿಗಳಿಗೆ ಕಾರ್ಯಾಚರಣೆಗಳ ಹಿಂದೆ ಇರುವವರನ್ನು ಪತ್ತೆಹಚ್ಚಲು ಅಸಾಧ್ಯವಾಗಿಸುತ್ತದೆ ಎಂದು ಹೇಳಿದರು.**

ಆದಾಗ್ಯೂ, ಫೋನ್ ಸಂಖ್ಯೆಗಳನ್ನು ನಕಲಿ ಗುರುತುಗಳ ಅಡಿಯಲ್ಲಿ ನೋಂದಾಯಿಸಲಾಗಿದೆ, ವಹಿವಾಟುಗಳನ್ನು ಮ್ಯೂಲ್ ಖಾತೆಗಳ ಮೂಲಕ ಮಾಡಲಾಗುತ್ತದೆ, ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು. ಇದಲ್ಲದೆ, ಎಲ್ಲಾ ಸಂವಹನ ಗಳನ್ನು ಕಣ್ಮರೆಯಾಗುವ ಮೋಡ್‌ನಲ್ಲಿ ಕಳುಹಿಸಲಾಗುತ್ತದೆ, ಸ್ವಲ್ಪ ಸಮಯದ ನಂತರ ಸಂಭಾಷಣೆಗಳು ಕಣ್ಮರೆಯಾಗುತ್ತವೆ. ಉದಾಹರಣೆಗೆ, ಒಂದು ಪ್ರಕರಣದಲ್ಲಿ ಸಂಪರ್ಕಗಳಿಗೆ ಬಳಸಲಾದ ಹೆಸರುಗಳು ಐ ಲವ್ ಗಾಡ್, ಮೊಗಾಂಬೊ, ಆಪಲ್ ಪೈ ನಂತಹ ಅಲಿಯಾಸ್‌ಗಳಾಗಿವೆ - ತನಿಖಾಧಿಕಾರಿಗಳನ್ನು ಗೊಂದಲಕ್ಕೀಡು ಮಾಡಿದೆ ಎಂದು ಅಧಿಕಾರಿ ಹೇಳಿದರು.

# ಸಾಹಿತಿ ವಿಎಚ್‌ಆರ್‌ಅವರ ಕಾವ್ಯ ಕನ್ನಿಕೆ ಕೃತಿ ಲೋಕಾರ್ಪಣೆ

## ಉತ್ತಮ ಸಂದೇಶಗಳನ್ನು ಸಾಹಿತ್ಯ ಕೃತಿಯ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದಾಗ ಸಾಹಿತಿಯು ಓದುಗರ ಮನಸಿನಲ್ಲಿ ಉತ್ತಮ ಸ್ಥಾನ

• **ಉದಯವಾಹಿನಿ, ರಾಮನಗರ**

ಸ್ವಾಸ್ಥ್ಯ ಸಮಾಜಕ್ಕೆ ಬೇಕಾದ ಉತ್ತಮ ಸಂದೇಶಗಳನ್ನು ಸಾಹಿತ್ಯ ಕೃತಿಯ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದಾಗ ಅಂತಹ ಸಾಹಿತಿಯು ಓದುಗರ ಮನಸಿನಲ್ಲಿ ಉತ್ತಮ ಸ್ಥಾನವನ್ನು ಗಳಿಸುತ್ತಾರೆ ಎಂದು ಚನ್ನಪಟ್ಟಣ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಉಷಾಮಾಲಿನಿ ಅಭಿಪ್ರಾಯಪಟ್ಟರು.

ನಗರದ ಶಾಂತಿನಿಕೇತನ ಸಮೂಹ ಸಂಸ್ಥೆಗಳ ಆವರಣದಲ್ಲಿ ತನ್ನಯ್ ಹೆಮ್ಮಾದ್ರಿ ಸಿರಿ ಸಾಂಸ್ಕೃತಿಕ ಸಾಮಾಜಿಕ ವೇದಿಕೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರಾಧ್ಯಾಪಕ, ಸಾಹಿತಿ ವಿ.ಎಚ್.ರಾಜಶೇಖರ್ ಅವರ ಕಾವ್ಯಕನ್ನಿಕೆ ಕೃತಿ ಬಿಡುಗಡೆ ಮತ್ತು ಚಿಗುರಿದಮನ, ಮನದ ಪಾಡು ಕೃತಿಗಳ ಮರುಮುದ್ರಣ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಉತ್ತಮ ಸಮಾಜ ನಿರ್ಮಾಣಕ್ಕೆ ಬೇಕಾದ ಸಂದೇಶಗಳನ್ನು ತಮ್ಮ ಕವನಗಳು ಮತ್ತು ಲೇಖನಗಳ ಮೂಲಕ ಓದುಗರಿಗೆ ನೀಡುತ್ತಿರುವ ಸಾಹಿತಿ ರಾಜಶೇಖರ್ ಅವರು ವಿದ್ಯಾರ್ಥಿಗಳಿಗೆ ಮಾದರಿಯ ಪ್ರಾಧ್ಯಾಪಕರಾಗಿದ್ದಾರೆ, ಅವರ ನಿರಂತರ ಅಧ್ಯಯನ ಪ್ರೌವೃತ್ತಿಯು ಸಹಾ ವಿದ್ಯಾರ್ಥಿಗಳಿಗೆ ಮಾರ್ಗ ದರ್ಶಿಯಾಗಿದೆ. ಅವರು ವೃತ್ತಿ ಬದುಕಿನುದ್ದಕ್ಕೂ ಅತ್ಯುತ್ತಮ ಸಾಹಿತ್ಯ ರಚಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮ ಉದ್ಘಾಟಿಸಿದ ಶಾಂತಿ ನಿಕೇತನ ಸಮೂಹ ಸಂಸ್ಥೆಗಳ ಸಂಸ್ಥಾಪಕ ಆರ್. ಕುಮಾರಸ್ವಾಮಿ ಮಾತನಾಡಿ, ಯಾವುದೇ ಒಂದು ಕೃತಿ ಎರಡನೆ ಮುದ್ರಣ ಕಾಣುತ್ತಿದೆ ಎನ್ನುವುದು ಕೃತಿಗೆ ಇರುವ ಮೌಲ್ಯವನ್ನು ತೋರಿಸುತ್ತದೆ. ಇಂತಹ ಕೃತಿಗಳನ್ನು ಇಂದಿನ ಯುವ ಸಮುದಾಯ ಅಧ್ಯಯನ ಮಾಡಬೇಕು ಎಂದರು.



ಉದಯವಾಹಿನಿ ಚಿತ್ರ

**ಪುಸ್ತಕಗಳನ್ನು ಓದುವ ಅಭ್ಯಾಸ**

**ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಶಾಲೆಯೂ ಸದಾ ಪ್ರೋತ್ಸಾಹ ನೀಡುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ಸಾಹಿತ್ಯದಲ್ಲಿ ಅಭಿರುಚಿ ಮೂಡಿಸುವ ಉದ್ದೇಶದಿಂದ ಉತ್ತಮ ಸಾಹಿತ್ಯ ಕೃತಿಗಳು ರಚನೆಯಾಗಬೇಕು. ವಿದ್ಯಾರ್ಥಿಗಳು ಸಹಾ ಉತ್ತಮ ಪುಸ್ತಕಗಳನ್ನು ಓದುವ ಅಭ್ಯಾಸ ಮಾಡಿಕೊಂಡು ಪ್ರಬುದ್ದತೆ ಹೆಚ್ಚಿಸಿಕೊಳ್ಳಬೇಕೆಂದು ಸಲಹೆ ನೀಡಿದರು.**

ಕಾವ್ಯ ಕನ್ನಿಕೆ ಕೃತಿ ಬಿಡುಗಡೆ ಮಾಡಿದ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಕೆ.ಸತೀಶ್ ಮಾತನಾಡಿ, ಪುಸ್ತಕ ಅಭಿರುಚಿ ಕಡಿಮೆಯಾಗುತ್ತಿರುವ ದಿನಗಳಲ್ಲಿ, ಸಾಹಿತ್ಯ ಕಾಲೇಜು ವಿದ್ಯಾರ್ಥಿಗಳಿಗೆ ತಲುವಂತೆ ಮಾಡಬೇಕಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯ ಉಳಿಯಬೇಕಾದರೆ ಪ್ರತಿಯೊಬ್ಬರು ಓದಿನಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ಮನದ ಪಾಡು ಕೃತಿ ಬಿಡುಗಡೆ ಮಾಡಿದ ಸರ್ಕಾರಿ ನೌಕರ ಸಂಘದ ಮಾಜಿ ಅಧ್ಯಕ್ಷ ಆರ್.ಕೆ.ಬೈರಲಿಂಗಯ್ಯ ಮಾತನಾಡಿ, ದಿನದಿಂದ ಸಾಹಿತ್ಯ ಕ್ಷೇತ್ರದಲ್ಲಿ ಜನ ಸಾಮಾನ್ಯರಿಗೆ ಆಸಕ್ತಿ ಕಡಿಮೆಯಾಗುತ್ತಿದ್ದು, ಸಾಹಿತ್ಯ ಕಾರ್ಯಕ್ರಮಗಳಿಗೆ ಶಾಲಾ ಕಾಲೇಜುಗಳ ಆಶ್ರಯ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ.

**ಜೀವನಾನುಭವವನ್ನು ಸತ್ವದಯ ಓದುಗರಿಗೆ ತಲುಪಿಸುವುದೆ ಕಾವ್ಯದ ಗುಣ. ಹೊರಗಣ್ಣಿನಿಂದ ನೋಡಿದ ವಿಚಾರವನ್ನು ಒಳಗಣ್ಣಿನಿಂದ ದರ್ಶಿಸಿ ಅಭಿವ್ಯಕ್ತಿಸಿದಾಗ ಕಾವ್ಯದ ಮೌಲ್ಯ ಹೆಚ್ಚಾಗುತ್ತದೆ. ಇಂತಹ ಮೌಲ್ಯಯುತ ಕವನಗಳ ಮೂಲಕ ಸಾಹಿತಿ ರಾಜಶೇಖರ್ ಅವರು ಓದುಗರ ಮನ ತಲುಪಿದ್ದಾರೆ**

**- ಜಿ.ಶಿವಣ್ಣ, ಉಪನ್ಯಾಸಕ**

ಇದೀಗ ಬರಹಗಳಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳೆದ್ದರೂ ಮುದ್ರಣದ ದುಬಾರಿ ವೆಚ್ಚವು ಪುಸ್ತಕ ಮುದ್ರಿಸುವ ಆಸಕ್ತಿಯನ್ನು ಕುಂದಿಸುತ್ತಿದೆ.

ಇಂತಹ ಸಂದರ್ಭದಲ್ಲಿ ಹಣವುಳ್ಳವರು ಸಹಾಯ ಹಸ್ತ ನೀಡಬೇಕಾಗಿದೆ ಕಿವಿಮಾತು ಹೇಳಿದರು. ಕಾವ್ಯ ಕನ್ನಿಕೆ ಕೃತಿ ಕುರಿತು ಸಾಹಿತಿ ಪುಟ್ಟಸ್ವಾಮಿಗೌಡ ಮಾತನಾಡಿ, ಮೊಬೈಲ್, ಸಾಮಾಜಿಕ ಜಾಲ ತಾಣಗಳ ಹಾವಳಿಯಿಂದ ಸಾಹಿತ್ಯದ ಅಭಿರುಚಿ ಕಡಿಮೆಯಾಗುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಹಿತಿ ರಾಜಶೇಖರ್ ಅವರು ತಮ್ಮ ಒಂಭತ್ತು ಕೃತಿ ಹೊರತರುವ ಮೂಲಕ ಸಮಾಜದಲ್ಲಿನ ಆಗು ಹೋಗುಗಳನ್ನು ಹಾಸುಹೊಕ್ಕಾಗಿ ಚಿತ್ರಿಸಿದ್ದಾರೆ ಎಂದು ಶ್ಲಾಘಿಸಿದರು. ಮನದ ಪಾಡು ಕೃತಿ ಕುರಿತು ಪ್ರಾಧ್ಯಾಪಕ ಡಾ.ಪ್ರಭು ವಿ.ಉಪಾಸೆ ಅವರು ಮಾತನಾಡಿ, ಸಾಹಿತ್ಯ ಕೃತಿಗಳು ವ್ಯಕ್ತಿಗೆ ಆನಂದ ನೀಡುವಂತಿದ್ದಾಗ ಅವುಗಳನ್ನು ಓದುಗ ಪ್ರೀತಿಯಿಂದ ಸ್ವೀಕರಿಸುತ್ತಾನೆ ಎಂಬುದಕ್ಕೆ ಸಾಹಿತಿ ರಾಜಶೇಖರ್ ಅವರ ಕೃತಿಗಳು ಮರು ಮುದ್ರಣ ಕಂಡಿರುವುದೆ ಸಾಕ್ಷಿಯಾಗಿದೆ. ತಮ್ಮ ಬದುಕಿನ ನೋವುಗಳನ್ನು ಓದುಗರಿಗೆ ಮನ ತಟ್ಟುವಂತೆ ಕೃತಿಗಳ ಮೂಲಕ ತಲುಪಿಸುವ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕೋವಿಡ್ ಸಮಯದಲ್ಲಿ ಪ್ರಾಣವನ್ನು ಪಣಕ್ಕಿಟ್ಟು ಆರೋಗ್ಯ ಸೇವೆ ನೀಡಿದ ಕೆ.ಎನ್. ಅನುಸೂಯ ಅವರಿಗೆ ಆರೋಗ್ಯ ಸೇವಾ ಚಾಣಕ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಾಜಿ ಶಾಸಕ ಕೆ.ರಾಜು ಅವರು ಚಿಗುರಿದ ಮನ ಕೃತಿಯ ಎರಡನೆ ಮುದ್ರಣವನ್ನು ಬಿಡುಗಡೆಗೊಳಿಸಿದರು. ಮಾಜಿ ಶಾಸಕ ಕೆ.ರಾಜು ಅವರು ಮನದ ಪಾಡು ಕೃತಿ ಬಿಡುಗಡೆಗೊಳಿಸಿ ಶುಭ ಕೋರಿದರು. ಗಾಯಕ ಕೆಂಗಲ್ ವಿನಯ್ ಕುಮಾರ್ ಅವರು ಗೀತ ಗಾಯನ ನಡೆಸಿಕೊಟ್ಟರು. ಸಾಹಿತಿ ವಿ.ಎಚ್.ರಾಜಶೇಖರ್ ಅವರು ಮುಖ್ಯ ಅತಥಿಗಳನ್ನು ಅಭಿನಂದಿಸಿದರು.

# ಕೋಚಿಮುಲ್ ಅವ್ಯವಹಾರ: ಮುಖಾಮುಖಿ ಚರ್ಚೆಗೆ ಸಿದ್ಧ

• **ಉದಯವಾಹಿನಿ, ಬಂಗಾರಪೇಟೆ**

ಕೋಚಿಮುಲ್‌ನಲ್ಲಿ ನಡೆದಿರುವ ಅವ್ಯವಹಾರ ಕುರಿತು ದಾಖಲೆಗಳೊಂದಿಗೆ ಮುಖಾಮುಖಿ ಚರ್ಚೆಗೆ ಸಿದ್ಧ ಎಂದು ಶಾಸಕ ಎಸ್.ಎನ್.ನಾರಾಯಣಸ್ವಾಮಿ ಸವಾಲು ಹಾಕಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಲೂರು ಶಾಸಕ ಹಾಗೂ ಕೋಚಿಮುಲ್ ಮಾಜಿ ಅಧ್ಯಕ್ಷ ಕೆ.ವೈ.ನಂಜೇಗೌಡ ಮಾಧ್ಯಮಗಳಲ್ಲಿ ಆರೋಪಿಸಿರುವ ಕುರಿತು ಸ್ಪಷ್ಟಿಕರಣ ನೀಡಿದರು.

ಕೋಚಿಮುಲ್‌ನ ಗೋಲ್ಡನ್ ಡೇರಿ ನಿರ್ಮಾಣ, ಸೋಲಾರ್ ಘಟಕ ನಿರ್ಮಾಣ, ಹಾಲು ಸಾಗಾಣಿಕೆ, ಪ್ರಯಾಣ ಭತ್ಯೆಗಳಲ್ಲಿ ಮಾಡಿರುವ ಭ್ರಷ್ಟಾಚಾರದ ಎಲ್ಲಾ ದಾಖಲೆಗಳನ್ನು ಪಡೆಯಲಾಗಿದೆ. ಹಾಲು ಉತ್ಪಾದಕರ ಒಕ್ಕೂಟ ರೈತರ ಸಂಸ್ಥೆಯಾಗಿದ್ದು ಈ ಸಂಸ್ಥೆಯನ್ನು ಯಾವ ರೀತಿ ಹಾಳು ಮಾಡಿದ್ದಾರೆ ಹಾಗೂ ಅನಗತ್ಯವಾಗಿ ನೂರಾರು ಕೋಟಿ ಖರ್ಚು ಮಾಡಿದ್ದಾರೆ ಎಂಬುದರ ಬಗ್ಗೆ ಅಂಕಿ-ಅಂಶ ಸಮೇತ ದಾಖಲೆ ನೀಡುವುದಾಗಿ ಹೇಳಿದರು.



ಉದಯವಾಹಿನಿ ಚಿತ್ರ

ಕೋಚಿಮುಲ್‌ನಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಮಾಡಿರುವ ಆರೋಪ ಸುಳ್ಳಾದರೆ ಕಾನೂನು ಹೋರಾಟ ಮಾಡಲಿ ಎಂದರು.

ಭ್ರಷ್ಟಾಚಾರ ಮಾಡಿಲ್ಲ ಎಂದು ಹೇಳುವವರು ಯಾರು ಬೇಕಾದರೂ ಚರ್ಚೆಗೆ ಬರಲಿ ಎಂದು ಆಹ್ವಾನಿಸಿದರು. ರೈತಾಪಿ ವರ್ಗದವರು ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವ ಮಹಿಳೆಯರು ಕಷ್ಟಪಟ್ಟು ದುಡಿದಿರುವ ಹಣದಲ್ಲಿ ಭ್ರಷ್ಟಾಚಾರ ನಡೆಸಿರುವುದು ಶೋಭೆಯಲ್ಲ.

ಇದು ಕೋಲಾರ ಜಿಲ್ಲೆ ಉತ್ಪಾದಕರಿಗೆ ಮಾಡಿರುವ ಮಹಾ ಮೋಸ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೋಲಾರ ಶಾಸಕ ಕೊತ್ತೂರು ಮಂಜುನಾಥ ಹೇಳಿಕೆ ಪತ್ರಿಕೆಗಳಲ್ಲಿ ಗಮನಿಸಿದ್ದೇನೆ. ಉಸ್ತುವಾರಿ ಸಚಿವರು ಭೇಟಿ ನೀಡಿದಾಗ ಪರಸ್ಪರ ತಬ್ಬಿಕೊಳ್ಳುತ್ತಾರೆ. ಈಗ ಅವರ ಮೇಲೆ ಆಪಾದನೆಗಳನ್ನು ಮಾಡುತ್ತಾರೆ ಎಂದು ಆರೋಪಿಸಿದರು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಲಗೈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು ಎರಡು ಜಿಲ್ಲೆಗಳಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಲು ಸಮುದಾಯದ ಪಾತ್ರ ಪ್ರಮುಖವಾಗಿದೆ. ದಲಿತ ಸಮುದಾಯದ ಬಲಗೈ ಶಾಸಕನಾದ ನಾನು ಸಮುದಾಯದ ಪರವಾಗಿ ಹೋರಾಟದ ಮಾಡುವುದು ಜವಾಬ್ದಾರಿಯಾಗಿದೆ. ಕೋಚಿಮುಲ್ ನಡೆದಿರುವ ಅಕ್ರಮ ಬಗ್ಗೆ ಧ್ವನಿ ಎತ್ತಿದ್ದೇನೆ. ಯಾರ ಮೇಲೆಯೂ ವ್ಯಕ್ತಿಗತವಾಗಿ ಆಪಾದನೆ ಮಾಡುತ್ತಿಲ್ಲ. ರೈತರಿಗೆ ಮಾಡಿರುವ ಮೋಸದ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ. ನ್ಯಾಯ ಸಿಗುವ ತನಕ ಹಾಲು ಉತ್ಪಾದಕರ ಪರ ಹೋರಾಟವನ್ನು ಮುಂದುವರಿಸುದಾಗಿ ಎಚ್ಚರಿಕೆ ನೀಡಿದರು.

# ನಗರದ ಸ್ವಚ್ಛತೆಗೆ ಎಲ್ಲರ ಸಹಕಾರ ಅಗತ್ಯ

• **ಉದಯವಾಹಿನಿ, ಚಾಮರಾಜನಗರ**

ನಗರಸಭಾ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡಲು ನಗರ ಸಭೆಯೊಂದಿಗೆ ಸ್ವಯಂ ಸೇವಾ ಸಂಘಗಳು ವರ್ತಕರು ಹೆಚ್ಚಿನ ರೀತಿಯಲ್ಲಿ ಕೈಜೋಡಿಸಬೇಕು ಎಂದು ನಗರಸಭಾ ಅಧ್ಯಕ್ಷ ಎಸ್. ಸುರೇಶ್ ತಿಳಿಸಿದರು. ನಗರದ ಭುವನೇಶ್ವರಿ ವೃತ್ತದಿಂದ ಡಿವಿಯೇಷನ್ ರಸ್ತೆ ಮಾರ್ಗದ ಸಂತೇಮರಹಳ್ಳಿ ಸರ್ಕಲ್ ವರೆಗೆ ನಡೆದ ಮೂರನೇ ವಾರದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ಚಾಮರಾಜನಗರದಲ್ಲಿ ಸ್ವಚ್ಛತಾ ಅಭಿಯಾನವನ್ನು ಸಂಘ ಸಂಸ್ಥೆಯ ಸಹಕಾರದಲ್ಲಿ ನಡೆಸಲಾಗುತ್ತಿದೆ. ನಗರದಲ್ಲಿರುವ ಸಾರ್ವಜನಿಕರು ನಗರವನ್ನು ಸ್ವಚ್ಛವಾಗಿಸಲು ಸಹಕರಿಸಬೇಕು. ತಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛತೆಗೆ ಮುಂದಾಗಬೇಕು ಎಂದರು.

ನಗರಸಭೆ ವತಿಯಿಂದ ಈಗಾಗಲೇ ವಾರ್ಡ್‌ಗಳಲ್ಲಿ ಕಸದ ಡಬ್ಬಿಯನ್ನು ವಿತರಣೆ ಮಾಡಲಾಗುತ್ತಿದ್ದು ನಿವಾಸಿಗಳು ಹಸಿ ಕಸ, ಒಣ ಕಸವನ್ನು ವಿಂಗಡಿಸಿ ನೀಡುವುದರಿಂದ ನಗರದ ಸ್ವಚ್ಛತೆ ಸಾಧ್ಯವಾಗುತ್ತದೆ. ನಗರಸಭೆ



ಉದಯವಾಹಿನಿ ಚಿತ್ರ

ಪೌರ ಕಾರ್ಮಿಕರೊಂದಿಗೆ ನಿವಾಸಿಗಳು ಸಹಕಾರ ನೀಡಿ, ಮನೆಗಳಲ್ಲಿ ಉತ್ಪಾತ್ತಿಯಾಗುವ ಒಣ ಕಸ ಹಸಿ ಕಸವನ್ನು ಪ್ರತ್ಯೇಕ ಮಾಡಿ, ನಗರಸಭೆ ಗಾಡಿಗಳಿಗೆ ನೀಡಬೇಕು. ಇದರಿಂದ ಕಸರ ರಾಸಿಗಳು ಬೀಳುವುದು ತಪ್ಪುತ್ತದೆ. ಬೀದಿಯು ಸಹ ಸ್ವಚ್ಛವಾಗಿರುತ್ತದೆ ಎಂದರು. ನಗರಸಭಾ ಪೌರಾಯುಕ್ತ ಎಸ್.ವಿ. ರಾಮದಾಸ್ ಮಾತನಾಡಿ, ನಗರವನ್ನು ಸ್ವಚ್ಛವಾಗಿಡಲು ಜನರು ಸಹಕರಿಸಬೇಕು. ಪರಿಸರ ಸ್ವಚ್ಛವಾಗಿದ್ದರೆ ಉತ್ತಮ ಆರೋಗ್ಯ ಹೊಂದಲು ಸಾಧ್ಯ. ಜನರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಮೂರನೇ ವಾರದ ಸ್ವಚ್ಛತಾ ಅಭಿಯಾನ ಯಶಸ್ವಿಯಾಗುತ್ತಿದೆ.

ವರ್ತಕರು, ವಿವಿಧ ಸಂಘ ಸಂಸ್ಥೆಗಳ ಮುಖಂಡರ ಸಹಕಾರ ದೊರೆಯುತ್ತಿದೆ ಎಂದರು.

# ಆರೋಗ್ಯವನ್ನು ನಿರ್ಲಕ್ಷಿಸಬೇಡಿ: ಡಿಸಿ ರವಿ

• **ಉದಯವಾಹಿನಿ, ಕೋಲಾರ**

ವೈದ್ಯರು ಪ್ರತಿನಿತ್ಯ ಸೇವೆಯಲ್ಲಿ ತೊಡಗಿ ರೋಗಿಗಳನ್ನು ವಿಚಾರಿಸುವ ಸಂದರ್ಭದಲ್ಲಿ ಒತ್ತಡದೊಂದಿಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ ಆದರೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರಬೇಡಿ ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ವೈದ್ಯರಿಗೆ, ಸಿಬ್ಬಂದಿಗೆ ವಿಶ್ವ ಆರೋಗ್ಯ ದಿನ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಕಿವಿಮಾತು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕೋಲಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಾರಾಯಣ ಹೃದಯಾಲಯ ಟಮಕ ಇವರ ಸಹಯೋಗದೊಂದಿಗೆ ನಗರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಭಾಂಗಣದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಸಾರ್ವಜನಿಕ ವಲಯದಲ್ಲಿ ನಾವು ಸೇವೆಯನ್ನು ಸಲ್ಲಿಸುವಾಗ ನಮ್ಮನ್ನು ನಾವು ನಿರ್ಲಕ್ಷಿಸಿಕೊಳ್ಳುವುದು ಸಹಜವಾಗಿದೆ, ಅದರಲ್ಲಿ ಕುಟುಂಬ, ಸಂಸಾರ, ವೃತ್ತಿಯಲ್ಲಿ ಹೆಣ್ಣು ಪ್ರಮುಖ ಪಾತ್ರವಹಿಸುತ್ತಾಳೆ.



ಉದಯವಾಹಿನಿ ಚಿತ್ರ

ಅದೇ ರೀತಿ ಒಬ್ಬ ಪುರುಷನು ಬೆಳಿಗ್ಗೆ ಮನೆಯಿಂದ ಹೊರಟ ನಂತರ ಮತ್ತೆ ಮನೆಗೆ ಬರುವವರೆಗೂ ಎಷ್ಟು ಒತ್ತಡಗಳೊಂದಿಗೆ ಕೆಲಸ ಮಾಡಿ ಬರುತ್ತಿದ್ದಾನೆ ಎಂಬುದನ್ನು ಗಮನಿಸಬೇಕಾಗುತ್ತದೆ ಎಂದು ಅವರು ತಿಳಿಸಿದರು. ವ್ಯವಸ್ಥೆಯ ಲಗಾಮು ಎಂಬುದು ಯಾವ ಕೈನಲ್ಲಿ ಇದೆ ಎಂಬುದು ನಮಗೆ ಗೊತ್ತಿಲ್ಲ ಆದರೆ ನಮ್ಮ ಆರೋಗ್ಯ ನಮ್ಮ ಮನಸ್ಸು ನಿರ್ವಹಣೆ ನಮ್ಮ ನಮ್ಮ ಕೈನಲ್ಲಿ ಇದೆ ಆದ್ದರಿಂದ ತಮ್ಮ ಮನಸ್ಸು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದರು. ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಒತ್ತಡದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ಎಲ್ಲರೂ ಸಹ ಒತ್ತಡ ಎಂಬ ಪದವನ್ನು ಮರೆತು ಕಾರ್ಯನಿರ್ವಹಿಸಿ ಎಂದರು.

# ಭೂಮಿ ಕಸಿದರೆ ಅರಮನೆ ಮುಂದೆ ಆತ್ಮಹತ್ಯೆ : ಸಿದ್ದಯ್ಯನಪುರ ಗ್ರಾಮಸ್ಥರು

• **ಉದಯವಾಹಿನಿ, ಚಾಮರಾಜನಗರ**

ಜಿಲ್ಲೆಯಲ್ಲಿ ಮೈಸೂರು ಮಹಾರಾಜರ ಹೆಸರಿನಲ್ಲಿರುವ 5 ಸಾವಿರ ಎಕರೆಗೂ ಹೆಚ್ಚಿನ ಖಾಸಗಿ ಸ್ವತ್ತನ್ನು ಖಾತೆ ಮಾಡಿಕೊಡುವಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಜಿಲ್ಲಾಡಳಿತಕ್ಕೆ ಬರೆದಿರುವ ಪತ್ರದಿಂದ ನೂರಾರು ರೈತರು ಆತಂಕದಲ್ಲಿದ್ದಾರೆ.

ದಶಕಗಳಿಂದ ಬದುಕು ಕಟ್ಟಿಕೊಂಡಿರುವ ನೆಲವನ್ನು ಬಲವಂತವಾಗಿ ಕಸಿದುಕೊಂಡರೆ ಆತ್ಮಹತ್ಯೆ ಹೊರತಾಗಿ ಬೇರೆ ದಾರಿ ಕಾಣುತ್ತಿಲ್ಲ' ಎನ್ನುತ್ತಾರೆ ತಾಲ್ಲೂಕಿನ ಸಿದ್ದಯ್ಯನಪುರ ಗ್ರಾಮಸ್ಥರು. 'ಗ್ರಾಮದಲ್ಲಿ 800 ಕುಟುಂಬಗಳಿದ್ದು 4 ಸಾವಿರಕ್ಕೂ ಹೆಚ್ಚು ಮಂದಿ ವಾಸವಿದ್ದಾರೆ.ಈಗ ಭೂಮಿ ಬಿಟ್ಟುಕೊಡಿ ಎಂದರೆ ಎಲ್ಲರೂ ಬೀದಿಗೆ ಬೀಳಬೇಕಾಗುತ್ತದೆ ಎಂಬುದು ಅವರ ಆತಂಕ. ಪ್ರಮೋದಾದೇವಿ ಅವರ ಒತ್ತಡಕ್ಕೆ ಮಣಿದು ಒಕ್ಕಲೆಬ್ಬಿಸಿದರೆ ಗ್ರಾಮಸ್ಥರು ಊರು ತೊರೆಯಬೇಕು. ಅಂತಹ ಪರಿಸ್ಥಿತಿ ಬಂದರೆ, ಮೈಸೂರು ಅರಮನೆ ಎದುರು ಠಿಕಾಣಿ ಹೂಡುತ್ತೇವೆ, ನ್ಯಾಯ ಸಿಗದಿದ್ದರೆ ಅಲ್ಲಿಯೇ ಆತ್ಮಹತ್ಯೆ ಮಾಡಿಕೊಳು ಕೇವೆ ಎಂದು



ಉದಯವಾಹಿನಿ ಚಿತ್ರ

ಗ್ರಾಮಸ್ತರು ಹೇಳುತ್ತಿದ್ದಾರೆ. ಮಹಾರಾಜರಾಗಿದ್ದ ಜಯರಾಮರಾಜೇಂದ್ರ ಒಡೆಯರ್ 1,035 ಎಕರೆ ಜಮೀನನ್ನು ಸಿದ್ದಯ್ಯನಪುರ ಗ್ರಾಮಸ್ಥರಿಗೆ ದಾನ ನೀಡಿದ್ದರು. 1982ರಲ್ಲಿ ಸಚಿವರಾಗಿದ್ದ ಬಿ.ರಾಚಯ್ಯನವರು ಸಾಗುವಳಿ ಚೀಟಿ ಕೊಡಿ ಸಿದ್ದರು ಎಂದು ಗ್ರಾಮದ ಮುಖಂಡ ನಾಗರಾಜ್ ಹೇಳುತ್ತಾರೆ. ಭಾರತೀಯ ಕಿಸಾನ್ ಸಂಘ ಗ್ರಾಮಸ್ಥರ ನೆರವಿಗೆ ಧಾವಿಸಿದೆ. ಸರ್ಕಾರ ಕೂಡಲೇ ಮಧ್ಯಸ್ಥಿಕೆ ವಹಿಸಿ ನ್ಯಾಯ ಕಲ್ಪಿಸಬೇಕು. ಭೂಮಿ ಬಿಟ್ಟುಕೊಡಲೇ ಬೇಕು ಎಂದಾದರೆ ಸರ್ಕಾರ ಪರ್ಯಾಯವಾಗಿ ಭೂಮಿ ಕೊಡಲಿ. ಇಲ್ಲವೇ ಹೋರಾಟ ಅನಿವಾರ್ಯ' ಎನ್ನುತ್ತಾರೆ ಕಿಸಾನ್ ಸಂಘದ ಕೋಶಾಧ್ಯಕ್ಷ ಲಿಂಗರಾಜು.

**ಮಹಾರಾಜರ ಕುಟುಂಬ ತಣ್ಣಗಿರಲಿ...**

**ರಾಜರು ಕೊಟ್ಟಿರುವ ದಾನಪತ್ರ, ಭೂದಾಖಲೆಗಳು ಇವೆ.**

**ಕೊಳವೆಬಾವಿ ಕೊರೆಯಿಸಿ, ಬ್ಯಾಂಕ್ ಸಾಲ ಪಡೆದು ಕೃಷಿ ಮಾಡುತ್ತಿದ್ದೇವೆ. ರಾಜರು ಕೊಟ್ಟದ್ದ ಬೆದ್ದಲು ಜಮೀನನ್ನು ಕೃಷಿಯೋಗ್ಯ ಭೂಮಿಯಾಗಿ ಮಾಡಿಕೊಂಡು ಜೀವನಕ್ಕೊಂದು ದಾರಿ ಮಾಡಿಕೊಂಡಿದ್ದೇವೆ**

**-ಮಹದೇವಯ್ಯ, ಗ್ರಾಮಸ್ಥ**

ಸಿದ್ದಯ್ಯನಪುರ ಹಿಂದೆ ಜಯಚಾಮರಾಜೇಂದ್ರಪುರವಾಗಿತ್ತು. ಮಹಾರಾಜರು ಭೂಮಿದಾನ ಕೊಟ್ಟಿದ್ದಕ್ಕೆ ಕೃತಜ್ಞತೆಯಾಗಿ ಅವರ ಹೆಸರನ್ನೇ ಗ್ರಾಮಕ್ಕೆ ಇರಿಸಲಾಯಿತು. ಇಂದಿಗೂ ಊರಿನ ಚಾವಡಿ ಮನೆಗಳಲ್ಲಿ ಜಯಚಾಮರಾಜ ಒಡೆಯರ್ ಚಿತ್ರವಿದೆ. ವಿವಾದ ಏನೇ ಇರಲಿ ಕಷ್ಟದ ದಿನಗಳಲ್ಲಿ ಅನ್ನಕೊಟ್ಟ ರಾಜರ ಕುಟುಂಬ ತಣ್ಣಗಿರಲಿ' ಎಂದು ಹಾರೈಸಿದರು ಗ್ರಾಮದ ಮಹದೇವಯ್ಯ.

# ಮತಾಂತರಕ್ಕೆ ಒಪ್ಪದ ಪತ್ನಿ, ಅತ್ತೆ ಮೇಲೆ ಮಾರಣಾಂತಿಕ ಹಲ್ಲೆ

• **ಉದಯವಾಹಿನಿ, ಮಂಡ್ಯ**

ಮತಾಂತರಕ್ಕೆ ಒಪ್ಪದ ಅತ್ತೆ ಹಾಗೂ ಪತ್ನಿಯ ಮೇಲೆ ಪತಿ ಮತ್ತು ಆತನ ಕುಟುಂಬದವರು ಮಾರಣಾಂತಿಕವಾಗಿ ಹಲ್ಲೆ ನಡೆಸಿರುವುದು ಶ್ರೀರಂಗಪಟ್ಟಣದ ಪಾಲಹಳ್ಳಿ ಗ್ರಾಮದಲ್ಲಿ ನಡೆದಿದೆ.

**ಒಂಭತ್ತು ಜನರ ವಿರುದ್ಧ ಎಫ್ಐಆರ್**

ಹಲ್ಲೆಗೊಳಗಾದ ಮಹಿಳೆಯರನ್ನು ಲಕ್ಷ್ಮಿ, ಆಕೆಯ ತಾಯಿ ಶೃತಿ ಎಂದು ಗುರುತಿಸಲಾಗಿದೆ. ಲಕ್ಷ್ಮಿಯ ಪತಿ ಶ್ರೀಕಾಂತ್ ಹಾಗೂ ಆತನ ಕುಟುಂಬಸ್ಥರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಮಹಿಳೆಯ ಸಹೋದರ ರವಿಕಿರಣ್ ನೀಡಿದ ದೂರಿನ ಮೇಲೆ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ದೂರಿನಲ್ಲಿ, ಮತಾಂತರಕ್ಕೆ ಪೀಡಿಸಿ ಲಕ್ಷ್ಮಿಗೆ ನಿರಂತರ ಕಿರುಕುಳ ನೀಡಲಾಗಿದೆ. ಮತಾಂತರಕ್ಕೆ ಸಮ್ಮತಿಸದಿದ್ದಕ್ಕೆ ಕಿರುಕುಳ ನೀಡಿ, ತವರು ಮನೆಯಿಂದ ಹಣ ತರುವಂತೆ ಹಿಂಸೆ ಕೊಡುತ್ತಿದ್ದರು. ಅಕ್ಕನ ಸಂಸಾರ ಚೆನ್ನಾಗಿರಲಿ ಎಂದು 25 ಲಕ್ಷ ರೂ. ಹಣ ನೀಡಿದ್ದೇನೆ.

ಅದೇ ಹಣದಲ್ಲಿ ಚರ್ಚ್ ಕಟ್ಟಿಸಿಕೊಂಡು ಆಮಿಷವೊಡ್ಡಿ ಜನರನ್ನ ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಶೃತಿ, ಪಾಲಹಳ್ಳಿ ಗ್ರಾಮದಲ್ಲಿ ಹತ್ತು ವರ್ಷಗಳಿಗಿಂದಲೂ ನಿರಂತರವಾಗಿ ಮತಾಂತರ ನಡೆಯುತ್ತಿದೆ.

ಒಕ್ಕಲಿಗರು, ವಿಶ್ವಕರ್ಮ ಜನಾಂಗ, ಮರಾಠಿಗಳು ಸೇರಿ ಸಿಕ್ಕವರನ್ನೆಲ್ಲ ಮತಾಂತರ ಮಾಡುತ್ತಾ ಬಂದಿದ್ದಾರೆ. ಕಷ್ಟದಲ್ಲಿ ಇರುವವರನ್ನು ಟಾರ್ಗೆಟ್ ಮಾಡಿ ಹಣದ ಆಮಿಷ ತೋರಿಸಿ ಮತಾಂತರ ಮಾಡುತ್ತಾರೆ.

ಎಲ್ಲಿಂದಲೋ ಅವರಿಗೆ ಫಂಡ್ ಬರುತ್ತೆ, ಮತಾಂತರ ಆದವರಿಗೆ ಲಕ್ಷ ಲಕ್ಷ ಹಣ ಕೊಡುತ್ತಾರೆ. ರಾಜಿ ಪಂಚಾಯತಿಗೆ ಅಂತ ಕರೆದು ನನ್ನ ಹಾಗೂ ಮಗಳ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಲಕ್ಷ್ಮಿ, ಶ್ರೀಕಾಂತ್‌ಗೆ 15 ವರ್ಷಗಳ ಹಿಂದೆ ಮದುವೆ ಮಾಡಲಾಗಿತ್ತು. ಆರಂಭದಲ್ಲಿ ಎಲ್ಲವೂ ಸರಿಯಾಗಿತ್ತು. ವರ್ಷ ಕಳೆದಂತೆ ಪತಿಯ ಕುಟುಂಬಸ್ಥರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದರು.

ಪತಿ ಮತಾಂತ ರವಾದರೂ ಲಕ್ಷ್ಮಿ ಮತಾಂತರಕ್ಕೆ ಒಪ್ಪಲಿಲ್ಲ. ನಾನು ಚಾಮುಂಡೇಶ್ವರಿ ಭಕ್ತೆ ನಾನು ಮತಾಂತರ ಆಗಲ್ಲ ಎಂದು ಹೇಳಿದ್ದಳಂತೆ.

ಯಾವಾಗ ಮತಾಂತರಕ್ಕೆ ಒಪ್ಪಲಿಲ್ಲ ಅಂದಿನಿಂದ ಮನೆಯವರು ಕಿರುಕುಳ ಶುರು ಮಾಡಿದ್ದರು. ಕಳೆದ ನಾಲ್ಕು ತಿಂಗಳ ಹಿಂದೆ ಹೆಂಡತಿಯನ್ನ ಮನೆಯಿಂದ ತವರು ಮನೆಗೆ ಕಳಿಸಲಾಗಿತ್ತು. ಈಗ ರಾಜಿ ಪಂಚಾಯಿತಿಗೆ ಕರೆಸಿ ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

# ಪೋಶೆಟ್ಟಿಹಳ್ಳಿಯಲ್ಲಿ ವೈಭವದ ಹನುಮ ಜಯಂತಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಜಿಲ್ಲೆಯ ಮಂಚೇನಹಳ್ಳಿ ತಾಲ್ಲೂಕಿನ ಪಂಚ ಗಿರಿಗಳ ಮಧ್ಯೆ ಇರುವ ಉತ್ತರ ಪಿನಾಕಿನಿ ನದಿ ತೀರದ ಪೋಶೆಟ್ಟಿಹಳ್ಳಿ ಗ್ರಾಮದಲ್ಲಿ ಶ್ರೀ ವ್ಯಾಸರಾಜ ರಿಂದ ಪ್ರತಿಷ್ಠಿತ ಶ್ರೀ ಆಂಜನೇಯ ಸ್ವಾಮಿಯ ದಿವ್ಯ ಸನ್ನಿಧಿಯಲ್ಲಿ ಚಿತ್ರಾ ಪೂರ್ಣಿಮೆಂದು ಹನುಮ ಜಯಂತಿ ಮಹೋತ್ಸವ ಯನ್ನು ವೈಭವದಿಂದ ಆಚರಿಸಲಾಯಿತು.

ಶ್ರೀರಾಮ ಪರಿವಾರ ಮತ್ತು ಗೋಂದಾವಳಿ ಬ್ರಹ್ಮಚೈತನ್ಯ ಮಹಾರಾಜರ ಸನ್ನಿಧಾನವಿರುವ ದೇವಾಲಯದಲ್ಲಿವಿ ಶೇಷ ಪೂಜೆ, ಅಲಂಕಾರ, ಪ್ರಸಾದ ವಿತರಣೆ ನಡೆದು ಶ್ರೀ ಹರ್ಷ, ಅನುರಾಧ, ಗಿರೀಶ್ ಸಾಲವಾಡಿ ತಂಡದಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು.

ದೇವಾಲಯ ಪುನರುತ್ತಾನ ಮಾಡಿದ ಕೀರ್ತಿಶೇಷ ರಾಮಚಂದ್ರ ರಾವ್ ಸ್ಮರಣೆಯಲ್ಲಿ ನಡೆದ ಕುಟುಂಬ ಸಮ್ಮಿಲನದಲ್ಲಿ ದೇವಸ್ಥಾನ ಟ್ರಸ್ಟ್‌ನ ಸದಸ್ಯರು, ರಾಮಚಂದ್ರರಾವ್ ಕುಟುಂಬದ ಅವರ ಧರ್ಮಪತ್ನಿ ರಾಮಕ್ಕ, ಪುತ್ರರಾದ ಸತೀಶ್, ಗುರುಪ್ರಸಾದ್, ಪುತ್ರಿ ಶಾಂತ, ಅಳಿಯ ನಾರಾಯಣ ಭಟ್ ಮತ್ತು ಪೋಶೆಟ್ಟಿಹಳ್ಳಿಯ ಗೋವಿಂದರಾವ್, ಶ್ರೀನಿವಾಸ್,



ಉದಯವಾಹಿನಿ ಚಿತ್ರ

ಪೋ.ರಾ. ಶ್ರೀನಿವಾಸ್ ಹಾಗೂ ಗುರುರಾಜ್ ಪೋಶೆಟ್ಟಿಹಳ್ಳಿ ಉಪಸ್ಥಿತರಿದ್ದರು.

# ಯುವತಿಯರನ್ನು ಕಾಮದ ಕೂಪಕ್ಕೆ ತಳ್ಳುವ ಜಾಲದ ವಿರುದ್ಧ ಹೋರಾಡಿ

## ಅನೇಕ ಸಂಘ, ಸಂಸ್ಥೆಗಳು ಈ ರೀತಿಯ ಜಾಲದ ವಿರುದ್ಧ ಹೋರಾಟ ಮಾಡುತ್ತಿವೆ. ನೀವು ಕೈಜೋಡಿಸಿ

• **ಉದಯವಾಹಿನಿ, ಮೈಸೂರು**

ಯುವತಿಯರನ್ನು ಕಾಮದ ಕೂಪಕ್ಕೆ ತಳ್ಳುವ ಜಾಲದ ವಿರುದ್ಧ ಸಾಮಾಜಿಕ ಹೋರಾಟ ನಡೆಸಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಕರೆ ನೀಡಿದರು.

ಜನಪರ ಸಾಹಿತ್ಯ ಪರಿಷತ್ತು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ, ಸಾಧಕಿಯರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿ.

ಮೈಸೂರಿನಲ್ಲಿ ಈ ರೀತಿಯ ಘಟನೆ ನಡೆದಿದೆ ಎಂದು ಕೇಳಿ ಆಘಾತವಾಯಿತು. ಇಲ್ಲಿನ ಒಡನಾಡಿ ಸೇರಿದಂತೆ ರಾಜ್ಯದಲ್ಲಿ ಅನೇಕ ಸಂಘ, ಸಂಸ್ಥೆಗಳು ಈ ರೀತಿಯ ಜಾಲದ ವಿರುದ್ಧ ಹೋರಾಟ ಮಾಡುತ್ತಿವೆ. ನೀವು ಕೈಜೋಡಿಸಿ. ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಮಾತ್ರ ಈ ರೀತಿಯ ಘಟನೆಗಳಿಗೆ ಇತಿಶ್ರೀ ಹಾಡಬಹುದು ಎಂದರು. ಈ ರೀತಿಯ ಘಟನೆಗಳು, ಮಹಿಳೆಯರ ಮೇಲಿನ ದೌರ್ಜನ್ಯಗಳು ಎಲ್ಲಿಯೇ ನಡೆಯಲಿ ಮೊದಲು ಮಹಿಳಾ ಸಹಾಯವಾಣಿಗೆ ದೂರು ನೀಡಿ. ದೂರವಾಣಿ ಕರೆ ಮಾಡಿದರೆ ನಿಮ್ಮ



ಉದಯವಾಹಿನಿ ಚಿತ್ರ

ಹೆಸರನ್ನು ಗೌಪ್ಯವಾಗಿಡಲಾಗುತ್ತದೆ. ಆದ್ದರಿಂದ ಈ ಬಗ್ಗೆ ಯಾವುದೇ ಭಯಪಡಬೇಡಿ ಎಂದು ಅವರು ಅಭಯ ನೀಡಿದರು.

ಮಹಿಳೆಯರು ಕೌಟುಂಬಿಕ ದೌರ್ಜನ್ಯ ಸೇರಿದಂತೆ ಪ್ರತಿ ಹೆಜ್ಜೆಯಲ್ಲೂ ಹುಷಾರಾಗಿರಬೇಕು. ಅದರಲ್ಲೂ ಯುವತಿಯರು ಇನ್‌ಸ್ಟಾಗ್ರಾಂ, ಫೇಸ್ ಬುಕ್ ಮೊದಲಾದ ಜಾಲತಾಣಗಳ ಬಗ್ಗೆ ಎಚ್ಚರವಹಿಸಬೇಕು. ಡಾರ್ಕ್ ವೆಬ್‌ಸೈಟ್ ಡೌನ್ ಲೋಡ್ ಮಾಡಿಕೊಂಡು ಜಾಲಕ್ಕೆ ಸಿಕ್ಕಿಬೀಳಬಾರದು. ಪ್ರೀತಿಸಿ, ತಂದೆ-ತಾಯಿಯನ್ನು ಒಪ್ಪಿಸಿ ಮದುವೆಯಾಗಿ. ಆದರೆ ಪ್ರೀತಿಸಿ, ಓಡಿ ಹೋಗಬಾರದು ಎಂದು ಅವರು ಕಿವಿಮಾತು ಹೇಳಿದರು. ಹೆಣ್ಣು ಮಕ್ಕಳಿಗೆ ತವರು ಬಿಟ್ಟರೆ ಪೊಲೀಸ್ ಠಾಣೆ ಎರಡನೇ ತವರು ಮನೆ ಇದ್ದಂತೆ. ಏಕೆಂದರೆ ಯಾವುದಾದರೂ ದೌರ್ಜನ್ಯ ನಡೆದಾಗ ಧೈರ್ಯದಿಂದ ಹೋಗಿ ದೂರ ನೀಡಬೇಕು. ಅಲ್ಲಿಗೆ ಹೋಗಲು ಭಯಪಡಬಾರದು. ಪೊಲೀಸರು ಇರುವುದು ನಮಗೆ ರಕ್ಷಣೆ ನೀಡಲು. ಭಾರತೀಯ ನ್ಯಾಯ ಸಂಹಿತೆ ಪ್ರಕಾರ ಮಹಿಳೆಯರಿಗೆ ಯಾವ ರೀತಿಯ ಕಾನೂನುಗಳಿವೆ ತಿಳಿದುಕೊಳ್ಳಬೇಕು ಎಂದರು. ಲಂಚಾವಾತಾರದ ವಿರುದ್ಧ ಹೋರಾಟ ಮಾಡಬೇಕು. ಗುಲಾಮಗಿರಿಯ ಮನಸ್ಥಿತಿಯಿಂದ ಆಚೆ ಬರಬೇಕು.

ಆಗ ಮಾತ್ರ ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ಬದಲಾವಣೆ ಸಾಧ್ಯ ಎಂದು ಅವರು ಹೇಳಿದರು. ಪ್ರಶಸ್ತಿ ಪುರಸ್ಕೃತರ ಪರವಾಗಿ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ, ಶಿಕ್ಷಣದ ಜೊತೆಗೆ ಸಂವಹನ ಕೂಡ ಮುಖ್ಯ,ಕೇವಲ ಐಎಎಸ್ ಮಾತ್ರವಲ್ಲ, ರಾಜಕೀಯ, ಕ್ರೀಡೆ, ಕಲೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸೇವೆ ಮಾಡಲು ಅವಕಾಶ ಇದೆ ಎಂದರು.

**ಮಹಿಳೆಯರಿಗೆ ಶಿಕ್ಷಣ ನೀಡಿದರೆ ದೇಶಕ್ಕೆ ಶಕ್ತಿ ಇದ್ದಂತೆ ಆದ್ದರಿಂದ ಅಬ್ದುಲ್ ಕಲಾಂ ಅವರು ಹೇಳಿದಂತೆ ಕನಸು ಕಾಣಿರಿ, ಅದನ್ನು ನನಸು ಮಾಡಲು ಗುರಿ ಮತ್ತು ಛಲದಿಂದ ಓದಿರಿ**

**- ಡಾ.ಎಸ್. ದತ್ತೇಶ್ ಕುಮಾರ್**
**ಕಾರ್ಯದರ್ಶಿ**

**ಮಹಿಳಾ ಶಿಕ್ಷಣದ ಮಹತ್ವ ಅರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಣಿ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನ ಕಟ್ಟಡ, ಹಾಸ್ಟೆಲ್‌ಗೆ 300 ಕೋಟಿ ರು. ನೀಡಿದ್ದಾರೆ ಎಂದು ಅವರು ಶ್ಲಾಘಿಸಿದರು. ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ದಕ್ಷತೆ, ಪ್ರಾಮಾಣಿಕತೆ ಜೊತೆಗೆ ಮಾತೃ ಹೃದಯಿಯಾಗಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.**

## ಮಿನಿ ನ್ಯೂಸ್

### ಅದ್ದೂರಿ ಕರಗ ಉತ್ಸವ

• **ಉದಯವಾಹಿನಿ, ಕೋಲಾರ**



ನಗರದ ಕಠಾರಿಪಾಳ್ಯದ ಶ್ರೀ ಧರ್ಮರಾಯ ಸ್ವಾಮಿ ದ್ರೌಪದಮ್ಮ ದೇವಾಲಯದ ಮುಂಭಾಗದಲ್ಲಿ ನಿರ್ಮಿಸಿ ವೇದಿಕೆಯಲ್ಲಿ ಕರಗದ ಹೊತ್ತ ಪೂಜಾರಿ ಕೃಷ್ಣಮೂರ್ತಿ ಅವರು ಸುಮಾರು ಅರ್ಧ ತಾಸಿಗೂ ಹೆಚ್ಚು ಕಲಾ ಅದ್ಭುತವಾದ ಕಲಾ ಪ್ರದರ್ಶವನ್ನು ನೀಡಿದರು. ವಾದ್ಯಗಳ, ತಮಟೆಯ ತಾಳಕ್ಕೆ ಲಯಬದ್ಧವಾದ ಹೆಜ್ಜೆಗಳನ್ನು ಇಡುತ್ತಾ ನರ್ತಿಸಿದ್ದು ಕಿಕ್ಕಿರಿದು ನೆರೆದಿದ್ದ ಸಾರ್ವಜನಿಕರ ಮನ ರಂಜಿಸಿತು. ಕೆಲ ಕಾಲ ಮಳೆ ಬಂದಿತಾದರೂ ನಂತರ ಕಗರವು ನಗರದ ಎಲ್ಲೆಡೆ ಸಂಚರಿಸಿತು. ಕತ್ತಿ ಹಿಡಿದ ವೀರಕುಮಾರರು ಕರಗದ ಹಿಂದೆ ಗೋವಿಂದ,, ಗೋವಿಂದ ಎಂದು ಕೂಗುತ್ತಿದ್ದರು.

### ಭೀಮ ಸಂಭ್ರಮ ಕ್ರಿಕೆಟ್ ಟೂರ್ನಮೆಂಟ್‌ಗೆ ಶಾಸಕನಿಂದ ಚಾಲನೆ

• **ಉದಯವಾಹಿನಿ, ಯಳಂದೂರು**

ತಾಲ್ಲೂಕಿನ ಕೆಸ್ತೂರು ಗ್ರಾಮದ ಡಾ ಬಿ ಆರ್ ಅಂಬೇಡ್ಕರ್ ರವರ ಜಯಂತಿಯ ಹಿನ್ನಲೆ ಭೀಮ ಸಂಭ್ರಮ ಸೀಜನ್ 5 ರ ಕ್ರಿಕೆಟ್ ಟೂರ್ನಮೆಂಟ್‌ನ್ನು ಶಾಸಕ ಎ ಆರ್ ಕೃಷ್ಣಮೂರ್ತಿ ರವರು ಕ್ರಿಕೆಟ್ ಆಡುವುದರ ಮೂಲಕ ಚಾಲನೆ ನೀಡಿದರು.

ಮಾನಸಿಕವಾಗಿ, ದೈಹಿಕವಾಗಿ ಸದೃಢತೆ ಕಾಪಾಡಿಕೊಳ್ಳಬೇಕಾದರೆ ಕ್ರೀಡಾ ಚಟುವಟಿಕೆಗಳು ಅವಶ್ಯಕವಾಗಿದೆ. ಯುವಕರು ಕ್ರೀಡಾ ಮನೋಭಾವನೆ ಜೊತೆಗೆ ಸಾಮಾಜಿಕ ಕಾಳಜಿಯನ್ನು ವಹಿಸಿಕೊಳ್ಳಬೇಕು ವೃದ್ಧರನ್ನು, ನಿರ್ಗ ತಿಕರನ್ನು ಗೌರವಿಸಬೇಕು. ಡಾ.ಬಿ.ಆರ್. ಅಂಬೇಡ್ಕರ್‌ರವರ ಜಯಂತಿ ಹಿನ್ನಲೆ ಭೀಮ ಸಂಭ್ರಮ ಕ್ರಿಕೆಟ್ ಟೂರ್ನಮೆಂಟ್‌ನ್ನು ಆಯೋಜಿಸಿದ್ದು ಸಂತಸವಾಗಿದೆ .ಅಂಬೇಡ್ಕರ್ ತತ್ವ, ಸಿದ್ಧಾಂತ, ಚಿಂತನೆಗಳನ್ನು ಯುವಕರು ಮೈಗೂಡಿಸಿಕೊಳ್ಳಬೇಕು. ಸರಕಾರದಿಂದ ಕೆಸ್ತೂರು ಗ್ರಾಮದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯನ್ನು ತೆರೆಯಲು ಮಂಜೂರು ಮಾಡಲಾಗಿದೆ. 80 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣಕ್ಕೆ ಯೋಜನೆ ತಯಾರಿಸಿಲಾಗಿದೆ ಅಭಿವೃದ್ಧಿಯೇ ನನ್ನ ಉದ್ದೇಶವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಸಮುದಾಯದೊಳಗೆ ಚಿಂತನ ಮಂಥನ ಸಭೆಗಳು ಆಗಬೇಕೆಂದು ತಿಳಿಸಿದರು.

### ಪ್ರಶಸ್ತಿಗೆ ವೆಸ್ಟರ್ನ್ ಘಾಟ್ ವಾರಿಯರ್ಸ್, ಟೀಮ್ ಲಿವರೇಜ್ ಹಣಾಹಣಿ

• **ಉದಯವಾಹಿನಿ, ಮಡಿಕೇರಿ**

ಕೂರ್ಗ್ ಕ್ರಿಕೆಟ್ ಫೌಂಡೇಶನ್ ವತಿಯಿಂದ ಪಾಲಿಬೆಟ್ಟದಲ್ಲಿ ನಡೆಯುತ್ತಿರುವ ಕೊಡವ ಕ್ರಿಕೆಟ್ ಲೆದರ್ ಬಾಲ್ ಪ್ರೀಮಿಯರ್ ಲೀಗ್ ಸೀಸನ್ -2 ರ ಫೈನಲ್ ಪಂದ್ಯ ಏ. 13ರಂದು ವೆಸ್ಟರ್ನ್ ಘಾಟ್ ವಾರಿಯರ್ಸ್ ಮತ್ತು ಟೀಮ್ ಲಿವರೇಜ್ ನಡುವೆ ನಡೆಯಲಿದೆ. ಶನಿವಾರ ನಡೆದ ಪಂದ್ಯದಲ್ಲಿ ಟೀಮ್ ಕೊಡವ ರೈಸಿಂಗ್ ಸ್ಟಾರ್ಸ್ ತಂಡವನ್ನು 30 ರನ್‌ಗಳಿಂದ ಮಣಿಸಿದ ಟೀಮ್ ಲಿವರೇಜ್ ಫೈನಲ್‌ಗೆ ಲಗ್ಗೆ ಇಟ್ಟಿತು. ಟಾಸ್ ಗೆದ್ದು, ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಲಿವರೇಜ್ ತಂಡ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್‌ಗಳ ನಷ್ಟಕ್ಕೆ 144ರನ್‌ಗಳನ್ನು ಗಳಿಸಿತು. ಗುರಿಯನ್ನು ಬೆನ್ನಟ್ಟಿದ ಟೀಮ್ ಕೊಡವ ರೈಸಿಂಗ್ ಸ್ಟಾರ್ಸ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 114 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು.

ಟೀಮ್ ಲಿವರೇಜ್ ತಂಡದ ಅಂಜಂಡ ಚೇತನ್ ಚಿಣ್ಣಪ್ಪ ಪಂದ್ಯ ಪುರುಷೋತ್ತಮ ಗೌರವಕ್ಕೆ ಪಾತ್ರರಾದರು. ಏ.13ರಂದು ಬೆಳಿಗ್ಗೆ 11 ಗಂಟೆಗೆ ಪಾಲಿಬೆಟ್ಟದ ಟಾಟಾ ಕಾಫಿ ಮೈದಾನದಲ್ಲಿ ಟೀಮ್ ವೆಸ್ಟರ್ನ್ ಘಾಟ್ ವಾರಿಯರ್ಸ್ ಮತ್ತು ಟೀಮ್ ಲಿವರೇಜ್ ತಂಡಗಳ ನಡುವೆ ಫೈನಲ್ ಪಂದ್ಯ ನಡೆಯಲಿದೆ.

### ಮರಾಠ ಸಮುದಾಯದ ಎರಡು ಗುಂಪುಗಳ ಘರ್ಷಣೆ; ನಾಲ್ವರಿಗೆ ಗಾಯ

• **ಉದಯವಾಹಿನಿ, ಶ್ರೀರಂಗಪಟ್ಟಣ**

ವ್ಯಕ್ತಿಯೊಬ್ಬರು ಪತ್ನಿಯನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಆಗುವಂತೆ ಒತ್ತಾಯಿಸಿದ್ದಾರೆ' ಎಂಬ ಆರೋಪದ ಕಾರಣದಿಂದ ಮರಾಠ ಸಮುದಾಯದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು, ನಾಲ್ವರು ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ಸಂಜೆ ನಡೆದಿದೆ.

ಘಟನೆಯಲ್ಲಿ ತಾಲ್ಲೂಕಿನ ಪಾಲಹಳ್ಳಿ ಗ್ರಾಮದ ಶ್ರುತಿ ಮತ್ತು ಅವರ ಮಕ್ಕಳಾದ ಲಕ್ಷ್ಮಿ, ರವಿಕಿರಣ್ ಹಾಗೂ ಲಕ್ಷ್ಮಿ ಅವರ ಪತಿ ಶ್ರೀಕಾಂತ್ ಗಾಯಗೊಂಡಿದ್ದಾರೆ. ಶ್ರುತಿ ಮತ್ತು ಲಕ್ಷ್ಮಿ ಅವರ ತಲೆಗೆ ಪೆಟ್ಟು ಬಿದ್ದಿದ್ದು, ಪಟ್ಟಣದ ಆಸ್ಪತ್ರೆಗೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ. ಲಕ್ಷ್ಮಿ ಅವರ ಪತಿ ಶ್ರೀಕಾಂತ್ ಅವರಿಗೆ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಬಳಿಕ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಾಲಹಳ್ಳಿ ಗ್ರಾಮದ ಶ್ರೀಕಾಂತ್ ಮತ್ತು ಲಕ್ಷ್ಮಿ 15 ವರ್ಷಗಳ ಹಿಂದೆ ವಿವಾಹವಾಗಿದ್ದು ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಶ್ರೀಕಾಂತ್ ಮತ್ತು ಲಕ್ಷ್ಮಿ ಅವರ ನಡುವೆ ವೈಮನಸ್ಸು ಉಂಟಾಗಿ ಹಲವು ಬಾರಿ ಗಲಾಟೆ ನಡೆದಿತ್ತು ಎಂದು ತಿಳಿದುಬಂದಿದೆ. 'ಕ್ರೈಸ್ತ ಧರ್ಮಕ್ಕೆ ಮತಾಂತರ ಆಗಬೇಕು.

ಪ್ರತಿ ಭಾನುವಾರ ಚರ್ಚ್‌ಗೆ ಕಡ್ಡಾಯವಾಗಿ ಬರಬೇಕು ಎಂದು ನನ್ನ ಪತಿ ಶ್ರೀಕಾಂತ್ ಬಲವಂತ ಮಾಡುತ್ತಿದ್ದರು ಎಂದು ಲಕ್ಷ್ಮಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ರವಿಕಿರಣ್ ನೀಡಿರುವ ದೂರು ಆಧರಿಸಿ ಲಕ್ಷ್ಮಿ ಅವರ ಪತಿ ಶ್ರೀಕಾಂತ್, ಅವರ ಬಂಧುಗಳಾದ ಹರೀಶ್, ನಾಗಿಣಿ, ಕೃಷ್ಣವೇಣಿ, ರವಿಕುಮಾರ್, ಸುಬ್ರಹ್ಮಣ್ಯ, ಪ್ರಭಾ, ಪ್ರಶಾಂತ್ ಮತ್ತು ಸಾಗರ್ ಎಂಬವರ ವಿರುದ್ಧ ಪಟ್ಟಣ ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ.

### ಬೇಸತ್ತ ರೈತರು, ಪ್ರತಿಭಟನೆ ಎಚ್ಚರಿಕೆ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಮಂಚಹಳ್ಳಿ ಗ್ರಾಮದಲ್ಲಿ ಕಾಡಾನೆ ದಾಂಧಲೆ ವಿಪರೀತವಾಗಿದ್ದು, ರಾತ್ರಿಯೂ ಟೊಮೆಟೊ, ತೆಂಗು, ಸೋಲಾರ್ ತಂತಿ ಬೇಲಿ ತುಳಿದು ನಾಶಪಡಿಸಿದೆ. ಇದರಿಂದ ರೈತರು ರೋಸಿ ಹೋಗಿದ್ದಾರೆ.

ಬಂಡೀಪುರ ಅಭಯಾರಣ್ಯದ ಓಂಕಾರ ವಲಯ ವ್ಯಾಪ್ತಿಯ ತಾಲ್ಲೂಕಿನ ಮಂಚಹಳ್ಳಿ ಗ್ರಾಮದ ರಾಜೇಶ್, ಕೆಂಪಣ್ಣ ಎಂಬುವವರ ಜಮೀನಿನ ಮೇಲೆ ಕಾಡಾನೆ ದಾಳಿ ನಡೆಸಿ ಸುಮಾರು 2 ಎಕರೆಯಲ್ಲಿ ಬೆಳೆದಿದ್ದ ಟೊಮೆಟೊ ತಿಂದುನಾಶ ಪಡಿಸಿದ್ದು, ತೆಂಗಿನ ಮರದ ಜೊತೆಗೆ 15ಕ್ಕೂ ಅಧಿಕ ಸೋಲಾರ್ ತಂತಿ ಬೇಲಿ ತುಳಿದು ಜಖಂಗೊಳಿಸಿದೆ. ಇದರಿಂದ ರೈತರಿಗೆ ಅಪಾರ ನಷ್ಟ ಉಂಟಾಗಿದೆ.

ಅಂತರಾಳದಿಂದ.. EDITORIAL

# ಜಾಗೃತಿ ಮೂಡಿಸಬೇಕಾದ ಶಾಲೆಗಳೇ ಮುಟ್ಟಿನ ಬಗ್ಗೆ ಅಸ್ಪೃಶ್ಯತೆ ಪಾಲಿಸಿದರೆ?

ಪೆರಿಯಾರ್‌ರಂತಹ ಕ್ರಾಂತಿಕಾರಿ ವಿಚಾರವಾದಿಗಳು ಆಗಿ ಹೋಗಿರುವ ತಮಿಳು ನಾಡು, ತಲೆತಲಾಂತರಗಳಿಂದ ಬ್ರಾಹ್ಮಣ್ಯವಾದದ ವಿರುದ್ಧ ಹೋರಾಡುತ್ತಾ ಬಂದಿದೆ. ಸಂಸ್ಕೃತ, ಹಿಂದಿಯ ಸರ್ವಾಧಿಕಾರಕ್ಕೆ ದ್ರಾವಿಡ ಚಳವಳಿಯ ಮೂಲಕ ಉತ್ತರಿಸಿದ ರಾಜ್ಯ ತಮಿಳುನಾಡು. ಶಿಕ್ಷಣ, ಆರೋಗ್ಯ ಅಭಿವೃದ್ಧಿಗಾಗಿ ಉತ್ತರ ಭಾರತದ ಹಲವು ರಾಜ್ಯಗಳಿಗೆ ತಮಿಳುನಾಡು ಮಾದರಿಯಾಗಿದೆ. ಆದರೆ ಇಂದಿಗೂ ಈ ತಮಿಳುನಾಡಿಗೆ ಜಾತಿ ತಾರತಮ್ಯವನ್ನು ಮೀರುವುದಕ್ಕೆ ಸಾಧ್ಯವಾಗಿಲ್ಲ. ಕೊಯಮತ್ತೂರಿನ ಖಾಸಗಿ ಶಾಲೆಯೊಂದು ಮುಟ್ಟಾಗಿದ್ದ ಎಂಟನೆಯ ತರಗತಿಯ ವಿದ್ಯಾರ್ಥಿನಿಯನ್ನು ತರಗತಿಯಿಂದ ಹೊರಹಾಕಿದ್ದು, ಆಕೆ ಅನಿವಾರ್ಯವಾಗಿ ಶಾಲೆಯ ಹೊರಗೆ ಮೆಟ್ಟಲಿನಲ್ಲಿ ಕುಳಿತು ಪರೀಕ್ಷೆ ಬರೆಯುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದೀಗ ಅಧಿಕಾರಿಗಳು ಶಾಲಾಡಳಿತದ ವಿರುದ್ಧ ಕ್ರಮ ಕೈಗೊಂಡಿದ್ದು, ಭವಿಷ್ಯದಲ್ಲಿ ಶಾಲೆಗಳಲ್ಲಿ ಇಂತಹ ಘಟನೆ ನಡೆಯದಂತೆ ಶಿಕ್ಷಣ ಇಲಾಖೆ ಸುತ್ತೋಲೆಯನ್ನು ಹೊರಡಿಸಿದೆ. ಮುಟ್ಟಾದ ಮಹಿಳೆಯರಿಗೆ ಮಾನಸಿಕ ಹಾಗೂ ದೈಹಿಕವಾಗಿ ಆರೈಕೆಗಳು ಬೇಕು ಎನ್ನುವ ಕಾರಣಕ್ಕಾಗಿ ಅವರಿಗೆ ಯಾವುದೇ ಕೆಲಸ ಮಾಡದಂತೆ ಸೂಚಿಸುವುದು ಸರಿ. ಈ ನಿಟ್ಟಿನಲ್ಲಿ ಈ ಹಿಂದೆ ಹಿರಿಯರು ಮಹಿಳೆಯರಿಗೆ ವಿಶ್ರಾಂತಿ ನೀಡಲು ಕೆಲವು ಕ್ರಮಗಳನ್ನು ತೆಗೆದುಕೊಂಡಿರುವ ಸಾಧ್ಯತೆಗಳಿವೆ. ಆದರೆ ಇಂದು ಅದು ಮೌಢ್ಯ ರೂಪವನ್ನು ಪಡೆದಿದೆ. ಮುಟ್ಟಾದ ಮಹಿಳೆ ಅಸ್ಪೃಶ್ಯಳು ಎಂದು ದೂರವಿಡುವ ಕೆಲಸ ನಡೆಯುತ್ತಿದೆ. ಮೇಲ್ಜಾತಿಯ ಜನರು ವಿದ್ಯಾವಂತರಾಗುತ್ತಿದ್ದಂತೆಯೇ ಮುಟ್ಟಿನ ಬಗ್ಗೆ ಇರುವ ಪೂರ್ವಾಗ್ರಹಗಳನ್ನು ತೊರೆಯುತ್ತಾ ಬಂದಿದ್ದಾರಾದರೂ, ಇಂದಿಗೂ ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಮುಟ್ಟಾದ ಮಹಿಳೆಯರನ್ನು ಅತ್ಯಂತ ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ದೇವಸ್ಥಾನ ಪ್ರವೇಶ ಆಚೆಗಿರಲಿ, ಮನೆಯಲ್ಲೇ ಇವರಿಗೆ ಪ್ರವೇಶವಿರುವುದಿಲ್ಲ. ಮುಟ್ಟಾದ ಮಹಿಳೆಯರು ಮನೆಯಿಂದ ಹೊರಗೆ ರಾತ್ರಿಯನ್ನು ಕಳೆಯಬೇಕಾಗುತ್ತದೆ. ಮರದಡಿಯಲ್ಲಿ, ಮನೆಯಿಂದ ದೂರ ದಲ್ಲಿರುವ ಗುಡಿಸಲಲ್ಲಿ ಹಗಲು ರಾತ್ರಿ ಕಳೆಯಬೇಕಾದ ಸ್ಥಿತಿ ಮಹಿಳೆಯರದ್ದು. ಈ ಸಂದರ್ಭದಲ್ಲಿ ದುಷ್ಕರ್ಮಿಗಳಿಂದ ಲೈಂಗಿಕ ದೌರ್ಜನ್ಯಕ್ಕೀಡಾಗುವುದು, ಪ್ರಾಣಿಗಳಿಂದ ದಾಳಿಗೀಡಾಗುವುದು ಇತ್ಯಾದಿಗಳೂ ನಡೆಯುತ್ತವೆ. ಕಲಬುರ್ಗಿ ಮಠದ ವತಿಯಿಂದ ನಡೆಯುವ ಶಾಲೆಯೊಂದರಲ್ಲಿ ಮುಟ್ಟಾದ ವಿದ್ಯಾರ್ಥಿನಿಯರು ಶಾಲೆಯ ಹೊರಗಡೆ ನಿಂತು ಪಾಠ ಕೇಳಬೇಕಾಗುತ್ತಿತ್ತು. ಇದು ಮಾಧ್ಯಮಗಳಲ್ಲೂ ಸುದ್ದಿಯಾಗಿತ್ತು. ಚಿತ್ರದುರ್ಗ, ತುಮಕೂರು, ಬಳ್ಳಾರಿ, ಹಾಸನ ಮೊದಲಾದೆಡೆ ಕಾಡುಗೊಲ್ಲರ ಹಟ್ಟಿಗಳಲ್ಲಿ ಮುಟ್ಟಾದ ಮಹಿಳೆಯರು ಮನೆಯಿಂದ ಹೊರಗೆ ಬಯಲಲ್ಲಿ, ಮರಗಳ ಅಡಿಯಲ್ಲೇ ಕಾಲ ಕಳೆಯಬೇಕಾಗುತ್ತದೆ. ಇಂದಿಗೂ ಈ ಆಚರಣೆ ಜಾರಿಯಲ್ಲಿದೆಯಾದರೂ, ಜನರ ಧಾರ್ಮಿಕ ನಂಬಿಕೆ ಎನ್ನುವ ಕಾರಣದಿಂದ ಸರಕಾರ, ಕಾನೂನು ಕೂಡ ಅಸಹಾಯಕವಾಗಿವೆ.

> **ಜಾತಿ ವಾದ, ಅಸ್ಪೃಶ್ಯತೆಯ ಕಾರಣಗಳಿಗಾಗಿ ತಮಿಳುನಾಡು ಆಗಾಗ ಸುದ್ದಿ ಮಾಡುತ್ತಲೇ ಇರುತ್ತದೆ. ಇಂತಹ ತಮಿಳುನಾಡಿನಲ್ಲಿ ಇದೀಗ ಎಂಟನೆಯ ತರಗತಿಯ ದಲಿತ ವಿದ್ಯಾರ್ಥಿನಿಯೊಬ್ಬಳನ್ನು ಮುಟ್ಟಾಗಿದ್ದಾಳೆ ಎನ್ನುವ ಕಾರಣ ಒಡ್ಡಿ ತರಗತಿಯಿಂದ ಹೊರಗೆ ಪರೀಕ್ಷೆ ಬರೆಸಿದ ಕೃತ್ಯವೊಂದು ಸುದ್ದಿಯಾಗುತ್ತಿದೆ.**

ತಮಿಳು ನಾಡಿನಲ್ಲಿ ಮುಟ್ಟಾಗಿದ್ದಾಳೆ ಎಂದು ಎಂಟನೇ ತರಗತಿಯ ಬಾಲಕಿಯನ್ನು ಪರೀಕ್ಷೆ ಬರೆಯುತ್ತಿದ್ದ ಸಂದರ್ಭದಲ್ಲಿ ತರಗತಿಯಿಂದ ಹೊರಹಾಕಿದ್ದು ಒಂದು ಕೃತ್ಯವಾದರೆ, ಬಳಿಕ ಆಕೆಯ ಪಾಲಕರಿಂದಲೇ ಅದನ್ನು ಸಮರ್ಥನೆ ಮಾಡಿಸಿರುವುದು ಇನ್ನೊಂದು ಕೃತ್ಯ. ಶಾಲೆಯ ಶಿಕ್ಷಕರ ಕೃತ್ಯವನ್ನು ಆಕೆಯ ಪಾಲಕರು ಕೂಡ ಪರೋಕ್ಷವಾಗಿ ಬೆಂಬಲಿಸಿ ಹೇಳಿಕೆ ನೀಡಿದ್ದರು. ಅಂದರೆ ಮಾನಸಿಕವಾಗಿ ಮುಟ್ಟಿನ ಬಗ್ಗೆ ಇಡೀ ಸಮಾಜವೇ ಮೌಢ್ಯದಲ್ಲಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ, ಈ ಕೃತ್ಯಕ್ಕಾಗಿ ಬರೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಸಾಕಾಗುವುದಿಲ್ಲ. ಸಮಾಜದಲ್ಲಿ ಮುಟ್ಟಾದ ಮಹಿಳೆಯರ ಕುರಿತಂತೆ ಸರಕಾರ ಜಾಗೃತಿ ಮೂಡಿಸಲು ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ. ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಜಾತೀಯತೆ ಮತ್ತು ಲಿಂಗತಾರತಮ್ಯ ಕಡಿಮೆ ಪ್ರಮಾಣದಲ್ಲಿದ್ದರೂ, ಮಹಿಳೆಯರ ಕುರಿತಂತೆ ಪುರುಷ ಪ್ರಧಾನ ಮನಸ್ಸು ದಿನದಿಂದ ದಿನಕ್ಕೆ ಸಂಕುಚಿತವಾಗುತ್ತಿದೆ. ಶೈಕ್ಷಣಿಕ ಮತ್ತು ಆರೋಗ್ಯವಲಯದಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿರುವ ಕೇರಳದಲ್ಲಿ ಮನೆಯಲ್ಲೇ ಹೆರಿಗೆ ಮಾಡಿಸುವ ಸಂಪ್ರದಾಯ ಹೆಚ್ಚುತ್ತಿದೆ ಎನ್ನುವ ಆತಂಕಕಾರಿ ವರದಿ ಬೆಳಕಿಗೆ ಬಂದಿದೆ. ಕೇರಳದಲ್ಲಿ ಪ್ರತಿವರ್ಷ 3 ಲಕ್ಷ ಹೆರಿಗೆಗಳು ನಡೆಯುತ್ತವೆ. ಇವುಗಳಲ್ಲಿ 500ಕ್ಕೂ ಅಧಿಕ ಹೆರಿಗೆಗಳು ಮನೆಯಲ್ಲೇ ನಡೆಯುತ್ತಿವೆ. ಈ ಹಿಂದೆ ಬುಡಕಟ್ಟು ಸಮುದಾಯದೊಳಗೆ ಇಂತಹ ಮನೆ ಹೆರಿಗೆಗಳು ನಡೆಯುತ್ತಿದ್ದವು. ಇಂದು ವಿದ್ಯಾವಂತರೇ ಈ ಸಂಪ್ರದಾಯಕ್ಕೆ ಬಲಿಬೀಳುತ್ತಾ ಮಹಿಳೆ ಮತ್ತು ಮಗುವಿನ ಪ್ರಾಣವನ್ನು ಪಣಕ್ಕಿಡುತ್ತಿದ್ದಾರೆ ಎನ್ನುವ ಅಂಶವನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಧಾರ್ಮಿಕ ವ್ಯಕ್ತಿಗಳು, ಆಯುರ್ವೇದ ಚಿಕಿತ್ಸಕರು, ಪ್ರಕೃತಿ ಚಿಕಿತ್ಸಕರು ಇಂತಹ ಹೆರಿಗೆಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ಮಲಪ್ಪುರಂನಲ್ಲಿ ಇಂತಹ ಹೆರಿಗೆಗಳ ಸಂಖ್ಯೆ ಅಧಿಕವಿದೆ ಎಂದು ಕೇರಳದ ಆರೋಗ್ಯ ಇಲಾಖೆ ಹೇಳುತ್ತಿದೆ. ಮುಟ್ಟು ಮತ್ತು ಹೆರಿಗೆ ಒಂದಕ್ಕೊಂದು ಪೂರಕವಾದ ಸಹಜ ಪ್ರಕ್ರಿಯೆಗಳಾಗಿವೆ. ಸೃಷ್ಟಿಕ್ರಿಯೆ ಎನ್ನುವ ಮಹತ್ತರ ಹೊಣೆಗಾರಿಕೆಯನ್ನು ನಿಭಾಯಿಸುವ ವರವನ್ನು ಪ್ರಕೃತಿ ಮಹಿಳೆಗೆ ಕೊಟ್ಟಿದೆ.



## ರಾಮಾಯಣ

### ವಸಿಷ್ಠನು ಸೀತಾದೇವಿಗೆ ವಸ್ತ್ರಾಭರಣಗಳನ್ನು ಕೊಡಿಸಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಆಮೇಲೆ ಕೈಕೇಯಿದೇವಿಯು ಸೀತಾದೇ ನಾರುಸೀರೆಗಳನ್ನು ಕೊಡಲು ಆ ದೇವಿಯು ಅವನ್ನು ತೆಗೆದುಕೊಂಡು ಆತೆ ಸನಂ ಬಲೆಯನ್ನು ಕಂಡು ಬೆದರುವಂತೆ ಕಂಗೆಟ್ಟು ಕಂಗಳಲ್ಲಿ ನೀರನ್ನು ತುಂಬಿಕೊಂಡು ತನ್ನ ಪತಿಯಾದ ಶ್ರೀರಾಮನನ್ನು ಕುರಿತು ವನದಲ್ಲಿರುವ ಮುನಿಗಳು ಇಂಥ ಬಟ್ಟೆಗಳನ್ನು ಹೇಗೆ ಉಡುವರೆಂದು ಕೇಳಿದಳು. ಒಂದು ನಾರುಸೀರೆಯನ್ನು ತನ್ನ ಕೊರಳಿಗೆ ಸುತ್ತಿಕೊಂಡು ಮತ್ತೊಂದನ್ನು ಕೈಯಲ್ಲಿ ಹಿಡಿದುಕೊಂಡು ಲಜ್ಜಿತೆಯಾಗಿ ಮುಖಕಾರತಿಗುಂದಿದ್ದ ಳು. ಶ್ರೀರಾಮನು ಶೀಘ್ರದಲ್ಲಿ ಬಾರ ವಯ ಸಮೀಪಕ್ಕೆ: ಬಂದು ಆ ದೇವಿಯು ಉಟ್ಟಿದ್ದ ಬಿಳಿಯಸೀರೆಯಮೇಲೆ ಆ ನಾರುಸೀರೆಯನ್ನು ತಾನೇ ಸುತಿ ದನು. ಅದನ್ನು ಕಂಡು ದಶರಥರಾಯನ ಅಂತಃಪುರದ ಸ್ತ್ರೀಯರೆಲ್ಲರೂ ಕಣ್ಣೀರಿಡುತ್ತಾ ಆತನನ್ನು ಕುರಿತು ಶ್ರೀರಾಮ್ಮ ದಶರಥರಾಯನ ಆಜ್ಞೆಯಿಂದ ವನಕ್ಕೆ ಹೋಗುವ ನೀನು ಸೀತಾದೇವಿಗೆ ನಾರುಸೀರೆಯನ್ನುಡಿಸಿ ವನಕ್ಕೆ ಏಕೆ ಪ್ರಯಾಣಮಾಡಿಸುತ್ತೀಯೆ ? ಈ ದೇವಿಯು ಅಂತರಂಗದಲ್ಲಿ ನಿನ್ನನ್ನು ಧ್ಯಾನಮಾಡಿಕೊಂಡು ಇಲ್ಲಿಯೇ ಇರಲಿ. ನೀನು ಲಕ್ಷ್ಮಣನನ್ನು ಕರೆದು ಕೊಂಡು ವನಕ್ಕೆ ಹೋಗು. ಸೀತಾದೇವಿಯು ವನದಲ್ಲಿ ತಪಸಿ ಒಗಳಹಾಗಿರುವುದು ಉಚಿತವಲ್ಲ. ಎಲ್ಲೆ ಸ್ವಾಮಿ, ನಿನ್ನನ್ನು ನಾವು ಬೇಡಿಕೊಳ್ಳುತ್ತೇವೆ. ಸೀತಾದೇವಿಯು ಇಲ್ಲಿಯೇ ಇರಲಿ. ನೀನು 9ನೇ ಶರಣೆಂದು ನಡೆಯುವವನಾದ್ದರಿಂದ ನಿನ್ನನ್ನು ತಡೆಯಲು ನಾವು ಶಕ್ತರಲ್ಲ'' ಎಂದು ನುಡಿದರು.

ಆ ಸಮಯದಲ್ಲಿ ತನ್ನ ಶೀಲಾದಿಸದ್ಗುಣಗಳಿಗೆ ಸಮನಾದ ಸೀತಾದೇವಿಗೆ ಶ್ರೀರಾಮನು ನಾರು ಸೀರೆಗಳನ್ನುಡಿಸುವುದನ್ನು ಕಂಡು ಆತನ ಗುರುವಾದ ವಸಿಷ್ಠಮುನೀಶ್ವರನು ಆ ದೇವಿಗೆ ನಾರು ಸೀರೆಗಳನ್ನುಡಿಸುವುದನ್ನು ನಿಲ್ಲಿಸಿ ಕೈಕೇಯಿ?ದೇವಿಯನ್ನು ಕುರಿತು ಹೀಗೆ ನುಡಿದನು : '' ಎಲೈ ದುಷ್ಟೆ! ಅಜ್ಞಾನಿ! ಕುಲಗೇಡಿಕಿ! ದಶರಥರಾಯನನ್ನು ವಂಚಿಸಿ ಸಮಸ್ತಕಾರ್ಯಗಳನ್ನೂ ಕೆಡಿಸಿದ ನಿನ್ನ ದುಷ್ಟಕೃತ್ಯಗಳಿಗೆ ಮಿತಿಯೇ ಇಲ್ಲ. ಸೀತಾದೇವಿಗೆ ನಾರುಸೀರೆಯನ್ನು ಕೊಟ್ಟೆ. ಈ ದೇವಿಯು ಏಕೆ ವನಕ್ಕೆ ಹೋಗಬೇಕು? ಈಕೆಯು ಇಲ್ಲಿಯೇ ಇದ್ದುಕೊಂಡು ಶ್ರೀರಾಮನಿಗೆ ದಶರಥರಾಯನು ಕೊಟ್ಟ ರಾಜ್ಯವನ್ನು ಪರಿಪಾಲಿಸಲಿ! ಲೋಕದಲ್ಲಿ ಸ್ಥಿ ಸ್ತ್ರೀಯರು ಗೃಹಸ್ಥರಿಗೆ ಅರ್ಧಶರೀರವಾದ್ದರಿಂದ ಗರಂ ತಾನೇ ಶ್ರೀರಾಮನೆಂದು ಭಾವಿಸಿಕೊಂಡು ರಾಜ್ಯಪರಿಪಾಲನವನ್ನು ಮಾಡಲಿ । ಹಾಗಲ್ಲದೆ ಸೀತಾದೇವಿಯೂ ವನಕ್ಕೆ ಹೋದಳಾದರೆ ನಾವೆಲ್ಲರೂ ರಾಜ್ಯವನ್ನು ಬಿಟ್ಟು ಶ್ರೀರಾಮನ ಸಂಗಡ ವನಕ್ಕೆ ಹೋಗುತ್ತೇವೆ. ಅಷ್ಟುಮಾತ್ರವೇ ಅಲ್ಲ; ಸಮಸ್ತ ಪುರಜನರೂ ತಮ್ಮ ತಮ್ಮ ಬಂಧುಬಳಗವೆಲ್ಲವನ್ನೂ ಕೂಡಿಕೊಂಡು ವನಕ್ಕೆ ಹೋಗುವರು. ಭರತಶತು ಘು ರಿಬ್ಬರೂ ಸ ಬಟ್ಟೆಗಳನ್ನುಟ್ಟುಕೊಂಡು ಅಣ್ಣವಾದ ಃಭಿ ಸೇವೆಯನ್ನೇ ಮಾಡಿಕೊಂಡಿರುವರು. ಆಮೇಲೆ ಸರ್ವಜನಶೂನ್ಯವಯವಾದ ಅಯೋಧ್ಯಾಪಟ್ಟಣವು ಗಿಡಬೆಳೆದು ಅರಣ್ಯವಾಗುವುದು. ಆಗ ನೀನೊಬ್ಬಳೇ ನಿನ್ನ ಮನಸ್ಸು 'ಬಂದಂತೆ ಇರು. ಶ್ರೀರಾಮನು ಇಲ್ಲದ ರಾಜ್ಯವು ನಿಲ್ಲಲಾರದು. ಈತನು ಕ ದಲ್ಲಿದ್ದರೂ ಅದೇ ಪಟ್ಟ3 ಔಣವಾಗುವುದು! ಭರತನು ದಶರಥರಾಯನಿಂದ ಜನಿಸಿದ್ದರೆ ತನ್ನ

ರಾಯಮ ಮನಃಪೂರ್ವಕವಾಗಿ ಕೊಡದಿದ್ದ ರಾಜ್ಯವನ್ನು ಎಂದಿಗೂ ಅಂಗೀಕರಿಸನು. ನೀನು ಭೂಮಿಯಿಂದ ಆಕಾಶಕ್ಕೆ ನೆಗೆದುಬಿದ ರೂ ಇಕ್ಷ್ವಾಕುವಂಶದ. ಚರಿತ್ರವನ್ನು ಬಲ್ಲವನಾದ ಭರತನು ದಶರಥರಾಯನ ಆಜಿ ಯನ್ನು ಮೀರಲಾರನು, ಪುತ್ರನಲ್ಲಿ ಅತ್ಯಂತ ಸ್ನೇಹವುಳ್ಳವಳಾಗಿದ್ದರೂ ನೀನು ಭರತನಿಗೆ ಕೇಡನ್ನೇ ಚಿಂತಿಸುತ್ತಿದ್ದೀಯೆ. ಲೋಕದಲ್ಲಿ ಶ್ರೀರಾಮನನ್ನು ಅಮಸರಿಸದಿರುವ ರಾಜ್ಯವೇ ಇಲ್ಲ.

ಮುಂದುವರಿಯುವುದು...

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ 134ನೇ ಜನ್ಮಜಯಂತಿ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು


ಡಾ.ಬಿ.ಆರ್. ಅಂಬೇಡ್ಕರ್ ರವರು 1891 ಏಪ್ರಿಲ್ 14 ರಂದು ಮಧ್ಯಪ್ರದೇಶದ ಮೋಹಿ ಎಂಬಲ್ಲಿ ಜನಿಸಿದರು. ತಂದೆ ರಾಮ್ಜೀ ಸತ್ಪಾಲ್, ತಾಯಿ ಭೀಮಾಬಾಯಿ. ಅಂಬೇಡ್ಕರ್ ರವರು 6ನೇ ವಯಸ್ಸಿನಲ್ಲಿದ್ದಾಗ ಅವರ ತಾಯಿಯನ್ನು ಮತ್ತು 21ನೇ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಂಡರು. ನಂತರ ತನ್ನ ತಂದೆಯ ತಂಗಿ ಸೋದರತ್ತೆಯಾದ ಮೀರಾ ಬಾಯಿರವರ ಆಶ್ರಯದಲ್ಲಿ ಬೆಳೆದರು. ಬಾಲ್ಯದಲ್ಲಿ ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ ಹಾಗೂ ಶಿಸ್ತನ್ನು ಮೈಗೂಡಿಸಿಕೊಂಡು, ಅಸ್ಪೃಷ್ಯ ನೋವನ್ನು ಮರೆತು ತನ್ನ ಪ್ರತಿಭೆಯಿಂದ ಗುಣಮಟ್ಟದ ಶಿಕ್ಷಣವನ್ನು ಪಡೆದು,ಹೆಚ್ಚಿನ ವ್ಯಾಸಂಗವನ್ನು ವಿದೇಶದಲ್ಲಿ ಮುಂದುವರಿಸಲು ಕೆಲವು ಉದಾರದಾನಿಗಳು ನೆರವಾದರು.

ಅವರ ಕಠಿಣ ಶ್ರಮಕ್ಕೆ ತಕ್ಕಂತೆ ಒಳ್ಳೆಯ ಸೌಕರ್ಯಗಳು ದೊರೆತು ಪ್ರತಿಭಾವಂತ ವಿದ್ಯಾರ್ಥಿಯಾಗಿ ಕಾನೂನು ಪದವೀಧರರಾಗಿ, ಅನೇಕ ಡಾಕ್ಟರೇಟ್ ಪದವಿಗಳನ್ನು ಗಳಿಸಿರುವ ಪೈಕಿ ಒಬ್ಬರಾಗಿರುತ್ತಾರೆ. ಶತ -ಶತಮಾನಗಳಿಂದ ಸಾಮಾಜಿಕ ಅನ್ಯಾಯಗಳಿಂದ ನಲುಗಿ ಹೋಗಿದ್ದ ದಲಿತರನ್ನು ಜಾಗೃತಗೊಳಿಸಿ ಅವರಿಗೆ ನ್ಯಾಯವಾಗಿ ಲಭಿಸಬೇಕಾಗಿದ್ದ ನಾಗರೀಕ ಹಕ್ಕುಗಳು,ಸೌಲಭ್ಯಗಳು, ಮತ್ತು ರಾಜಕೀಯ ಪ್ರಾತಿನಿಧ್ಯಗಳನ್ನು ದೊರಕಿಸಿಕೊಳ್ಳಲು ಅವರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ಭಾರತೀಯ ಸಮಾಜದಿಂದ ಅಸ್ಪೃಷ್ಯ ಎಂಬ ಕಳಂಕವನ್ನು ತೊಡೆದು ಹಾಕುವುದು ಅವರ ಬಾಳಿನ ಮುಖ್ಯ ಗುರಿ ಮತ್ತು ಉದ್ದೇಶವಾಗಿತ್ತು. ದಲಿತರನ್ನು ಸೈನ್ಯಕ್ಕೆ ಸೇರಿಸಿಕೊಳ್ಳದಿರುವುದರ ಬಗ್ಗೆ ಬ್ರಿಟೀಷ್ ಸರ್ಕಾರವನ್ನು ಹಾಗೂ ಮೇಲ್ಜಾತಿಯವರಿಂದ ಆಗುವ ಶೋಷಣೆಗೂ ಕೂಡ ಬಹಳವಾಗಿ ಖಂಡಿಸಿದರು. 1935 ರಲ್ಲಿ ಅಂಬೇಡ್ಕರ್ ರವರಿಗೆ 44 ವರ್ಷ ವಯಸ್ಸಿದ್ದಾಗ ಅವರ ಪ್ರೀತಿಯ ಧರ್ಮ ಪತ್ನಿ ರಮಾಬಾಯಿರವರು ತೀರಿಕೊಂಡರು. ತಮ್ಮ ಜನಾಂಗ ವಿದ್ಯಾವಂತರಾಗಬೇಕು ಎಂದು ತಿಳಿಸಿ,ಆ ಮೂಲಕ ಉನ್ನತವರ್ಗದವರ ಆಶ್ರಯಕ್ಕೆ ಕೈಚಾಚದೇ ಸ್ವಾಭಿಮಾನದಿಂದ ಬಾಳುವುದನ್ನು ಕಲಿಯಬೇಕೆಂದು ತಿಳಿಸಿದರು. ಅಷ್ಟೇ ಅಲ್ಲದೇ ಯಾವ ಧರ್ಮದಲ್ಲಿ ನಮಗೆ ಪ್ರೀತಿ ಆದರ,ಸಮಾನತೆಗಳು ದೊರೆಯಲಿಲ್ಲವೋ ಅಂತಹ ಧರ್ಮವನ್ನು ಬಿಟ್ಟು ಸಮತಾ ಭಾವನೆಯಿಂದ ಕಾಣುವ ಧರ್ಮವನ್ನು ಸೇರಬೇಕೆಂದು ಸಲಹೆ ಮಾಡಿದರು.ಅಂಬೇಡ್ಕರ್ ಅವರ ಈ ಸಲಹೆ ಇಡೀ ರಾಷ್ಟ್ರವನ್ನು ದಿಗ್ಭ್ರಮೆಗೊಳಿಸಿತು.

ಸ್ವಾತಂತ್ರ್ಯ ಭಾರತ ಪ್ರಧಾನಿ ನೆಹರುರವರ ಮಂತ್ರಿ ಮಂಡಲದಲ್ಲಿ ಕಾನೂನು ಸಚಿವರಾದರು. ಅಂಬೇಡ್ಕರ್ ಅವರ ಪಾಲಿಗೆ ಮತ್ತೊಂದು ಗುರುತರವಾದ ಹೊಣೆಗಾರಿಕೆ ಬಂದಿತ್ತು. ಸ್ವಾತಂತ್ರ್ಯ ಭಾರತದ ಸಂವಿಧಾನ ರಚಿಸಲು ಕರಡು ಸಮಿತಿ ಅಧ್ಯಕ್ಷರಾಗಿ ಅಂಬೇಡ್ಕರ್ ರವರು ಆಯ್ಕೆಗೊಂಡರು. ಅಂಬೇಡ್ಕರ್ ರವರು ಹಲವಾರು ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ವೈವಿಧ್ಯಮಯವಾದ ಭಾರತಕ್ಕೆ ಹೊಂದುವಂತಹ ರಾಜಕೀಯ, ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸುವಂತ ಶಾಸನಗಳನ್ನು ಜಾರಿಗೊಳಿಸಿ, ಸರ್ವ ಸಮಾನತೆಯ ಸಮ- ಸಮಾಜವನ್ನು ರಚಿಸಲು ಸಾಧ್ಯವಾಗುವಂಥ ಭಾರತ ಸಂವಿಧಾನವನ್ನು ರೂಪಿಸಿ ಕೊಟ್ಟು ಸಂವಿಧಾನ ಶಿಲ್ಪಿ ಎಂಬ ಬಿರುದಿಗೆ ಪಾತ್ರರಾದರು. ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದ್ದರೂ ಸಹ ಇವರಿಗೆ ಸೆರೆಮನೆ ವಾಸಕ್ಕೆ ಕಳುಹಿಸಲು ಬ್ರಿಟಿಷ್ ಸರ್ಕಾರಕ್ಕೆ ಅರ್ಹತೆ ಇರಲಿಲ್ಲ, ಕಾರಣ ಜಗತ್ತಿನ ಎಲ್ಲಾ ದೇಶಗಳ ಸಂವಿಧಾನದ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿರುವವರು ಹಾಗೂ ಇಂಗ್ಲೆಂಡಿನಲ್ಲಿ ಕಾನೂನು ಶಿಕ್ಷಣದಲ್ಲಿ ಡಾಕ್ಟರೇಟ್ ಪಡೆದವರು ಮಾತ್ರ ಬ್ರಿಟೀಷ್ ಆಫೀಸರ್ಸ್ ಕ್ಲಬ್ ನಲ್ಲಿ ಸಜೀವ ಸದಸ್ಯರಾಗಿ ಆಯ್ಕೆಯಾಗಿದ್ದರು. ಆದ್ದರಿಂದ ಅಲ್ಲಿಂದ ಅನುಮತಿ ಇಲ್ಲದೇ ಅವರಿಗೆ ಮುಟ್ಟುವ ಅಧಿಕಾರ ಬ್ರಿಟೀಷ್ ಸರ್ಕಾರಕ್ಕೆ ಇರಲಿಲ್ಲ. ಇವರು ಒಬ್ಬ ಏಕೈಕ ಭಾರತೀಯ ಸದಸ್ಯರೂ ಹೌದು. 1956 ಮೇ 27ರಂದು ಬುದ್ಧ ಜಯಂತಿಯಂದು ಡಾ:ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಸೇರಿಕೊಳ್ಳುವ ಮೂಲಕ ಅವರೊಡನೆ ಸುಮಾರು 3 ಲಕ್ಷ ಅನುಯಾಯಿಗಳು ಸಹ ಸ್ವಇಚ್ಛೆಯಿಂದ ಬೌದ್ಧಧರ್ಮಕ್ಕೆ ಸೇರಿಕೊಂಡರು. ಇಂತಹ ಮಹಾಮಾನವತಾವಾದಿ ಎಲ್ಲಾ ಧರ್ಮವೂ ಒಂದೇ ಎಂಬ ಘೋಷ ವಾಕ್ಯದಲ್ಲಿ ತಿಳಿಸಿರುವ ಕಾಲ-ದೇಶ, ಜಾತಿ,ಧರ್ಮ,ಪಕ್ಷ ಮೀರಿ ಬಾಳಿ ಬದುಕಿ ಮನುಕುಲಕ್ಕೆ ಮಿಗಿಲಾಗಿ ದೀನದಲಿತರ ಬಾಳಿಗೆ ಆಶಾಕಿರಣವಾದ ಹಿರಿಯ ಚೇತನ. ಸತ್ಯ ಸಂದೇಶ ನೀಡಿದ ಸಂಜೀವಿನಿ ಹಾಗೂ ಜ್ಞಾನ ಸಂದೇಶ ನೀಡಿದ ಅವರೇ ಅಜರಾಮರ.

> **1956 ಡಿಸೆಂಬರ್ 6 ರಂದು ಡಾ.ಬಿ.ಆರ್. ಅಂಬೇಡ್ಕರ್ ರವರು ತನ್ನ 65 ನೇ ವಯಸ್ಸಿನಲ್ಲಿ ರಾತ್ರಿ ನಿದ್ರಾವಸ್ಥೆಯಲ್ಲಿದ್ದಾಗ ಇಹ ಲೋಕವನ್ನು ತ್ಯಜಿಸಿದರು. ಭಾರತದ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ, ಅಸ್ಪೃಶ್ಯ ಜನಾಂಗದನಾಯಕ ಮಾನವ ಹಕ್ಕುಗಳನ್ನು ಕಾಪಾಡಲು ಶ್ರಮಿಸಿದ ಅಪ್ರತಿಮ ಹೋರಾಟಗಾರ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಾವಿಗಾಗಿ ಇಡೀ ದೇಶ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು. ಡಾ:ಬಿಆರ್ ಅಂಬೇಡ್ಕರ್ ರವರ ಮರಣೋತ್ತರವಾಗಿ 1990 ರಲ್ಲಿ ಭಾರತ ಸರ್ಕಾರ ಈ ಮಹಾನ್ ನಾಯಕರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.**

ಆದ್ದರಿಂದ ಇಂತಹ ಮಹಾನ್ ನಾಯಕನನ್ನು ನೆನೆಯುವುದು ಭಾರತೀಯರಾದ ನಮ್ಮೆಲ್ಲರ ಜವಾಬ್ದಾರಿ, ಹೊಣೆಗಾರಿಕೆ ಮತ್ತು ಕರ್ತವ್ಯ ಎಂದು ತಿಳಿದು ಇಂದು ಡಾ.ಬಿ.ಆರ್.ಅಂಬೇಡ್ಕರ್ ರವರ 134 ನೇ ವರ್ಷದ ಜನ್ಮಜಯಂತಿಯನ್ನು ಬಹಳ ಅರ್ಥ ಪೂರ್ಣವಾಗಿ ಆಚರಿಸುತ್ತಾ,ಅವರ ಆತ್ಮಕ್ಕೆ ಶಾಂತಿ, ಸದ್ಗತಿ ದೊರೆಯಲೆಂದು ಪ್ರಾರ್ಥಿಸೋಣ.



## ಸೌರಮಾನ ಯುಗಾದಿ



ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

ಚಿತ್ತಿರೈ ಮಾಸ ದಿನಾಂಕ ಒಂದು ಬಂದಿದೆ
ಹೊಸ ವರ್ಷದ ಶುಭಾರಂಭದ ದಿನ
ಆಗಿದೆ ಸೌರಮಾನ ಯುಗಾದಿ ಬಂತೋ..
ಹಬ್ಬದ ಸಡಗರ ತಂತೋ..
ಹೊಸ ವಷಾರಂಭದ ಶುಭ ದಿನಗಳು
ಹೊಸ ತನವು ಎಲ್ಲೆಲ್ಲೂ
ಸಿರಿ ತಂದಿತಪ್ಪ ಈ ಸೌರಮಾನ ಯುಗಾದಿ ಹಬ್ಬ
ಸಂತಸದ ರೂಪ ಈ ಚಿತ್ತಿರೈ ಹಬ್ಬ
ಮನೆಯ ಅಂಗಳದಿ ಬಣ್ಣದ ರಂಗೋಲಿ
ಮನೆಯ ಬಾಗಿಲು ಮಾವಿನ ತೋರಣ
ಊರ ತುಂಬೆಲ್ಲಾ ಹೊಸತು ನೊಡಾ
ನಾಡಿನ ಜನದ ಹಿಗ್ಗು ನೊಡಾ
ಹಬ್ಬದ ಸಿರಿಗೆ ತುಪ್ಪದ ಘಮ ಘಮ
ಹಸಿರಿನ ಗರಿಗೆ ಸಂಭ್ರಮದ ಸಮ ಸಮ
ಹರಿಯುವ ನೀರಲ್ಲಿ ತಲೆ ಎಣ್ಣೆ ಸ್ನಾನ
ನಾರಿಯರ ಮುಡಿ ತುಂಬಾ ಮಲ್ಲಿಗೆ
ನಾಡ ತುಂಬಾ ಸಂತಸ
ಎಲ್ಲೆಲೂ ಸೌರಮಾನ ಯುಗಾದಿ ಹಬ್ಬದ ಸಡಗರ.



## ರಾತ್ರಿ ಮಲಗುವ ಮುನ್ನ ಕೂದಲು ಬಾಚಿಕೊಳ್ಳೊದ್ರಿಂದ ಪ್ರಯೋಜನ

ಸಾಮಾನ್ಯವಾಗಿ ಕೆಲವರು ಮಲಗುವ ಮುನ್ನ ಕೂದಲು ಬಾಚಿಕೊಳ್ಳುವುದಿಲ್ಲ. ಆದರೆ ಮಲಗುವ ಮುನ್ನ ಕೂದಲನ್ನು ಬಾಚಿಕೊಳ್ಳುವುದು ಒಳ್ಳೆಯ ಅಭ್ಯಾಸವೆಂದು ಪರಿಗಣಿಸ ಲಾಗುತ್ತದೆ. ಇದು ಕೇವಲ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುವುದಲ್ಲದೆ , ಒತ್ತಡವನ್ನೂ ಕಡಿಮೆ ಮಾಡುವಲ್ಲಿ ಸಹಕಾರಿ. ಗಾಢ ನಿದ್ರೆ ಬರುವಂತೆ ಮಾಡಲೂ ಇದು ಸಹಾಯ ಮಾಡುತ್ತದೆ. ಆದ್ದರಿಂದ ಕೂದಲಿನ ಬೆಳವಣಿಗೆ ನೆತ್ತಿಯ ಆರೋಗ್ಯ ಮತ್ತು ಗಾಢ ನಿದ್ರೆಯನ್ನು ಉತ್ತೇಜಿಸುವುದಕ್ಕಾಗಿ ಮಲಗುವ ಮುನ್ನ ಕೂದಲನ್ನು ಬಾಚಿಕೊಳ್ಳುವುದು ಒಳ್ಳೆಯದು. ಇಷ್ಟೇ ಅಲ್ಲದೆ ಮಲಗುವಾಗ ಕೂದಲು ಗಂಟು ಗಂಟಾಗುವುದನ್ನು ಇದರಿಂದ ತಪ್ಪಿಸಬಹುದು ನೈಸರ್ಗಿಕ ಎಣ್ಣೆಗಳನ್ನು ನೆತ್ತಿಯ ಎಲ್ಲಾ ಭಾಗಗಳಿಗೂ ವಿತರಿಸಲು, ರಕ್ತದ ಹರಿವನ್ನು ಉತ್ತೇಜಿಸಲು ಬಾಚುವುದು ಸಹಾಯ ಮಾಡುತ್ತದೆ. ಇವೆಲ್ಲವೂ ಆರೋಗ್ಯಕರ ಕೂದಲು ಮತ್ತು ನೆತ್ತಿಯ ಆರೋಗ್ಯಕ್ಕೆ ಕೊಡುಗೆ ನೀಡುತ್ತವೆ.


> **ರಕ್ತದ ಹರಿವನ್ನು ಉತ್ತೇಜಿಸಲು ಬಾಚುವುದು ಸಹಾಯ**

**ಕೂದಲು ಗಂಟಾಗುವುದನ್ನು ತಪ್ಪಿಸುತ್ತದೆ:** ಮಲಗುವ ಮುನ್ನ ಕೂದಲು ಬಾಚಿಕೊಳ್ಳುವುದರಿಂದ ಕೂದಲ ಎಳೆಗಳು ಜಟಿಲವಾಗುವುದನ್ನು ಮತ್ತು ಗಂಟಾಗುವುದನ್ನು ತಡೆಯಬಹುದು. ಇದರಿಂದಾಗಿ ಕೂದಲು ಒಡೆಯುವ ಸಾಧ್ಯತೆ ಕಡಿಮೆಯಾಗುತ್ತದೆ. ಮತ್ತು ಆರೋಗ್ಯಕರ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಮಲಗುವ ಮೊದಲು ಕೂದಲು ಬಾಚುವುದರಿಂದ ಸಿಕ್ಕುಗಳು, ಗಂಟುಗಳು ಗಮನಾರ್ಹವಾಗಿ ಕಡಿಮೆಯಾಗುತ್ತವೆ. ಮಲಗುವಾಗ ದಿಂಬಿಗೆ ಕೂದಲು ಉಜ್ಜುವುದರಿಂದ ಹಾನಿಯಾಗಬಹುದು ಈ ಹಾನಿಯ ಸಾಧ್ಯತೆಯನ್ನು ಬಾಚುವುದರಿಂದ ಕಡಿಮೆ ಮಾಡಬಹುದು.



**ರಕ್ತ ಪರಿಚಲನೆಯನ್ನು ಉತ್ತೇಜಿಸುತ್ತದೆ:** ಆರೋಗ್ಯ ತಜ್ಞರ ಪ್ರಕಾರ ಮಲಗುವ ಮುನ್ನ ಕೂದಲನ್ನು ಚೆನ್ನಾಗಿ ಬಾಚಿಕೊಳ್ಳುವುದರಿಂದ ನೆತ್ತಿಗೆ ರಕ್ತದ ಹರಿವು ಹೆಚ್ಚಾಗಬಹುದು. ಇದು ಆರೋಗ್ಯಕರ ಕೂದಲಿನ ಬೆಳವಣಿಗೆಗೆ ಪ್ರಯೋಜನಕಾರಿಯಾಗಬಹುದು. ಮತ್ತು ಕೂದಲಿನ ಆರೋಗ್ಯವನ್ನು ಸುಧಾರಿಸುತ್ತದೆ. ಕೂದಲನ್ನು ಬಾಚುವಾಗ ನೆತ್ತಿಗೆ ನಿಧಾನವಾಗಿ ಮಸಾಜ್ ಮಾಡಿದಂತಾಗುತ್ತದೆ. ಇದು ಕಿರು ಚೀಲಗಳಿಗೆ ರಕ್ತದ ಹರಿವನ್ನು ಹೆಚ್ಚಿಸುತ್ತದೆ. ಮತ್ತು ಬಾಚುವುದರಿಂದ ನೆತ್ತಿಗೆ ಶಾಂತಗೊಳಿಸುವ ಪರಿಣಾಮ ಬೀರುವ ಮೂಲಕ ನಿದ್ರೆಯನ್ನು ಪ್ರೇರೇಪಿಸುತ್ತದೆ.

**ದಿನನಿತ್ಯದ ಕೊಳೆಯನ್ನು ತೆಗೆದುಹಾಕುತ್ತದೆ:** ನೀವು ಮಲಗುವ ಮುನ್ನ ಕೂದಲನ್ನು ಬಾಚುವುದರಿಂದ ಅದು ನಿಮ್ಮ ಕೂದಲಿನಲ್ಲಿ ದಿನವಿಡೀ ಪರಿಸರದಿಂದ ಉಂಟಾಗುವ ಆಗುವ ಕೊಳೆ, ಎಣ್ಣೆ ಮತ್ತು ಕಲ್ಮಶಗಳನ್ನು ತೆಗೆದು ಹಾಕಲು ಸಹಾಯ ಮಾಡುತ್ತದೆ. ಇಷ್ಟೇ ಅಲ್ಲದೆ ನಿಮ್ಮ ಕೂದಲು ಮತ್ತು ನೆತ್ತಿಯ ಆರೋಗ್ಯಕ್ಕಾಗಿ ಈ ಅಭ್ಯಾಸವನ್ನು ಅಳವಡಿಸಿಕೊಳ್ಳುವುದು ಉತ್ತಮ. ಇದು ನೈಸರ್ಗಿಕ ತೈಲವನ್ನು ಹರಡಲು ಸಹಾಯ ಮಾಡುತ್ತಾ ಕೂದಲು ಶುಷ್ಕಗೊಳ್ಳುವುದನ್ನು ತಡೆಯುತ್ತದೆ ಮತ್ತು ನೆತ್ತಿಯ ಆ ರೋಗ್ಯವನ್ನು ಉತ್ತೇಜಿಸುತ್ತಾ ರಕ್ತ ಪರಿ ಚಲನೆ ಮತ್ತು ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ



**ವಿಶ್ರಾಂತಿಯನ್ನು ಉತ್ತೇಜಿಸಲು ಒತ್ತಡವನ್ನು ಕಡಿಮೆ ಮಾಡುತ್ತದೆ:** ನೀವು ಕೂದಲನ್ನು ಬಾಚಿಕೊಳ್ಳುವುದು ಮೃದುವಾಗಿರಬೇಕು ಈ ಚಲನೆಯು ಶಾಂತಗೊಳಿ ಸುತ್ತದೆ ಮತ್ತು ಶಮನಗೊಳಿಸುತ್ತದೆ. ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಬಾಚಿಕೊಳ್ಳುವುದರಿಂದ ರಕ್ತ ಪರಿಚಲನೆಯನ್ನು ಸುಧಾರಿಸುತ್ತಾ ಒತ್ತಡ ವನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡುತ್ತದೆ ವಿಶ್ರಾಂತಿ, ಗಾಢನಿದ್ರೆಗಾಗಿ ಹೊಂದು ವಂತೆ ಮಾಡುತ್ತದೆ.

**ಕೂದಲು ತುದಿಯಲ್ಲಿ ಒಡೆಯುವುದನ್ನು ತಪ್ಪಿಸುತ್ತದೆ:** ರಾತ್ರಿ ಮಲಗುವ ಮುನ್ನ ಕೂದಲು ಬಾಚುವುದರಿಂದ ನೆತ್ತಿಯ ಕೂದಲು ಉದುರುವಿಕೆ ಮತ್ತು ನೆತ್ತಿಯನ್ನು ಉತ್ತೇಜಿಸುವಂತಹ ಕೆಲವು ಪ್ರಯೋಜನ ಗಳನ್ನು ನೀಡುತ್ತವೆ. ಕೂದಲನ್ನು ಬಾಚುವಾಗ ನೈಸರ್ಗಿಕ ಎಣ್ಣೆಗಳು ಸಮವಾಗಿ ವಿತರಿಸಲ್ಪಡುತ್ತವೆ ನಿಮ್ಮ ಎಳೆಗಳು ತೇವಾಂಶದಿಂದ ಕೂಡಿರುತ್ತಮೆ ಅತ್ತು ಶುಷ್ಕವಾಗುವುದು ಕಡಿಮೆಯಾಗುತ್ತದೆ. ಬಾಚುವುದರಿಂದ ಕೂದಲು ಒಡೆಯುವುದು ಕಡಿಮೆಯಾಗುತ್ತದೆ. ಇದರಿಂದ ನಿಮ್ಮ ಕೂದಲು ಆರೋಗ್ಯಕರವಾಗಿ ಮತ್ತು ದಟ್ಟವಾಗಿ ಬೆಳೆಯುವಂತೆ ಮಾಡುತ್ತದೆ.

**ನೆತ್ತಿಯ ಆರೋಗ್ಯವನ್ನು ಸುಧಾರಿಸುತ್ತದೆ:** ಮಲಗುವ ಮುನ್ನ ಕೂದಲನ್ನು ಬಾಚಿಕೊಳ್ಳುವುದರಿಂದ ಸತ್ತ ಚರ್ಮದ ಕೋಶಗಳು, ಎಣ್ಣೆ ಮತ್ತು ಇತರ ಕಲ್ಮಶಗಳನ್ನು ತೆಗೆದುಹಾಕುವ ಮೂಲಕ ನೆತ್ತಿಯ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಬಹುದು, ಇದು ಕೂದಲಿನ ಬೆಳವಣಿಗೆಯ ಸ್ಥಿತಿಯನ್ನು ಸುಧಾರಿಸುತ್ತದೆ. ನೆತ್ತಿಯಲ್ಲಿ ತಲೆಹೊಟ್ಟಾಗುವುದನ್ನು ಇದು ತಡೆಯುತ್ತದೆ, ಕೂದಲು ಕಿರುಚೀಲ ಗಳಿಗೆ ಸ್ವಚ್ಛವಾದ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ.

### ಖಡ್ಗ ಬಂದೂಕನ್ನು ಹಿಡಿಯದೆ ಸಾಮಾಜಿಕ ಬದಲಾವಣೆ ತಂದ ಕ್ರಾಂತಿಕಾರಿ– ಅಂಬೇಡ್ಕರ್

# ಜೀವನ ಸುಧೀರ್ಘವಾಗುವುದಲ್ಲ, ಮಹತ್ವದ್ದಾಗಿರಬೇಕು



ಪ್ರೊ. ಮಲ್ಲಿಕಾ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ತನ್ನ ಜೀವನವನ್ನು ಮುಡಿಪಾಗಿಟ್ಟು ಇತರರ ಬದುಕನ್ನು ಕಟ್ಟಿದ ಮಹಾನ್ ಚೇತನ. ಇವರ ಚಿಂತನೆಗಳು ಅಮೆರಿಕಾದ ಅಬ್ರಹಾಂ ಲಿಂಕನ್‌ಗೆ ಹೋಲಿಕೆಯಾಗಿದೆ. ಡಾ. ಬಾಬಾ ಸಾಹೇಬರ ಪ್ರಕಾರ ಜೀವನ ಸುಧೀರ್ಘವಾಗುವುದಲ್ಲ, ಮಹತ್ವದ್ದಾಗಿರಬೇಕು. ಅಪಾರ ಶೈಕ್ಷಣಿಕ ಅನುಭವ ಹೊಂದಿದ ಇವರು ಸಾಮಾಜದ ಹಿತ ಚಿಂತನೆಯನ್ನು ಮಾಡಿದ ಮಹಾನ್ ನಾಯಕರಾಗಿದ್ದಾರೆ. ಅಂಬೇಡ್ಕರ್ ಬದುಕಿನ ಕೆಲವೊಂದು ವಿಶೇಷ ಗುರುತುಗಳು ಅಸೆಂಬ್ಲಿಯಲ್ಲಿ ಡಾಕ್ಟರೇಟ್ ಡಿಗ್ರಿ ಉಳ್ಳ ಭಾರತೀಯ ಮೊಟ್ಟಮೊದಲ ಸದಸ್ಯರಾಗಿದ್ದಾರೆ. ಡಾ. ಬಾಬಾ ಸಾಹೇಬ್ ರವರು ಮುಂಬೈಯಿಂದ ವ್ಯಾಸಂಗ ಮಾಡಿ. ನಂತರ ಕೊಲಂಬಿಯಾ ವಿಶ್ವವಿದ್ಯಾನಿಲಯ ಹಾಗೂ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಪದವಿ ಪಡೆದಿರುವ ಮೊದಲ ಭಾರತೀಯರಾಗಿದ್ದಾರೆ.ಸಂಸ್ಕೃತ,ಪಾಳಿ ಉರ್ದು, ಹಿಂದಿ, ಮರಾಠಿ, ಫ್ರೆಂಚ್, ಜರ್ಮನ್, ಇಂಗ್ಲಿಷ್ ಸೇರಿದಂತೆ ಒಂಬತ್ತು ಭಾಷೆಗಳಲ್ಲಿ ಪರಿಣತಿಯನ್ನು ಪಡೆಯುತ್ತಾರೆ. ತಮ್ಮ ಖಾಸಗಿ ಗ್ರಂಥಾಲಯದಲ್ಲಿ ಸುಮಾರು ಒಂದುವರೆ ಲಕ್ಷ ಪುಸ್ತಕಗಳ ಸಂಗ್ರಹವಿತ್ತು. ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದು ಭಾರತ ಸಂವಿಧಾನ ಶಿಲ್ಪಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. 1956 ಅಕ್ಟೋಬರ್ 14ರಂದು ಅಂಬೇಡ್ಕರ್ ಅವರು 5 ಲಕ್ಷ ಅನುಯಾಯಿಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿ ವಿಶ್ವದ ಅತಿ ದೊಡ್ಡ ಧರ್ಮಾಂತರದ ಒಂದು ಘಟನೆಯನ್ನು ಸೃಷ್ಟಿಸಿರುತ್ತಾರೆ. ಸ್ವಾತಂತ್ರ್ಯ ನಂತರ ದೇಶದ ಪ್ರಥಮ ಕಾನೂನು ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಸಂವಿಧಾನ ರಚನಾ ಸಂದರ್ಭದಲ್ಲಿ ಪ್ರತಿಯೊಂದು ಅಕ್ಷರ ಪರಿಶೀಲನೆ ಮಾಡಿ ಭಾರತದ ದಕ್ಷ ಸಂವಿಧಾನ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. ಮಹಿಳಾ ಹಕ್ಕುಗಳ ಪೋಷಕರಾಗಿದ್ದು ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿರುತ್ತಾರೆ.



ಅವರು ಹಿಂದೂ ಕೋಡ್ ಬಿಲ್ ರಚನೆ ಮಾಡಿದ ಪ್ರಮುಖ ವ್ಯಕ್ತಿ. ಇದರಲ್ಲಿ ಸಮಾನ ನಾಗರಿಕ ಕಾಯ್ದೆ, ಹಿಂದೂ ವಿವಾಹ ಕಾಯ್ದೆ ಹಿಂದು ಉತ್ತರಾಧಿಕಾರಿ ಕಾಯ್ದೆಯನ್ನು ತಂದು ಮಹಿಳಾ ಸವಲೀಕರಣಕ್ಕೆ ಒತ್ತು ನೀಡಿರುತ್ತಾರೆ.

1827ರಲ್ಲಿ ದಲಿತರ ಕುಡಿಯುವ ನೀರಿನ ಹಕ್ಕಿಗಾಗಿ ಸತ್ಯಾಗ್ರಹವನ್ನು ಮುನ್ನಡೆಸಿದ್ದರು. ದಿನಕ್ಕೆ ಕೇವಲ ಮೂರರಿಂದ ನಾಲ್ಕು ಗಂಟೆಗಳಷ್ಟೇ ನಿದ್ದೆ ಮಾಡುತ್ತಿದ್ದ ಇವರು ಬಾಕಿ ಸಮಯದಲ್ಲಿ ಸಂಪೂರ್ಣ ಓದು ಬರಹ ಸಂಶೋಧನೆಗೆ ಸಮಯ ಮೀಸಲಾಡುತ್ತಿದ್ದರು. ಮೂರು ಪಿ ಎಚ್ ಡಿ ಡಿಗ್ರಿ, ಹಾಗೂ ಅಪಾರ ಪದವಿಗಳನ್ನು ಗಳಿಸಿದ ಇವರು ಅತ್ಯಂತ ಸುಶಿಕ್ಷಿತ ನಾಯಕ.ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಇವರು ಸಂವಿಧಾನವನ್ನು ರಚಿಸುವ ವಿಷಯದಲ್ಲಿ ಅತ್ಯಂತ ಹೆಚ್ಚಿನ ಯೋಗದಾನವನ್ನು ನೀಡಿರುತ್ತಾರೆ.

> **ಡಾಕ್ಟರೇಟ್ ಡಿಗ್ರಿ ಉಳ್ಳ ಭಾರತೀಯ ಮೊದಲ ಸದಸ್ಯ**

ಸಂವಿಧಾನ ಸಭೆಯ ಸದಸ್ಯರಾದ ಟಿಟಿ ಕೃಷ್ಣಮಾಚಾರಿ ಯವರು ಹೇಳಿರುವ ಪ್ರಕಾರ ಕರಡು ಸಮಿತಿಯ ಏಳು ಜನ ಸದಸ್ಯರಲ್ಲಿ ಯಾರೂ ಸಹ ಕೆಲಸವನ್ನು ನಿರ್ವಹಿಸಲು ಅನರ್ಹರಾದಾಗ ಬಾಬಾ ಸಾಹೇಬರು ಸ್ವತಹ ಡ್ರಾಕ್ಸಿಂಗ್ ಕೆಲಸವನ್ನು ಒಬ್ಬರೇ ನಿರ್ವಹಿಸಿದ್ದರು.

#### ಅಂಬೇಡ್ಕರ್ ಅವರು ಹೇಳಿದ ಹಾಗೆ ಶಿಕ್ಷಣವೇ ಶಕ್ತಿ ಆಗಬೇಕು

**ಸಮಾಜದಿಂದ ಶೋಷಿತ ವರ್ಗವು ಸಬ ಲೀಕರಣ ಗೊಳ್ಳಬೇಕಾದರೆ ಉತ್ತಮ ಶಿಕ್ಷಣದ ಅವಶ್ಯಕತೆ ಇದೆ. ಒಂದು ವೇಳೆ ಅಂಬೇಡ್ಕರ್ ಅವರು ಇನ್ನಷ್ಟು ಸಮಯ ಬದುಕಿದ್ದರೆ ನಮ್ಮ ದೇಶದ ಪರಿಸ್ಥಿತಿ ಇನ್ನಷ್ಟು ಸುಧಾರಣೆಯಾಗುತ್ತಿತ್ತು. ಅಂಬೇಡ್ಕರ್ ಅವರು ತಮ್ಮ ಪಾಲಿನ ಕರ್ತವ್ಯವನ್ನ ಈಗಾಗಲೇ ನಿರ್ವಹಿಸಿದ್ದಾರೆ. ಇನ್ನು ಮುಂದೆ ಸಮಾಜವು ತಮ್ಮ ಕರ್ತವ್ಯವನ್ನು ತಿಳಿದು ನಡೆದುಕೊಳ್ಳುವುದು ಬಹಳ ಮುಖ್ಯ ಆಗಿದೆ. ಸರ್ವಕಾಲದಲ್ಲಿ ವಿಶೇಷವಾಗಿ ಗೌರವಪೂರ್ಣವಾಗಿ ನೆನಸಿಕೊಳ್ಳುವ ಒಬ್ಬ ಭಾರತೀಯ ಎಂದರೆ ಅದು ಅಂಬೇಡ್ಕರ್ ಸರಿ. ಭಾರತೀಯ ಸಂವಿಧಾನ ಎಲ್ಲಿ ತನಕ ಇರುತ್ತದೆ ಅಲ್ಲಿ ತನಕ ಅಂಬೇಡ್ಕರ್ ಅವರು ಜನ ಮಾನಸದಲ್ಲಿ ಜೀವಂತರಾಗಿರುತ್ತಾರೆ.**

ಅಂಬೇಡ್ಕರ್ ಬಗೆಗಿನ ಕೆಲವು ತಪ್ಪು ತಿಳುವಳಿಕೆಗಳು ಬಾಬಾ ಸಾಹೇಬರು ದಲಿತ ಸಮಾಜಕ್ಕೆ ಸೇರಿದ ಮಾತ್ರಕ್ಕೆ ಹಾಗೂ ತಾವು ಶೋಷಣೆಯನ್ನು ಅನುಭವಿಸಿದ ಮಾತ್ರಕ್ಕೆ ದಲಿತರಿಗೆ ಸಹಾಯ ಮಾಡಿದ್ದಾರೆ ಅನ್ನುವ ತಪ್ಪು ತಿಳು ವಳಿಕೆ ಬೇಡ. ಇವರು ದಲಿತ ಮಾತ್ರವಲ್ಲ ದಲಿತೇತರ ಮಹಿಳೆಯರ, ಶ್ರಮಿಕರ ಉದ್ಧಾರಕ್ಕಾಗಿಯೂ ಕೂಡ ಶ್ರಮಿಸಿರುತ್ತಾರೆ.

ಕೊಲಂಬಿಯ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಅಂಬೇಡ್ಕರ್ ಪ್ರತಿಮೆ, ಅವರ ಕುರಿತು ಬರಹಗಳನ್ನು ಕಾಣಬಹುದು. ಹಾಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಮುಖ್ಯ ದ್ವಾರದಲ್ಲಿ ಕೇವಲ ಬಾಬಾ ಸಾಹೇಬ್ರು ಒಬ್ಬರದೇ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ.

ವಿದೇಶಗಳಲ್ಲಿ ಗೌರವಕ್ಕೆ ಪಾತ್ರರಾದ ಈ ಮಹಾನ್ ಚೇತನವನ್ನು ನಮ್ಮ ಸಮಾಜ ಯಾಕೆ? ತಪ್ಪು ತಿಳಿದುಕೊಳ್ಳುತ್ತದೆ. ಅವರು ಮನಸ್ಸು ಮಾಡಿದಿದ್ದರೆ ತಮಗಾದ ನೋವಿನಿಂದ ಭಾರತವನ್ನು ಬಿಟ್ಟು ವಿದೇಶದಲ್ಲಿ ಗೌರವದಿಂದ ಇದ್ದುಬಿಡಬಹುದಿತ್ತು, ಆದರೆ ಅವರು ತಮ್ಮ ಸ್ವಾರ್ಥವನ್ನು ನೋಡಲಿಲ್ಲ.ಡಾಕ್ಟರ್ ಅಂಬೇಡ್ಕರ್ ಅಪ್ಪಟ ದೇಶಭಕ್ತ ಒಂದು ವೇಳೆ ಅಂಬೇಡ್ಕರ್ ಅವರು ಇರದೇ ಇರುತ್ತಿದ್ದರೆ ಭಾರತದ ಪರಿಸ್ಥಿತಿ ಬೇರೆನೇ ಆಗಿರುತ್ತಿತ್ತು. ವ್ಯಕ್ತಿಯನ್ನು ಶೋಷಣೆಯಿಂದ ಬಿಡುಗಡೆಗೊಳಿಸುವುದೇ ನಿಜವಾದ ಸ್ವಾತಂತ್ರ್ಯ ಎಂದು ಅದಕ್ಕಾಗಿ ತಮ್ಮ ಜೀವನವನ್ನು ಮುಡಿ ಪಾಗಿರಿಸಿದರು. ಒಬ್ಬ ವ್ಯಕ್ತಿಯ ಮಹಾನತೆಯನ್ನು ಗುರುತಿಸಲು ಆತನ ಪ್ರೇರಣ ಬಿಂದುವನ್ನು ಮೊಟ್ಟ ಮೊದಲು ಗುರುತಿಸಬೇಕು. ಅಂಬೇಡ್ಕರ್ ಅವರು ಬುದ್ಧ, ಜ್ಯೋತಿಬಾಪುಲೆ, ತನ್ನ ತಾಯಿಯಿಂದ ಬಹಳಷ್ಟು ಜೀವನ ಪಾಠ, ಮಾನವೀಯ ಮೌಲ್ಯಗಳನ್ನು ತಿಳಿದುಕೊಂಡಿರುತ್ತಾರೆ ಹಾಗಾಗಿ ದೇಶವನ್ನು ತ್ಯಜಿಸುವ ಯೋಚನೆಯನ್ನು ಬಿಟ್ಟು ದೇಶೋದ್ಧಾರಕ್ಕಾಗಿ ಶ್ರಮ ಪಟ್ಟರು.

ಮಹಮ್ಮದ್ ಅಲಿ ಜಿನ್ನಾರ ಹಾಗೆ ತಮ್ಮ ಸಮುದಾಯದ ಜನರಿಗೆ ಪ್ರತ್ಯೇಕ ರಾಷ್ಟ್ರ ಬೇಕು ಎಂದು ಹೋರಾಡಲಿಲ್ಲ,ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ಹಾಗೆ ಸವರ್ಣಿಯರ ವಿರುದ್ಧ ಯುದ್ಧ ಸಾರಲಿಲ್ಲ, ಬದಲಿಗೆ ಅತ್ಯಂತ ಪ್ರಭಾವಶಾಲಿ ಸಂವಿಧಾನವನ್ನು ರಚಿಸಿದರು, ಅದರಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಸೇರಿಸಿ ಮೂಲಭೂತ ಹಕ್ಕುಗಳಲ್ಲಿ ಎಲ್ಲಕ್ಕಿಂತಲೂ ಮುಂಚೂಣಿಯಲ್ಲಿ ಸಮಾನತೆ ಹಕ್ಕನ್ನ ಇಟ್ಟರು. ಪೂರ್ವ ಬಂಗಾಳದ ಬಗ್ಗೆ ಅತ್ಯಂತ ಕಾಳಜಿ ವಹಿಸಿ ಸಾಂವಿಧಾನಿಕ ಸೌಲತ್ತುಗಳನ್ನು ನೀಡಿದರು.

ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವುದರ ಬಗ್ಗೆ ಅಸಮಾ ಧಾನವನ್ನು ವ್ಯಕ್ತಪಡಿಸಿದರು.

ಇವೆಲ್ಲವೂ ಅವರ ದೇಶಭಕ್ತಿ ಚಿಂತನೆಯನ್ನು ತೋರಿಸುತ್ತದೆ.

## ಕನ್ನಡಿಗರಿಗೆ ಅನ್ಯಾಯವಾದರೆ ಹೋರಾಟಕ್ಕೆ ಶತಸಿದ್ಧ: ಅಮೃತ ಪಾಟೀಲ್

• ಉದಯವಾಹಿನಿ ಕೊಪ್ಪಳ

ಕರ್ನಾಟಕಕ್ಕೆ ಮತ್ತು ಕ.ಕರ್ನಾಟಕದ ಜನರಿಗೆ ಅನ್ಯಾಯವಾದರೆ ಯಾವ ಹೋರಾಟಕ್ಕಾದರು ಶತಸಿದ್ಧ ಎಂದು ವೀರ ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷರಾದ ಅಮೃತ ಪಾಟೀಲ್ ಹೇಳಿದರು.

ಅವರು ಕೊಪ್ಪಳ ತಾಲ್ಲೂಕ ಪಂಚಾಯತ್ ಸಭಾಂಗಣದಲ್ಲಿ ಜರುಗಿದ ವೀರ ಕನ್ನಡಿಗರ ಸೇನೆಯ ಜಿಲ್ಲಾ ಘಟಕದ ಉದ್ಘಾಟನೆ ಸಮಾರಂಭವನ್ನು ನೆರವೇರಿಸಿ ಮಾತನಾಡಿದರು.

ಗಡಿ ವಿಷಯಗಳಲ್ಲಿ ಮಹಾರಾಷ್ಟ್ರ, ಗೋವಾ, ತಮಿಳುನಾಡು, ಆಂಧ್ರ ಮತ್ತು ತೆಲಂಗಾಣ ಹಾಗೂ ಕೇರಳ ರಾಜ್ಯಗಳಲ್ಲಿ ಕನ್ನಡಿಗರ ಮೇಲೆ, ಕನ್ನಡ ಭಾಷೆಯ ಮೇಲೆ ಅಗೌರವ ತೋರುತ್ತಿದ್ದಾರೆ ಇಂಥವರ ವಿರುದ್ಧ ನಮ್ಮ ಸಂಘಟನೆ ಹೋರಾಟ ಮಾಡುತ್ತದೆ. ಅಲ್ಲದೆ 371 ಜೆ ಕಲಂನ ಸಮರ್ಪಕವಾದ ನೀತಿಯನ್ನು ಜಾರಿ ಮಾಡಲು


ಉದಯವಾಹಿನಿ ಚಿತ್ರ

ಆಗ್ರಹಿಸುವುದರ ಜೊತೆಗೆ ಜನರ ನೋವು, ಸಂಕಟಗಳಿಗೆ ಧ್ವನಿಯಾಗಿ ನಮ್ಮ ವೀರ ಕನ್ನಡಿಗ ಸೇನೆ ಸದಾ ಸನ್ನದ್ಧವಾಗಿ ಹೋರಾಟಕ್ಕೆ ಶತಸಿದ್ಧವಿದೆ ಎಂದು ಎಂದರು. ಹಿರಿಯ ಸಂಘಟಕರಾದ ಗಾಳೆಪ್ಪ ಕಡೆಮನಿ ಮಾತನಾಡಿ, ಸಂಘಟನೆಗಳು ಜೀವಂತವಾಗಿ ಇರಬೇಕಾದರೆ, ಸದಾ ಸಾರ್ವಜನಿಕರ ಸೇವೆಗೆ ಅಣಿಯಾಗಬೇಕೆಂದು ಸಲಹೆ ನೀಡಿದರು.

ಡಾ. ಸುಬ್ಬಣ್ಣ ಕರಕನಹಳ್ಳಿ ಮಾತನಾಡಿ, ಉತ್ತಮ ಸಮಾಜ ನಿರ್ಮಾಣಕ್ಕಾಗಿ, ವೀರ ಕನ್ನಡಿಗ ಸಂಘಟನೆಯು ಕನ್ನಡದ ನೆಲ, ಜಲ ಭಾಷೆಯ ಸಮೃದ್ಧವಾದ ಬೆಳವಣಿಗೆಗೆ ಸಂಘಟಿತರಾಗಬೇಕು ಈ ಕಾರಣಕ್ಕಾಗಿ ನಿತ್ಯ ನಿರಂತರವಾಗಿ ಶ್ರಮವಹಿಸಿ ಸಂಘಟಕರು ದುಡಿಯಲಿ ಎಂದು ಕರೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ್. ಎಸ್. ಮಾತನಾಡಿ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ, ಕನ್ನಡವೇ ನಿತ್ಯ, ಸತ್ಯ, ಕನ್ನಡಕ್ಕಾಗಿ, ಕನ್ನಡಿಗರ ಪರವಾಗಿ ಅವರ ಧ್ವನಿಯಾಗಿ ವೀರ ಕನ್ನಡಿಗ ಸಂಘಟನೆಯು ಹಗಲಿರುಳು ಸ್ಪಂದಿಸುತ್ತದೆ ಎಂದರು.

**ಕನ್ನಡ ನಾಡು, ನುಡಿ, ಭಾಷೆಯ ಶ್ರೀಮಂತಿಕೆಯ ಜೊತೆಗೆ ಜನರ ನೋವು, ಸಂಕಟಗಳಿಗೆ, ವೀರ ಕನ್ನಡಿಗ ಸೇನೆಯು ಕರ್ತವ್ಯ ನಿರ್ವಹಿಸಿ, ಜನ ಮನದಲ್ಲಿ ಸದಾ ಅಚ್ಚ ಹಸಿರಾಗಿ ಉಳಿಯುವಂತಹ ಮಹತ್ವದ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಕರೆ ನೀಡುತ್ತಾ ನೆಲ, ಜಲ ಮತ್ತು ಕನ್ನಡದ ಭಾಷೆಯ ಸರ್ಕಾರಿ ಶಾಲೆಗಳ ಉಳಿವಿಗಾಗಿ, ಸದಾ ಹೋರಾಡುವ ಅನಿವಾರ್ಯತೆ ಹೆಚ್ಚಾಗಿದ್ದು. ಈ ನಿಟ್ಟಿನಲ್ಲಿ ಸಂಘಟನೆ ಕನ್ನಡಕ್ಕಾಗಿ ಸದಾ ಹೋರಾಡಲಿ -ಜಿ.ಎಸ್. ಗೋನಾಳ್**

### ತಾಪಮಾನವೂ ಗರಿಷ್ಠ ಮಟ್ಟಕ್ಕೆ ಏರುತ್ತಿದ್ದು, ಜಲಜೀವಿಗಳು ದಿನದಿಂದ ದಿನಕ್ಕೆ ಜರ್ಜರಿತವಾಗುತ್ತಿವೆ

## ತುಂಗಭದ್ರಾ ಜಲಾಶಯ ನೀರು ಮಲಿನ: ಹಸಿರು ಬಣ್ಣಕ್ಕೆ ತಿರುಗಿದ ನೀರು

• ಉದಯವಾಹಿನಿ ಹೊಸಪೇಟೆ

ಈ ಭಾಗದ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ಜಲಚರ ಪ್ರಾಣಿಗಳಿಗೆ ಕಂಟಕ ಎದುರಾಗಿದೆ. ಮತ್ತೊಂದೆಡೆ ತಾಪಮಾನವೂ ಗರಿಷ್ಠ ಮಟ್ಟಕ್ಕೆ ಏರುತ್ತಿದ್ದು, ಜಲ ಜೀವಿಗಳು ದಿನದಿಂದ ದಿನಕ್ಕೆ ಜರ್ಜರಿತವಾಗುತ್ತಿವೆ.

- ಕಾರ್ಖಾನೆ ತ್ಯಾಜ್ಯ ಡ್ಯಾಂ ನೀರಿಗೆ ಸೇರುತ್ತಿರುವ ಆರೋಪ-ಜಲಚರ ಜೀವಿಗಳು ಜರ್ಜರಿತ
- ತಾಪಮಾನವೂ ಗರಿಷ್ಠ ಮಟ್ಟಕ್ಕೆ ಏರುತ್ತಿದ್ದು, ಜಲಜೀವಿಗಳು ದಿನದಿಂದ ದಿನಕ್ಕೆ ಜರ್ಜರಿತವಾಗುತ್ತಿವೆ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಲಕ್ಷಾಂತರ ಕೃಷಿ ಭೂಮಿ, ಜನ-ಜಾನುವಾರುಗಳಿಗೆ ನೀರುಣಿಸುತ್ತಿರುವ ತುಂಗಭದ್ರಾ ಜಲಾಶಯಕ್ಕೆ ಈ ವರ್ಷ ಬರೋಬ್ಬರಿ 480 ಟಿಎಂಸಿ ನೀರು ಹರಿದು ಬಂದಿತ್ತು. ಆದರೆ, ಜಲಾಶಯದಲ್ಲಿ 30 ಟಿಎಂಸಿ ಹೂಳು ತುಂಬಿರುವುದರಿಂದ ಹಾಗೂ ಪರ್ಯಾಯ ಜಲಾಶಯದ ಕನಸು ಈಡೇರದ್ದರಿಂದ ನೀರಿನ ಸದ್ಬಳಕೆ ಕಷ್ಟಸಾಧ್ಯವಾಗಿದೆ. ಸದ್ಯ 7 ಟಿಎಂಸಿ ನೀರಿನ ಸಂಗ್ರಹವಿದೆ. ಜಲಾಶಯದಲ್ಲಿ ನೀರಿನ ಸಂಗ್ರಹ ಕುಸಿಯುತ್ತಿದ್ದಂತೆ ಕಳೆದ ವರ್ಷವೂ ಜಲಚರಗಳ ಮಾರಣ ಹೋಮ ನಡೆದಿತ್ತು. ನೀರಿನಲ್ಲೇ ಬದುಕುವ ಈ ಜೀವಿಗಳಿಗೆ ನೀರಿಲ್ಲದೆ ಜೀವ ಉಳಿಸಿಕೊಳ್ಳಲು ಹೆಣಗಾಡಬೇಕಿದೆ. ನೀರಿನ ಕೊರತೆಯ ಪರಿಣಾಮ ಮೀನು ಸೇರಿ ವಿವಿಧ ಜಲಚರ ಪ್ರಾಣಿಗಳ ಜೀವಕ್ಕೆ ಆತಂಕ ಎದುರಾಗಿದೆ. ತುಂಗಭದ್ರಾ ಜಲಾಶಯಕ್ಕೆ ಕಾರ್ಖಾನೆಗಳ ಜಲತ್ಯಾಜ್ಯ ಹರಿದು ಬರುತ್ತಿರುವ ಬಗ್ಗೆ ಮೊದಲಿನಿಂದಲೂ ದೂರುಗಳಿವೆ. ಜಲಾಶಯ ತುಂಬಿದ್ದಾಗಲೂ ನೀರು ಹಸಿರು ಬಣ್ಣಕ್ಕೆ ತಿರುಗಿರುವುದನ್ನು ನೋಡಿದ್ದೇವೆ. ಈ ಕುರಿತು ಸಂಬಂಧಪಟ್ಟ ಇಲಾಖೆಗಳು ಕಡಿವಾಣ ಹಾಕಿ ಜಲಚರ ಪ್ರಾಣಿಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕಿದೆ ಎಂದಿದ್ದಾರೆ ಡಾ.ಸಮದ್ ಕೊಟ್ಟೂರು ವನ್ಯಜೀವಿ ತಜ್ಞರು. ಟಿಬಿ ಡ್ಯಾಂ, ಈ ವರ್ಷ 10 ಕ್ರಸ್ಟ್‌ಗೇಟ್ ಬದಲು ತುಂಗಭದ್ರಾ ಜಲಾಶಯದ 10 ಕ್ರಸ್ಟ್‌ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್ ಅಳವಡಿಸಲು ಹೈದರಾಬಾದ್ ಮೂಲದ ಕೆಎಸ್ ಏಜೆನ್ಸಿಯ ನಾನ್ ಡಿಸ್ಟ್ರಿಕ್ಟಿವ್ ಟೆಸ್ಟಿಂಗ್ ತಜ್ಞರ ತಂಡ, ತುಂಗಭದ್ರಾ ಮಂಡಳಿಗೆ ಸಲಹೆ ನೀಡಿದೆ. ಎಲ್ಲಾ 32 ಕ್ರಸ್ಟ್‌ಗೇಟ್‌ಗಳನ್ನು ಒಂದೇ ವರ್ಷ ಬದಲಿಸುವುದು ಕಷ್ಟಸಾಧ್ಯ ಹಿನ್ನೆಲೆ ಮೊದಲ ಹಂತದಲ್ಲಿ 10 ಕ್ರಸ್ಟ್ ಗೇಟ್ ಬದಲಿಸಲು ನಿರ್ಧರಿಸಲಾಗಿದೆ.

ಮುಂದಿನ ಹತ್ತು ದಿನಗಳಲ್ಲಿ ಟೆಂಡರ್‌ಗೆ ಅಧಿ ಸೂಚನೆ ಹೊರಡಿಸಲು ಸಿದ್ಧತೆ ನಡೆದಿದೆ. ಈಗಾಗಲೇ 19 ನೇ ಗೇಟ್‌ಗೆ 2 ಕೋಟಿ ರೂ. ಅಂದಾಜು ವೆಚ್ಚದ ಟೆಂಡರ್ ಆಹ್ವಾನಿಸಲಾಗಿದೆ.


ಉದಯವಾಹಿನಿ ಚಿತ್ರ

**ಮುಂಜಾಗ್ರತೆ**

**ಮುಂದಿನ ಎರಡು ವರ್ಷಗಳಲ್ಲಿ ಎಲ್ಲಾ ಕ್ರಸ್ಟ್‌ಗೇಟ್‌ಗಳನ್ನು ಬದಲಿಸುವವರೆಗೆ ಯಾವುದೇ ಸಮಸ್ಯೆ ತಲೆದೋರದಂತೆ ಗಟ್ಟಿಗೊಳಿಸುವಂತೆ ತಜ್ಞರ ತಂಡ ಸಲಹೆ ನೀಡಿದೆ. ಈ ಗೇಟ್‌ಗಳ ಸಪೋರ್ಟ್‌ಗೆ ಅಯಂಗ್ ಪ್ಲೇಟ್ ಅಳವಡಿಸಲಾಗುತ್ತದೆ. ಕೆಳಗಡೆ ವೆಲ್ಡಿಂಗ್ ಮಾಡಿ ಸದೃಢಗೊಳಿಸಲು ನಿರ್ಧರಿಸಲಾಗಿದೆ. ಜಲಾಶಯ ಗೇಟ್ ತಜ್ಞ ಕಾಗಿನೇನಿ ಕನ್ನಯ್ಯ ನಾಯ್ಡು ಅವರು ಜಲಾಶಯಕ್ಕೆ ಇತ್ತೀಚೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಎಲ್ಲಾ ಗೇಟ್‌ಗಳನ್ನು ಬದಲಿಸಲು ಅವರು ಸಲಹೆ ನೀಡಿದ್ದಾರೆ ಎಂದು ತುಂಗಭದ್ರಾ ಮಂಡಳಿ ಸೂಪರಿಂಟೆಂಡೆಂಟ್ ಎಂಜಿನಿಯರ್ ನಾರಾಯಣ ನಾಯ್ಕ್ ತಿಳಿಸಿದ್ದಾರೆ.**

**ಕಾರ್ಖಾನೆಯಿಂದ ಹರಿದು ಬರುವ ತ್ಯಾಜ್ಯ**

**ಜಲಾಶಯದ ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದು ಒಂದೆಡೆಯಾದರೆ, ಸುತ್ತಲಿನ ಕಾರ್ಖಾನೆಗಳ ತ್ಯಾಜ್ಯವೂ ಜಲಾಶಯದ ಒಡಲು ಹರಿದುಬರುತ್ತಿರವುದು ಜಲಚರಗಳ ಸಂಕಷ್ಟವನ್ನು ಇಮ್ಮಡಿಗೊಳಿಸಿದೆ. ಕಾರ್ಖಾನೆಗಳು ಮತ್ತು ನದಿ ಪಾತ್ರದ ನಗರಗಳ ತ್ಯಾಜ್ಯ ನೇರವಾಗಿ ಹರಿದು ಬಂದ ಕೂಡಲೇ ಜಲಾಶಯದ ನೀರಿನ ಬಣ್ಣ ಹಸಿರು ಬಣ್ಣಕ್ಕೆ ತಿರುಗುತ್ತದೆ. ಮಾಲಿನ್ಯದಿಂದ ನೀರಿನಲ್ಲಿ ಆಮ್ಲಜನಕದ ಕೊರತೆ ಉಂಟಾಗುತ್ತದೆ. ಮೀನು ಸೇರಿ ಜಲಚರ ಪ್ರಾಣಿಗಳು ಸಾವಿನ ಕುಣಿಕೆಗೆ ಬಲಿಯಾಗುತ್ತಿವೆ. ಕಾರ್ಖಾನೆಯಿಂದ ಹರಿದು ಬರುವ ತ್ಯಾಜ್ಯಕ್ಕೆ ಶೀಘ್ರ ಕಡಿವಾಣ ಹಾಕಬೇಕು ಎಂಬುದು ಪರಿಸರ ಪ್ರೇಮಿಗಳ ಆಗ್ರಹ. ಜಲಾಶಯದ ನೀರನ್ನು ಕೃಷಿಯ ಜತೆಗೆ ಕುಡಿಯುವ ನೀರಿಗೂ ಬಳಸಲಾಗುತ್ತದೆ. ಬೇಸಿಗೆಯಲ್ಲಿ ನೀರಿನ ಪ್ರಮಾಣ ದಿನೇ ದಿನೆ ಇನ್ನೂ ತಳಮಟ್ಟಕ್ಕೆ ಹೋಗುತ್ತದೆ. ಈ ವೇಳೆ ಜಲಚರ ಜೀವಿಗಳಿಗೆ ಕಂಟಕ ತಪ್ಪಿದ್ದಲ್ಲ.**

## ವಾಡಿಯಲ್ಲಿ ನೀರಿನ ಸಮಸ್ಯೆ: ಆಯುಕ್ತರಿಗೆ ಪತ್ರ

• ಉದಯವಾಹಿನಿ ವಾಡಿ

ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಕುಡಿ ಯಲು, ಬಳಸಲು ನೀರಿಲ್ಲ, ಪುರಸಭೆ ಅಧಿಕಾರಿಗಳಿಗೆ ಕೇಳಿದರೆ ಅದೇ ಹಳೆ ಉತ್ತರ ಪೈಪ್ ಲೈನ್ ಸಮಸ್ಯೆ ಎನ್ನುತ್ತಾರೆ ಪದೇ ಪದೇ ಜನಸಾಮಾನ್ಯರು ನೀರಿಗಾಗಿ ಗೋಳಾಡುವಂತೆ ಮಾಡುತ್ತಿರುವ ಪುರಸಭೆಯ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಿ ಎಂದು ಬಿಜೆಪಿ ಅಧ್ಯಕ್ಷ ವೀರಣ್ಣ ಯಾರಿ ಅವರು ಸೇಡಂ ಸಹಾಯಕ ಆಯುಕ್ತರಿಗೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ. ಸುಮಾರು ಐವತ್ತೈದು ಸಾವಿರ ಜನಸಂಖ್ಯೆ ಇರುವ ಪಟ್ಟಣಕ್ಕೆ ಈ ರೀತಿ ನೀರಿನ ಸಮಸ್ಯೆ ಬರಬಾರದು ಎಂದು ಇಂಗಳಗಿ ಯಿಂದ ಎಸಿಸಿ ಕಂಪನಿಯ ಪೈಪ್ ಲೈನಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ 50 ಲಕ್ಷ ರೂಪಾಯಿಗಳು ವೆಚ್ಚದಲ್ಲಿ ಹೊಸ ಪೈಪ್ ಲೈನ್ ಮೂರು ವರ್ಷಗಳ ಹಿಂದೆಯೇ ಮಾಡಿದ್ದಾರೆ ಅದಕ್ಕೆ ಸಂಪರ್ಕ ಕಲ್ಪಿಸದೆ ನೀರಿನ ಸಮಸ್ಯೆ ಮುಂದುವರೆಸಿದ್ದಾರೆ. ಲಕ್ಷಾಂತರ ರೂಪಾಯಿ ಮೋಟಾರ್ ಪಂಪ್ ರಿಪೇರಿ, ಹೊಸ ಖರೀದಿ ಹೆಸರಲ್ಲಿ ಖರ್ಚು ಹಾಕುತ್ತಾರೆ ಪ್ರತಿ ದಿನ ನೀರು ಕೊಡುವುದು ಮಾತ್ರ ಇವರಿಂದಾಗುತ್ತಿಲ್ಲ. ಇದರ ಬಗ್ಗೆ ಸಾಕಷ್ಟು ಸಲ ಜಿಲ್ಲಾಧಿಕಾರಿಗಳಿಗೆ ಸೇರಿದಂತೆ ಸಂಭಂದಿಸಿದ ಮೇಲಾಧಿಕಾರಿಗಳಿಗೆ ದೂರು ನೀಡಿದರು ಪ್ರಯೋಜನ ವಾಗಿಲ್ಲ.ಇಂತಹ ಬೇಸಿಗೆ ಕಾಲದಲ್ಲಿ ನಮ್ಮ ಪಕ್ಕದಲ್ಲಿ ಎರಡೆರಡೂ ನದಿ ಗಳಿದ್ದರೂ ನೀರಿಗಾಗಿ ಜನ ಪರಿತಪಿಸುವಂತೆ ಇಲ್ಲಿನ ಪುರಸಭೆ ಯವರು ಮಾಡುತ್ತಿದ್ದಾರೆ.



ಆದರೆ ಎಸಿಸಿ ಹಾಗೂ ರೈಲ್ವೆ ಕಾಲೋನಿಯಲ್ಲಿ ಈ ರೀತಿಯಾದ ನೀರಿನ ಸಮಸ್ಯೆ ಇಲ್ಲಾ,ಆದರೆ ಈ ಪುರಸಭೆ ವ್ಯಾಪ್ತಿಯಲ್ಲಿ ಮಾತ್ರ ನೀರಿನ ಸಮಸ್ಯೆ ನಿರಂತರವಾಗಿದೆ, ಇದನ್ನು ತಾವು ಗಂಭೀರವಾಗಿ ಪರಿಗಣಿಸಿ ಕ್ರಮಕೈಗೊಳ್ಳಿ ಎಂದು ಆಗ್ರಹಿಸಿದ್ದಾರೆ.

## ಬೆಲೆ ಏರಿಕೆಯಿಂದ ಬಡವರ ಜೀವನ ದುಸ್ಥರವಾಗಿದೆ: ಸುವರ್ಣಾ

• ಉದಯವಾಹಿನಿ ತಾಳಿಕೋಟೆ

ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ನಂತರ ಒಂದಿಲ್ಲಾ ಒಂದು ಬೆಲೆ ಏರಿಕೆ ಮಾಡುತ್ತಾ ಬಂದಿದೆ ಸದ್ಯ ದಿನಬಳಕೆ ವಸ್ತುಗಳಿಗೂ ಬೆಲೆ ಏರಿಕೆ ಮಾಡುವ ಮೂಲಕ ಬಡಜನರ ಹೊಟ್ಟೆಯ ಮೇಲೆ ಹೊಡೆಯುವಂತಹ ಕಾರ್ಯ ಮಾಡಿದೆ ಎಂದು ಭಾರತೀಯ ಜನತಾ ಪಕ್ಷದ ಮಹಿಳಾ ಘಟಕದ ಜಿಲ್ಲಾ ಉಪಾಧ್ಯಕ್ಷೆ ಶ್ರೀಮತಿ ಸುವರ್ಣಾ ಬಿರಾದಾರ ಅವರು ಹೇಳಿದರು.

ಶನಿವಾರರಂದು ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಪೆಟ್ರೋಲ್, ಡಿಸೇಲ್ ಹಿಡಿದು ಹಾಲು ಮೊಸರು, ಟೋಲ್ ಶುಲ್ಕ, ವಿದ್ಯುತ್ ದರ, ಕಾರು ವಾಣಿಜ್ಯ, ಒಳಗೊಂಡು ಎಲ್ಲದರ ಬೆಲೆಯನ್ನು ಏರಿಸುವಂತಹ ಕಾರ್ಯ ಕಾಂಗ್ರೆಸ್ ಸರ್ಕಾರ ಮಾಡಿದೆ ದಿನನಿತ್ಯ ಬಡವರಿಂದ ಹಿಡಿದು ಎಲ್ಲರಿಗೂ ಅವಶ್ಯವಾಗಿರುವ ಹಾಲಿನ ದರ ಪ್ರತಿ ಲೀಟರ್‌ಗೆ 4 ರೂ. ಹೆಚ್ಚಳ ಮಾಡಿದ್ದಾರೆ ಇದರಿಂದ


ಉದಯವಾಹಿನಿ ಚಿತ್ರ

ಪ್ರತಿ ತಿಂಗಳಿಗೆ 120 ರೂ.ಗೂ ಅಧಿಕ ಹೊರೆ ಬಡವರಿಗೆ ಬಿಳ್ಳಲಿದೆ ಗ್ಯಾರಂಟಿ ಯೋಜನೆಗಳಿಂದ ಯಾರಿಗೂ ಉಪಯೋಗವಾಗುತ್ತಿಲ್ಲಾ ಹೆಂಡತಿಗೆ ಕೊಟ್ಟು ಗಂಡನಿಂದ ಕಸಿದುಕೊಳ್ಳುವಂತಹ ಕೆಲಸ ಕಾಂಗ್ರೆಸ್ ಸರ್ಕಾರದಿಂದ ನಡೆದಿದೆ ಒಂದೆಡೆ ಮಹಿಳೆಯರಿಗೆ ಬಸ್ ಫ್ರೀ ಎಂದು ಇನ್ನೊಂದೆಡೆ ಬಸ್ ದರ ಏರಿಕೆ ಮಾಡಲಾಗಿದೆ ವಿದ್ಯುತ್ ಫ್ರೀ ಎಂದು ಕೊಟ್ಟು ವಿದ್ಯುತ್ ದರ ಏರಿಸಲಾಗಿದೆ 100 ಬಾಂಡ್ ಇಂದು 500 ರೂ. ಏರಿಸಲಾಗಿದೆ ಬಡ 'ವರು ಮಧ್ಯಮವರ್ಗದವರು ಜೀವನ ನಡೆಸುವದೇ ದುಸ್ಥರವಾಗಿದೆ ಎಂದ ಅವರು ಕಾಂಗ್ರೆಸ್ ಸರ್ಕಾರದ ದುರಾಡಳಿತ ಖಂಡಿಸಿ ಭಾರತೀಯ ಜನತಾ ಪಕ್ಷವು ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಪ್ರಾರಂಬಿಸಿದ್ದು ಇದೇ ದಿ.17 ರಂದು ಈ ಜನಾಕ್ರೋಶ ಯಾತ್ರೆ ವಿಜಯಪುರ ನಗರಕ್ಕೆ ಆಗಮಿಸಲಿದ್ದು ಮುದ್ದೇಬಿಹಾಳ ಮತಕ್ಷೇತ್ರದಿಂದ ಅತೀ ಹೆಚ್ಚು ಕಾರ್ಯಕರ್ತರು ಈ ಜನಾಕ್ರೋಶ ಯಾತ್ರೆಯಲ್ಲಿ ಪಾಲ್ಗೊಂಡು ಸರ್ಕಾರದ ವಿರೂದ್ದ ದ್ವನಿಮೊಳಗಿಸಬೇಕೆಂದು ಮನವಿ ಮಾಡಿದರು. ರಾಘವೇಂದ್ರ ಮಾನೆ ಅವರು ಮಾತನಾಡಿ ಯುಗಾದಿ ಹಬ್ಬವೆಂದರೆ ಎಲ್ಲರಿಗೂ ವರ್ಷವಾಗಿದೆ ಅಂದು ಕಾಂಗ್ರೆಸ್ ಸರ್ಕಾರವು ಬೆಲೆ ಏರಿಕೆಯ ಬಿಸಿಯನ್ನು ಬಡವರಿಗೆ ಮುಟ್ಟಿಸಿದೆ ಬಡ ಜನರಿಗೆ ಅವಶ್ಯವಿರುವ ಹಲವಾರು ವಸ್ತುಗಳ ಬೆಲೆ ಗಗನಕ್ಕೇರಿಸುವ ಮೂಲಕ ಸರ್ಕಾರದ ಬೊಕ್ಕಸ ತುಂಬಿಕೊಳ್ಳಲು ನಿರ್ಧಾರ ಖಂಡನಿಯವಾಗಿದೆ.

**ಜನಾಕ್ರೋಶ ಯಾತ್ರೆಯಲ್ಲಿ ಪಾಲ್ಗೊಳ್ಳಲು ಮನವಿ**

### ಡಾ.ಬಿ.ಆರ್.ಅಂಬೇಡ್ಕರ್ ಅವರ 134 ನೇ ಜಯಂತಿಯ ಕಾರ್ಯಕ್ರಮ

## ಸೂಟು ಬೂಟಿನ ಡಾ.ಅಂಬೇಡ್ಕರ್ ದಮನಿತರಿಗೆ ಸ್ಫೂರ್ತಿ

• ಉದಯವಾಹಿನಿ ಕಲಬುರಗಿ

ಅಂಬೇಡ್ಕರ್ ಅವರಿಗೆ ಪತ್ರಕರ್ತರೊಬ್ಬರು ಸದಾ ಸೂಟು ಬೂಟಿನಲ್ಲಿರುವ ಬಗ್ಗೆ ಪ್ರಶ್ನೆ ಮಾಡಿದಾಗ, ನನ್ನ ಸೂಟುಬೂಟಿನಲ್ಲಿ ನೋಡಿದಾಗ ನನ್ನ ಸಮುದಾಯಕ್ಕೆ ನನ್ನಂತೆಯೇ ಓದಿ ಜ್ಞಾನ ಸಂಪಾದಿಸಿ ಸೂಟು ಬೂಟು ಹಾಕಬೇಕೆಂಬ ಸ್ಪೂರ್ತಿ ದೊರೆಯುತ್ತದೆ, ಹಾಗಾಗಿ ನಾನು ಸದಾ ಸೂಟು ಬೂಟು ಧರಿಸುತ್ತೇನೆ ಎಂದು ಹೇಳಿದ್ದರು. ಹೀಗಾಗಿ ಅಂಬೇಡ್ಕರ್ ಅವರ ಉಡುಪಿನ ಶಿಸ್ತು ಕೂಡ ದಮನಿತ ಸಮುದಾಯಗಳಿಗೆ ಪ್ರೇರಣೆಯಾಗಿದೆ ಎಂದು ಕಲಬುರಗಿ ದೇವಯ್ಯ ಗುತ್ತೇದಾರ ಅವರು ಅಭಿಪ್ರಾಯ ಪಟ್ಟರು.

ಕಲಬುರಗಿಯ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ.ಅಂಬೇಡ್ಕರ್ ಕಲಾ ಮತ್ತು ವಾಣಿಜ್ಯ ಪದವಿ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯದ ಡಾ.ಅಂಬೇಡ್ಕರ್ ವಿಚಾರ ವೇದಿಕೆ 12.04.2025 ರಂದು ಆಯೋಜಿಸಿದ ಡಾ.ಬಿ.ಆರ್.ಅಂಬೇಡ್ಕರ್ ಅವರ 134 ನೇ ಜಯಂತಿಯ ನಿಮಿತ್ಯ ಕೈಗೊಂಡ ಸರಣಿ ಉಪನ್ಯಾಸ ಕಾರ್ಯಕ್ರಮದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಬಹಳ ಮುಖ್ಯವಾಗಿ ಪತ್ರಕರ್ತರೂ ಆಗಿದ್ದರು.


ಉದಯವಾಹಿನಿ ಚಿತ್ರ

1920 ರಲ್ಲಿ ಮೂಕನಾಯಕ ಪತ್ರಿಕೆ ಆರಂಭಿಸಿ ನಂತರದಲ್ಲಿ ಬಹಿಷ್ಕೃತ ಭಾರತ, ಸಮತಾ, ಜನತಾ, 1956 ರ ಹೊತ್ತಿಗೆ ಪ್ರಬುದ್ಧ ಬಾರತ ಪತ್ರಿಕೆಗಳನ್ನು ತೆರೆಯುವ ಮೂಲಕ ದಲಿತ ಸಮುದಾಯವನ್ನು ಪ್ರಜ್ಞಾವಂತರನ್ನಾಗಿಸಲು ಪ್ರಯತ್ನಿಸಿದರು.

ಇದರ ಪರಿಣಾಮ ಇಂದು ಮಾಧ್ಯಮಗಳಲ್ಲಿ ದಲಿತ ದಮನಿತ ಕೆಳಜಾತಿಯ ವಿದ್ಯಾವಂತರು ಕೆಲಸ ಮಾಡುವಂತಾಗಿದೆ. ಇವರಿಗೆಲ್ಲಾ ಡಾ.ಅಂಬೇಡ್ಕರ್ ಅವರೇ ಸ್ಫೂರ್ತಿಯಾಗಿದ್ದಾರೆ' ಎಂದರು.

ಸಮಾರೋಪದ ಮಾತುಗಳನ್ನಾಗಿ ಸರಕಾರಿ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ.ಶಿವಾನಂದ ಲೇಂಗಟಿ ಅವರು ಮಾತನಾಡಿ, ಅಂಬೇಡ್ಕರ್ ಮತ್ತು ಸಂವಿಧಾನ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅಂಬೇಡ್ಕರ್ ತಮಗೆ ಆದ ಅಪಮಾನಗಳನ್ನೆಲ್ಲಾ ಅಡಿಪಾಯವಾಗಿಸಿಕೊಂಡು ಸಂವಿಧಾನ ಬರೆದಿದ್ದಾರೆ. ಹಾಗಾಗಿ ದಮನಕ್ಕೆ ಒಳಗಾದ ಎಲ್ಲರನ್ನೂ ಸಂವಿಧಾನ ರಕ್ಷಿಸುತ್ತದೆ. ಆಗಲೆ ದೇವದಾಸಿ ಪದ್ದತಿ, ವೇಶ್ಯಾವಾಟಿಕೆ ನಿರ್ಮೂಲನ ಆಗಬೇಕೆಂದು ಬಯಸಿ ದಮನಕ್ಕೆ ಒಳಗಾದ ಮಹಿಳೆಯರ ಸಂಘಟನೆ ಮಾಡಿದ್ದರು ಎಂದು ಅಂಬೇಡ್ಕರ್ ಕೊಡುಗೆಯನ್ನು ವಿವರಿಸಿದರು.

**ಅಂಬೇಡ್ಕರ್ ಕನಸು ಕಂಡ ಪೀಪಲ್ ಎಜುಕೇಶನ್ ಸೊಸೈಟಿಯ ಬೀಜವನ್ನು ಕಲಬುರಗಿಗೆ ತಂದು ನೆಟ್ಟು ಮರವಾಗಿಸಿದವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ್ ಖರ್ಗೆಜಿ ಅವರು. ಸೊಸೈಟಿಯ ಸಂಸ್ಥೆಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನು ಒದಗಿಸಿದ್ದಾರೆ ಆದರೂ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಮೊದಲಿನಂತೆ ಆಸಕ್ತಿ ವಹಿಸುತ್ತಿಲ್ಲ -ಚಂದ್ರಶೇಖರ ಶೀಲವಂತ**

## ಕಲ್ಲುಕಂಬದಲ್ಲಿ ಕನಕದಾಸ ಸಂಗೊಳ್ಳಿ ರಾಯಣ್ಣ ಪ್ರತಿಮೆಯ ಅನಾವರಣಗೊಳಿಸಿದ ಭೈರತಿ ಸುರೇಶ್

• ಉದಯವಾಹಿನಿ ಬಳ್ಳಾರಿ

ಭಕ್ತ ಕನಕದಾಸ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿಗಳನ್ನು ಜಿಲ್ಲೆಯ ಕುರುಗೋಡು ತಾಲ್ಲೂಕಿನ ಕಲ್ಲುಕಂಬ ಗ್ರಾಮದಲ್ಲಿ ಇಂದು ಮಧ್ಯಾಹ್ನ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮತ್ತು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಅನಾವರಣಗೊಳಿಸಿದರು.

ಬೆಂಗಳೂರಿನಿಂದ ಹೆಲಿಕಾಪ್ಟರ್ ನಲ್ಲಿ ಬಂದ ಸಚಿವರನ್ನು ಗ್ರಾಮದ ಮತ್ತು ಸಮುದಾಯದ ಜನತೆ ಸ್ವಾಗತಿಸಿದರು. ಮೊದಲಿಗೆ ಗ್ರಾಮದ ಹೊರ ವಲಯದ ಕಂಪ್ಲಿ ರಸ್ತೆಯಲ್ಲಿ ಮೇಷ್ಟ್ರು ಪಂಪಾಪತಿ ಅವರ ನಿವೇಶನದಲ್ಲಿ ರಚಿಸಿದ್ದ ಏಳು ಅಡಿ ಎತ್ತರದ ಸಂಗೊಳ್ಳಿ ರಾಯಣ್ಣನ ಕಂಚಿನ ಪ್ರತಿಮೆಯನ್ನು ಸಂಸದ ಇ.ತುಕಾರಂ, ಮಾಜಿ ಸಚಿವ ಬಿ.ನಾಗೇಂದ್ರ, ಶಾಸಕರಾದ ಜೆ.ಎನ್. ಗಣೇಶ್ ಮೊದಲಾದ ಗಣ್ಯರೊಂದಿಗೆ ಅನಾವರಣ ಮಾಡಿದರು.

ನಂತರ ಇಲ್ಲಿಂದ ಕುಂಬ ಕಳಸ, ಂಮಗಳ ವಾದ್ಯಗಳೊಂದಿಗೆ ಬೃಹತ್ ಆಕರ್ಷಕ ಮೆರವಣಿಗೆ ಮೂಲಕ ಗ್ರಾಮದ ಅಗಸೆ ಬಳಿ ಶಿಲಾ ಮಂಟಪದಲ್ಲಿ ರಚಿಸಿ ಭಕ್ತ ಕನಕದಾಸರ ಶಿಲಾ ಮೂರ್ತಿಯನ್ನು


ಉದಯವಾಹಿನಿ ಚಿತ್ರ

ಅನಾವರಣ ಮಾಡಲಾಯ್ತು.

ಬಳಿಕ ವೇದಿಕೆ ಕಾರ್ಯಕ್ರಮವನ್ನು ನಿರಂಜನಾನಂದಪುರಿ ಸ್ವಾಮಿಗಳು ಕನಕಗುರುಪೀಠ, ಕಾಗಿನೆಲೆ ಹಾಗು ಸಿದ್ದರಾಮಾನಂದಪುರಿ ಸ್ವಾಮಿಗಳು ತಿಂಥಿಣಿ ಬ್ರಿಡ್ಜ್ ಶಾಖಾಮಠ ಇವರ ಸಾನಿಧ್ಯದಲ್ಲಿ ಉದ್ಘಾಟಿಸಲಾಯ್ತು. ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ, ಕೃಷ್ಣರಾಜ ನಗರ ಶಾಸಕ ಡಿ.ರವಿಶಂಕರ್, ಹನೂರು ಶಾಸಕ ಎಂ.ಆರ್.ಮಂಜುನಾಥ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಶಾಸಕ ಭರತ್ ರೆಡ್ಡಿ, ವಿಧಾನ ಪರಿಷತ್ ಮಾಜಿ ಸದಸ್ಯ, ಕೆ.ಎಸ್.ಎಲ್.ಸ್ವಾಮಿ, ಕೆ.ಎ.ರಾಮಲಿಂಗಪ್ಪ, ಮೇಯರ್ ಮುಲ್ಲಂಗಿ ನಂದೀಶ್, ಮೊದಲಾದವರು ಇದ್ದರು.

## ಮಿನಿ ನ್ಯೂಸ್

### ಸ್ಮಾರಕಗಳು ಇತಿಹಾಸವನ್ನು ತಿಳಿಸುತ್ತವೆ

• ಉದಯವಾಹಿನಿ ಗುಳೇದಗುಡ್ಡ

ಭಾರತೀಯ ಸಾಹಿತ್ಯ, ಸಂಸ್ಕೃತಿ ಮತ್ತು ಚರಿತ್ರೆ ನಮಗೆ ತಿಳಿಯುವುದು ಈ ಐತಿಹಾಸಿಕ ಸ್ಮಾರಕಗಳ ಮೂಲಕ. ಹೀಗಾಗಿ ನಮ್ಮ ಪ್ರಾಚೀನ ಪರಂಪರೆಯ ಸಂಸ್ಕೃತಿಯನ್ನು ಮತ್ತು ಇತಿಹಾಸವನ್ನು ತಿಳಿಸುವ ಈ ಮಹತ್ವದ ಸ್ಮಾರಕಗಳನ್ನು ನಾವು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯ ಮಾಡಬೇಕು ಎಂದು ಉಪನ್ಯಾಸಕ ಮಹೇಶ ಬಡಿಗೇರ ಹೇಳಿದರು. ಅವರು ಭಂಡಾರಿ ಹಾಗೂ ರಾಠಿ ಮಹಾವಿದ್ಯಾಲಯದ ವತಿಯಿಂದ ಸಮೀಪದ ನಡೆಯುತ್ತಿರುವ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ನಾಲ್ಕನೇ ದಿನದಲ್ಲಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಗ್ರಾಮದಲ್ಲಿ ಇರುವಂತಹ ಕೆಲವು ಪ್ರಮುಖ ಇತಿಹಾಸಕ್ಕೆ ಸಂಬಂಧಪಟ್ಟಂತ ಸ್ಥಳ ಮಹತ್ವಗಳನ್ನು ಅರಿತುಕೊಳ್ಳಬೇಕು ಹಾಗೂ ಅವುಗಳ ಸಂರಕ್ಷಣೆಯನ್ನು ಮಾಡುವ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಜನರಿಗೆ ತಿಳುವಳಿಕೆ ಮೂಡಿಸಬೇಕು ಎಂದು ಸಲಹೆ ನೀಡಿದರು.

### ವಕ್ಫ್ ಕಾಯ್ದೆ ವಿರುದ್ಧ ಪ್ರಚೋದನಕಾರಿ ಹೇಳಿಕೆ: ಪಾಲಿಕೆ ಮಾಜಿ ಸದಸ್ಯ ಬಂಧನ

• ಉದಯವಾಹಿನಿ ದಾವಣಗೆರೆ

ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಕಾಯ್ದೆಯ ವಿರುದ್ಧ ಪ್ರಚೋದನಕಾರಿ ವಿಡಿಯೋ ಹರಿಬಿಟ್ಟು ಶಾಂತಿ ಕದಡಲು ಯತ್ನಿಸಿದ ಆರೋಪದ ಮೇರೆಗೆ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಅಹಮ್ಮದ್ ಕಬೀರ್ ಖಾನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ವಕ್ಫ್ ತಿದ್ದುಪಡಿ ಕಾಯ್ದೆಯ ವಿರುದ್ಧ ಪ್ರಚೋದನಾಕಾರಿಯಾಗಿ ಮಾತನಾಡಿದ ವಿಡಿಯೋವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದನ್ನು ಪರಿಶೀಲಿಸಿದ ಆಜಾದ್ ನಗರ ಠಾಣೆಯ ಪೊಲೀಸರು ಕಬೀರ್ ಖಾನ್ ವಿರುದ್ಧ ದೂರು ದಾಖಲಿಸಿಕೊಂಡಿದ್ದರು. ಆರೋಪಿ ಪತ್ತೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಅಶ್ವಿನ್ ಕುಮಾರ ನೇತೃತ್ವದ ತಂಡ ರಚಿಸಲಾಗಿತ್ತು. ರಾಜಸ್ಥಾನದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿದ ಪೊಲೀಸರು ಭಾನುವಾರ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು. ಆರೋಪಿಯನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

### ತಾಯಿ, ಮಗನ ಶವ ಪತ್ತೆ: ಕೊಲೆ ಶಂಕೆ

• ಉದಯವಾಹಿನಿ ಅಥಣಿ

ತಾಲ್ಲೂಕಿನ ಕೊಡಗಾನೂರ ಗ್ರಾಮದ ಕೃಷಿಭೂಮಿಯಲ್ಲಿ ಭಾನುವಾರ ತಾಯಿ ಮಗನ ಶವ ಪತ್ತೆಯಾಗಿದೆ. ಚಂದ್ರವ್ವ ಅಪ್ಪಾರಾಯ ಇಚೇರಿ(62), ಅವರ ಪುತ್ರ ವಿಠಲ ಅಪ್ಪಾರಾಯ ಇಚೇರಿ(43) ಮೃತರು. ಕಟ್ಟಿಗೆ ಮತ್ತಿತರ ವಸ್ತುಗಳಿಂದ ಗಂಭೀರವಾಗಿ ಹಲ್ಲೆ ಮಾಡಿ, ಕೊಲೆ ಮಾಡಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಹೊಲದಲ್ಲಿ ಇಬ್ಬರ ಮೃತದೇಹ ಸಿಕ್ಕಿವೆ. ಆದರೆ, ಘಟನೆಗೆ ನಿಖರವಾದ ಕಾರಣ ಮತ್ತು ಸುಳಿವು ಇನ್ನೂ ಸಿಕ್ಕಿಲ್ಲ. ಎಲ್ಲಾ ಆಯಾಮಗಳಲ್ಲಿ ತನಿಖೆ ಮಾಡಲಾಗುವುದು' ಎಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು. ಶ್ವಾನದಳವನ್ನೂ ಹೊಲಕ್ಕೆ ಕರೆಯಿಸಿ ಪರಿಶೀಲಿಸಲಾಯಿತು. ಐಗಳಿ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

### ಸಂಚಾರ ನಿಯಮ ಉಲ್ಲಂಘನೆ ದಂಡ ರಶೀದಿ ಕಳುಹಿಸಿ ವ್ಯಕ್ತಿಗೆ 7ಲಕ್ಷ ವಂಚನೆ

• ಉದಯವಾಹಿನಿ ಶಿವಮೊಗ್ಗ

ಸಂಚಾರ ನಿಯಮ ಉಲ್ಲಂಘನೆ ದಂಡ ರಶೀದಿ ಹೆಸರಿನಲ್ಲಿ ನಗರದ ವ್ಯಕ್ತಿಯೊಬ್ಬರಿಗೆ ಆನ್‌ಲೈನ್‌ನಲ್ಲಿ 17.42 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.'

ಸೈಬರ್ ವಂಚಕರು ಹೊಸ ರೂಪದಲ್ಲಿ ಜನರನ್ನು ಮೋಸದ ಬಲೆಗೆ ಬೀಳಿಸುತ್ತಲೇ ಇದ್ದಾರೆ. ವಾಟ್ಸ್ಆ್ಯಪ್‌ಗೆ ಪಿಡಿಎಫ್ ಲಿಂಕ್ ಕಳುಹಿಸಿ ತೆರೆಯುವಂತೆ ಪ್ರಚೋದಿಸುತ್ತಾರೆ. ಸಾರ್ವಜನಿಕರು ಆ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ ಸಾಕು ಅವರ ಖಾತೆಯಿಂದ ಹಣ ವರ್ಗಾವಣೆಯಾಗುತ್ತದೆ. ಈ ಜಾಲಕ್ಕೆ ನಗರದ ನಿವೃತ್ತ ಉದ್ಯೋಗಿಯೊಬ್ಬರು ಸಿಲುಕಿಕೊಂಡು ಹಣ ಕಳೆದುಕೊಂಡಿದ್ದಾರೆ.

ಏ.2 ರಂದು ವ್ಯಕ್ತಿಯೊಬ್ಬರ ವಾಟ್ಸ್ಆ್ಯಪ್‌ಗೆ 1,000 ಮೊತ್ತದ ಟ್ರಾಫಿಕ್ ಚಲನ್ ಇರುವ ಪಿಡಿಎಫ್ ಫೈಲ್ ಮಾದರಿಯ ಎಪಿಕೆ ಫೈಲ್ ಬಂದಿದೆ. ಇದರಲ್ಲಿ ಕರ್ನಾಟಕ ಸರ್ಕಾರದ ಚಿಹ್ನೆಯೂ ಕಂಡಿದ್ದರಿಂದ, ಲಿಂಕ್ ನಂಬಿದ ವ್ಯಕ್ತಿ ಅದರ ಮೇಲೆ ಕ್ಲಿಕ್ ಮಾಡಿದ್ದಾರೆ. ಬಳಿಕ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ಹಣ ಕಡಿತಗೊಂಡಿದ್ದರೂ ಅವರ ಗಮನಕ್ಕೆ ಏಪ್ರಿಲ್ 8ರಂದು ಹಣ ಕಳೆದುಕೊಂಡ ವ್ಯಕ್ತಿಗೆ ಕರೆ ಮಾಡಿದ ಅಪರಿಚಿತನೊಬ್ಬ, ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ಕಡಿತಗೊಂಡಿದೆ ಎಂದು ಮಾಹಿತಿ ನೀಡಿದ್ದ. ನಿವೃತ್ತ ಉದ್ಯೋಗಿಯು ಬ್ಯಾಂಕ್‌ಗೆ ತೆರಳಿ ಪರಿಶೀಲಿಸಿದಾಗ ಎಸ್‌ಬಿಐನ ಒಂದು ಖಾತೆಯಿಂದ 7 ಬಾರಿ ಹಣ ಕಡಿತವಾಗಿರುವುದು ಗೊತ್ತಾಗಿದೆ.

## ಬಿಸಿಲು ಲೆಕ್ಕಿಸದೆ ರಥ ಎಳೆದ ಜನ

• ಉದಯವಾಹಿನಿ, ಗಂಡಸಿ

ಅರೆ ತಮಟೆ, ನಗಾರಿ, ಕಹಳೆ ವಾದ್ಯಗಳ ಮನಸೂರೆಗೊಳ್ಳುವ ನಾದಕ್ಕೆ ಹೆಜ್ಜೆ ಹಾಕಿದ ಸೋಮನ ಕುಣಿತ, ಸಾಗರದಂತೆ ಸೇರಿದ್ದ ಜನಸ್ತೋಮದ ನಡುವೆ ಭಾನುವಾರ ಯರಗನಾಳು ಕೋಡಿದೇವಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಯರಗನಾಳು, ದೊಡ್ಡಯರಗನಾಳು, ಹಿರಿಯಾಳು. ಹೋರಿ ಮಂಗಳಾಪುರ, ಬಸವನಪುರ, ನಾರಾಯಣಪುರ, ತಿಮ್ಮಾಪುರ, ಜೋಯಿಸರಹಳ್ಳಿ, ಹಿರಿ ಸಮುದ್ರ ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಮಾವಿನ ತಳಿರು ತೋರಣ, ಬಾಳೆಕಂದು, ವಿದ್ಯುತ್ ದೀಪಗಳ ಅಲಂಕಾರ ನೋಡುಗರ ಮನಸೂರೆಗೊಳ್ಳುವಂತಿತ್ತು.

ವರ್ಣರಂಜಿತ ಪಟಗಳು, ಹೂಗಳಿಂದ ಅಲಂಕರಿಸಿದ ರಥದಲ್ಲಿದ್ದ ಕೋಡಿದೇವಿ ಉತ್ಸವ ಮೂರ್ತಿಯನ್ನು ಕಣ್ತುಂಬಿಕೊಂಡ ಭಕ್ತ ಸಾಗರ, ಧೂಪ ಹಾಕಿ, ಹಣ್ಣು ಧವನ ಎಸೆಯುವ ಮೂಲಕ ಪ್ರಾರ್ಥಿಸಿದರು. ಭಾನುವಾರ ನಸುಕಿನಲ್ಲಿ ಯರಗನಾಳು, ದೊಡ್ಡಯರಗನಾಳು, ಹಿರಿಯಾಳು ಗ್ರಾಮಗಳ ಚಿಕ್ಕರಥೋತ್ಸವ ನಡೆಯಿತು. ದೇವಿಯ ಮೂಲಸ್ಥಾನದಲ್ಲಿ ಪೂಜಾ ವಿಧಿವಿಗಳ ಬಳಿಕ ಕೋಡಿದೇವಿ, ಅಂತರಘಟ್ಟಮ್ಮ ದೇವಿಯ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮೂಲಕ ರಥದ ಬಳಿಗೆ ತಂದು ಪ್ರದಕ್ಷಿಣೆ ಹಾಕಿ, ರಥದಲ್ಲಿ ಕೂರಿಸಿಲಾಯಿತು. ರಥಕ್ಕೆ ಬಲಿ ಪ್ರದಾನ ಕಾರ್ಯ ನಡೆಸಿ ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಲಾಯಿತು.


ಉದಯವಾಹಿನಿ ಚಿತ್ರ

## ರಾಜ್ಯದಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರುವವರು ಅಲ್ಪಸಂಖ್ಯಾತರಾಗುತ್ತಾರಾ?: ರವಿ

### ಮುಸ್ಲಿಮರನ್ನ ಹಿಡಿಯಾಗಿ, ಹಿಂದೂಗಳನ್ನ ಒಡೆದು ಆಳುವ ನೀತಿಗೆ ನಮ್ಮ ಬೆಂಬಲವಿಲ್ಲ, ಭಯೋತ್ಪಾದನೆ ಜಾಲದ ವಿಸ್ತರಣೆಯ ಸಂಚು

• ಉದಯವಾಹಿನಿ, ಚಿಕ್ಕಮಗಳೂರು

ರಾಜ್ಯದ ಜನಸಂಖ್ಯೆಯಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರುವವರು ಅಲ್ಪಸಂಖ್ಯಾತರಾಗುತ್ತಾರಾ ಎಂದು ಮಾಜಿ ಸಚಿವ ಸಿ.ಟಿ ರವಿ ಪ್ರಶ್ನಿಸಿದರು.


ಚಿಕ್ಕಮಗಳೂರಿನಲ್ಲಿ ಜಾತಿ ಜನಗಣತಿ ವರದಿ ಮಾತನಾಡಿದ ಅವರು, ಸಂವಿಧಾನ ಬದ್ಧವಾಗಿ ಜಾತಿ ಜನಗಣತಿ ಮಾಡುವ ಅಧಿಕಾರ ಕೇಂದ್ರಕ್ಕೆ ಇರುವುದು. ಇವರು ಸಾಮಾಜಿಕ, ಆರ್ಥಿಕ ಸಮೀಕ್ಷೆ ಎಂದು ಹೇಳಿದ್ದಾರೆ. ಅಧಿಕೃತವಾಗಿ ಬಿಡುಗಡೆಯಾಗಿಲ್ಲ. ಈಗಲೇ ಸತ್ಯ - ಸುಳ್ಳು ಎಂದು ಪ್ರತಿಕ್ರಿಯಿಸುವುದು ಕಷ್ಟ. ಅನಧಿಕೃತವಾಗಿ ಸೋರಿಕೆ ಆಗಿರುವುದನ್ನು ಸತ್ಯ ಎಂದು ಭಾವಿಸಿದ್ರೆ, ಚರ್ಚೆ ಹುಟ್ಟು ಹಾಕುತ್ತದೆ ಎಂದರು.

ಅಲ್ಪಸಂಖ್ಯಾತರು ಯಾರು? ರಾಜ್ಯದ ಜನಸಂಖ್ಯೆಯಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರುವವರು ಅಲ್ಪಸಂಖ್ಯಾತರಾಗುತ್ತಾರಾ? ಮೀಸಲಾತಿ ಸಂಬಂಧ ಕೋರ್ಟ್‌ನಲ್ಲಿ ಮೊಕದ್ದಮೆ ಇದ್ದಾಗ ಕೇಂದ್ರ ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸಿತ್ತು. ಬಡ್ತಿ ಮೀಸಲಾತಿ ಪರ ಪ್ರಮಾಣಪತ್ರ ಸಲ್ಲಿಸಿತ್ತು. ಇದು ಮೀಸಲಾತಿ ಬಗ್ಗೆ ಬಿಜೆಪಿಗೆ ಇರುವ ಬದ್ಧತೆ. ಸಮಾಜ ಒಡೆಯುವ ದುರುದ್ದೇಶವನ್ನ ನಾವು ಬೆಂಬಲಿಸುವುದಿಲ್ಲ. ಕೆಲ ವ್ಯಕ್ತಿ, ಸಂಘಟನೆ, ರಾಜಕೀಯ ಪಕ್ಷಗಳು ಹಿಂದೂ ಸಮಾಜವನ್ನ ಜಾತಿವಾರು ಒಡೆಯುತ್ತಿವೆ ಎಂದು ಕಿಡಿಕಾರಿದರು. ವಕ್ಫ್ ಬೋರ್ಡ್ ಕಾಯ್ದೆ ವಿರುದ್ಧ ಕಾಂಗ್ರೆಸ್ ಅಪಪ್ರಚಾರ ಮಾಡ್ತಿದೆ. ಹಿಂದೆ ಸಿಎಎ ವಿರುದ್ಧವೂ ಕಾಂಗ್ರೆಸ್ ಇದೇ ಅಪಪ್ರಚಾರ ಮಾಡಿತ್ತು. ಕಾಂಗ್ರೆಸ್ ನಿಲುವು ರಾಷ್ಟ್ರಘಾತುಕ ನಿಲುವು, ಈಗ ವಕ್ಫ್ ಬಿಲ್‌ನಲ್ಲೂ ಅಪಪ್ರಚಾರ ಮಾಡುತ್ತಿ ದ್ದಾರೆ. ನ್ಯಾಯಬದ್ಧವಾದ ಜಮೀನನ್ನ ಯಾರೂ ಕಿತ್ತುಕೊಳ್ಳಲ್ಲ. ಅಕ್ರಮವಾಗಿ ಕಬಳಿಸಿದ ಜಮೀನನ್ನು ಬಿಡಲೇಬೇಕು. ರೈತರ ಜಮೀನು, ಸಾವಿರಾರು ವರ್ಷಗಳ ದೇವಸ್ಥಾನದ ಜಮೀನು ನಮ್ಮದು ಎಂದರೆ ಬಿಡಲೇಬೇಕು. ವಿಧಾನಸೌಧ, ಸುಪ್ರೀಂ ಕೋರ್ಟ್, ಹೈಕೋರ್ಟ್, ಪಾರ್ಲಿಮೆಂಟ್ ನಮ್ಮದು ಎಂದು ಹೇಳಲು ಅವಕಾಶ ಕೊಡಬೇಕಾ ಎಂದು ಪ್ರಶ್ನಿಸಿದರು.

ಅಕ್ರಮಕ್ಕೆ ಅವಕಾಶವಿಲ್ಲ, ನ್ಯಾಯಬದ್ಧವಾಗಿದ್ದರೆ ದಾಖಲೆ ನೋಡುತ್ತಾರೆ. ಗ್ರ್ಯಾಂಟ್ ಆಗಿದ್ಯಾ, ದಾನ ಕೊಟ್ಟಿದ್ದಾರಾ, ಕೊಂಡುಕೊಂಡಿದ್ದಾರಾ ನೋಡಬೇಕು. ಅದರಲ್ಲಿ ತಪ್ಪೇನಿದೆ. ಮಸೀದಿ ಕಿತ್ತುಕೊಳ್ತಾರೆ ಎಂದು ಅಪಪ್ರಚಾರ ಮಾಡ್ತಿದ್ದಾರೆ.

ಆ ರೀತಿ ಏನು ಆಗಲ್ಲ, ಅಪಪ್ರಚಾರದ ಜೊತೆ ಕಾಂಗ್ರೆಸ್ ಬೆಂಬಲ ನೀಡು ತ್ತಿರುವುದು ರಾಷ್ಟ್ರಘಾತುಕ. ಭಯೋತ್ಪಾದಕ ಸಂಘಟನೆ, ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳು ಸಂದರ್ಭದ ಲಾಭ ಪಡೆದು ಭಯೋತ್ಪಾದನೆ ಜಾಲದ ವಿಸ್ತರಣೆಯ ಸಂಚು ಮಾಡುತ್ತಿರುವ ಮಾಹಿತಿ ಬಂದಿದೆ ಎಂದು ಗುಡುಗಿದರು.

**ಹಿಂದೂ ಸಮಾಜವನ್ನ ಜಾತಿವಾರು ಒಡೆಯುತ್ತಿವೆ**



**ಮುಸ್ಲಿಮರಲ್ಲೂ 56 ಜಾತಿಗಳಿವೆ, ಮುಟ್ಟಿಸಿಕೊಳ್ಳದ ಜಾತಿ ಕೂಡ ಇದ್ದಾರೆ. ಪಸ್ಮಾಂಡ ಮುಸ್ಲಿಂ ಇದ್ದಾರೆ. ಯಾರು ಪ್ರವಾದಿ ವಂಶಸ್ಥರು ಅಂತ ಭಾವಿಸುತ್ತಾರೆ ಅವರು ಹೆಣ್ಣು ಕೊಡಲ್ಲ, ಹೆಣ್ಣು ತರಲ್ಲ. ಮುಸ್ಲಿಮರನ್ನ ಹಿಡಿಯಾಗಿ, ಹಿಂದೂಗಳನ್ನ ಒಡೆದು ಆಳುವ ನೀತಿಗೆ ನಮ್ಮ ಬೆಂಬಲವಿಲ್ಲ. ಸಾಮಾಜಿಕ ನ್ಯಾಯ ಬಿಜೆಪಿ ಬದ್ಧತೆಯಾಗಿದೆ. ಅದಕ್ಕೆ ನಾವು ಬದ್ಧರಾಗಿದ್ದೇವೆ -ಸಿ.ಟಿ ರವಿ, ಮಾಜಿ ಸಚಿವ**

**ಸಂವಿಧಾನ ಬಾಹಿರವಾಗಿ ನಡೆದುಕೊಳ್ಳಬೇಕೆಂದು ಕೈ ಸಂಚು**

**ಮನವಿ ಕೊಟ್ಟರೆ ಆಗಲ್ಲ. ಒಂದೊಂದು ಊರಲ್ಲಿ 10 ಹೆಣ ಬೀಳಬೇಕು ಎಂದು ಕಾಂಗ್ರೆಸ್ ಕಾರ್ಪೋರೇಟರ್ ಕಬೀರ್ ಖಾನ್ ಹೇಳುತ್ತಾನೆ. ರೈಲು, ಬಸ್‌ಗಳನ್ನು ಸುಡಬೇಕು. ದೊಂಬಿ ನಡೆಯಬೇಕು ಆಗ ಮಾತ್ರ ಬಗ್ಗಿಸಬಹುದು ಎಂದು ಹೇಳುತ್ತಾನೆ. ಪ್ರಜಾಪ್ರಭುತ್ವ ವಿರೋಧಿಯಾಗಿ ಭಯೋತ್ಪಾದನೆ ನಡೆಸಬೇಕು ಎಂದು ಎಂದು ಹೇಳುವವನು ಕಾಂಗ್ರೆಸ್ ಪಕ್ಷ ಕಾರ್ಪೋರೇಟರ್. ಈವರೆಗೂ ಪಕ್ಷ ಅವನನ್ನ ಕಿತ್ತು ಹಾಕಿಲ್ಲ. ಫತ್ವಾ ಹೊರಡಿಸಿಲ್ಲ, ಮುಸ್ಲಿಂ ಸಂಘಟನೆಯೂ ಅದನ್ನ ತಪ್ಪು ಅಂತ ಹೇಳಿಲ್ಲ. ಸಂವಿಧಾನ ಬಾಹಿರವಾಗಿ ನಡೆದುಕೊಳ್ಳಬೇಕೆಂದು ಸಂಚು ನಡೆಸಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತಿದೆ ಎಂದು ಆರೋಪಿಸಿದರು.**

## ಭಾರತೀಯ ಔಷಧ ಕಂಪನಿ ಮೇಲೆ ರಷ್ಯಾ ಕ್ಷಿಪಣಿ ದಾಳಿ?



**ಮಾಸ್ಕೋ:** ಉಕ್ರೇನ್‌ನ ರಾಜಧಾನಿ ಕೈವ್‌ನಲ್ಲಿರುವ ಭಾರತೀಯ ಔಷಧ ಕಂಪನಿಯ ಗೋಡೌನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ ಮಾಡಿದೆ. ದಾಳಿಯ ಬಗ್ಗೆ ಪ್ರತಿಕ್ರಿಯಿಸಿರುವ ಭಾರತದಲ್ಲಿರುವ ಉಕ್ರೇನ್ ರಾಯಭಾರ ಕಚೇರಿ, ನಮ್ಮ ದೇಶದಲ್ಲಿರುವ ಭಾರತೀಯ ಕಂಪನಿಗಳನ್ನು ರಷ್ಯಾ ಟಾರ್ಗೆಟ್ ಮಾಡಿದೆ ಎಂದು ಆರೋಪಿಸಿದೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಉಕ್ರೇನ್‌ನ ರಾಯಭಾರ ಕಚೇರಿ, ಭಾರತೀಯ ಔಷಧ ಕಂಪನಿ ಕುಸುಮ್‌ನ ಗೋದಾಮಿನ ಮೇಲೆ ರಷ್ಯಾ ದಾಳಿ ಮಾಡಿದೆ.

ಭಾರತದೊಂದಿಗೆ ರಷ್ಯಾ ವಿಶೇಷ ಸ್ನೇಹವಿದೆ ಎಂದು ಹೇಳಿಕೊಳ್ಳುತ್ತಲೇ, ಭಾರತೀಯ ಕಂಪನಿಗಳನ್ನು ಗುರಿಯಾಗಿಸಿಕೊಂಡಿದೆ. ಮಕ್ಕಳು ಮತ್ತು ವೃದ್ಧರಿಗೆ ಮೀಸಲಾದ ಔಷಧಿಗಳನ್ನು ನಾಶಪಡಿಸಿದೆ ಎಂದು ಆಕ್ರೋಶ ಹೊರಹಾಕಿದೆ. ಭಾರತೀಯ ಉದ್ಯಮಿ ರಾಜೀವ್ ಗುಪ್ತಾ ಒಡೆತನದ ಕುಸುಮ್, ಉಕ್ರೇನ್‌ನ ಅತಿದೊಡ್ಡ ಔಷಧ ಸಂಸ್ಥೆಗಳಲ್ಲಿ ಒಂದಾಗಿದೆ. ಅಗತ್ಯ ಔಷಧಗಳಿಗಾಗಿ ಕಂಪನಿಯ ಉತ್ಪನ್ನಗಳು ಉಕ್ರೇನ್‌ನಾದ್ಯಂತ ನಿರ್ಣಾಯಕವಾಗಿವೆ. ಇನ್ನೂ ಗೋಡೌನ್ ಮೇಲೆ ಕ್ಷಿಪಣಿ ದಾಳಿ ನಡೆದಿಲ್ಲ, ಡ್ರೋಣ್ ದಾಳಿ ನಡೆದಿದೆ ಎನ್ನಲಾಗಿದೆ.

### ಐಫೆಲ್ ಟವರ್‌ಗಿಂತ 3 ಪಟ್ಟು ಹೆಚ್ಚು ತೂಕದ ಸೇತುವೆ ಉದ್ಘಾಟನೆಗೆ ಸಜ್ಜು

## ವಿಶ್ವಕ್ಕೆ ಚೀನಾದ ಇಂಜಿನಿಯರಿಂಗ್ ಸಾಮರ್ಥ್ಯದ ಪ್ರದರ್ಶನ

**ಬೀಜಿಂಗ್:** ಚೀನಾವು ಜೂನ್‌ನಲ್ಲಿ ವಿಶ್ವದ ಅತಿ ಎತ್ತರದ ಹುಯಾಜಿಯಾಂಗ್ ಗ್ರ್ಯಾಂಡ್ ಕ್ಯಾನ್ಯನ್ ಸೇತುವೆಯನ್ನು ಉದ್ಘಾಟಿಸಲು ಸಿದ್ಧವಾಗಿದೆ. ಈ ಸೇತುವೆಯು ಮೂರು ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ಉದ್ದವಿದೆ. ಇದು ಐಫೆಲ್ ಟವರ್‌ಗಿಂತ 200 ಮೀಟರ್ ಎತ್ತರವಾಗಿದೆ.

ಅಲ್ಲದೆ, ಐಫೆಲ್ ಟವರ್‌ಗಿಂತ ಮೂರು ಪಟ್ಟು ಹೆಚ್ಚು ತೂಕವನ್ನು ಹೊಂದಿದೆ. 2,200 ಕೋಟಿ ರೂಪಾಯಿ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದು ಚೀನಾದ ಎಂಜಿನಿಯರಿಂಗ್ ಸಾಮರ್ಥ್ಯವನ್ನು ತೋರಿಸುತ್ತದೆ. ಗುಯಿಝೌ ಪ್ರಾಂತ್ಯವನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಗುರಿಯನ್ನು ಹೊಂದಿದೆ. ಈ ಸೇತುವೆಯಿಂದ ಒಂದು ಗಂಟೆಯ ಪ್ರಯಾಣದ ಸಮಯವನ್ನು ಕೇವಲ ಒಂದು ನಿಮಿಷಕ್ಕೆ ಇಳಿಸಬಹುದು. ಈ ಯೋಜನೆಯು ಚೀನಾದ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸುತ್ತದೆ ಎಂದು ಚೀನಾದ ರಾಜಕಾರಣಿ ಝೂಂಗ್ ಶೆಂಗ್ಲಿನ್ ಹೇಳಿದ್ದಾರೆ. ಭೂಮಿಯ ಬಿರುಕನ್ನು ದಾಟುವ ಈ ಸೂಪರ್ ಪ್ರಾಜೆಕ್ಟ್ ಚೀನಾದ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

ಗುಯಿಝೌವನ್ನು ವಿಶ್ವದರ್ಜೆಯ ಪ್ರವಾಸಿ ತಾಣವನ್ನಾಗಿ ಮಾಡುವ ಗುರಿಯನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದ್ದಾರೆ.

ಸೇತುವೆಯ ಉಕ್ಕಿನ ಕಂಬಗಳು ಸುಮಾರು 22,000 ಮೆಟ್ರಿಕ್ ಟನ್ ತೂಕವಿದೆ.

ಅಂದರೆ, ಮೂರು ಐಫೆಲ್ ಟವರ್‌ಗಳ ತೂಕಕ್ಕೆ ಸಮ. ಇವುಗಳನ್ನು ಕೇವಲ ಎರಡು ತಿಂಗಳಲ್ಲಿ ಅಳವಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಯೋಜನೆಯ ಮುಖ್ಯ ಇಂಜಿನಿಯರ್ ಲಿ ಝಾವೋ ಮಾತನಾಡಿ, ನಮ್ಮ ಕೆಲಸವು ಸ್ಪಷ್ಟ ರೂಪಕ್ಕೆ ಬರುವುದನ್ನು ನೋಡಿ ನನಗೆ ಹೆಮ್ಮೆ ಎನಿಸುತ್ತದೆ. ಸೇತುವೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಕಣಿವೆಯ ಮೇಲೆ ಎತ್ತರವಾಗಿ ನಿಂತಿರುವುದನ್ನು ನೋಡಿದಾಗ ನನಗೆ ಸಂತೋಷವಾಗುತ್ತದೆ ಎಂದು ಸಂತೋಷ ವ್ಯಕ್ತ ಪಡಿಸಿದ್ದಾರೆ. ಈ ಸೇತುವೆ ಪ್ರಮುಖ ಪ್ರವಾಸಿ ಆಕರ್ಷಣೆಯಾಗಲಿದೆ ಎಂದು ಚೀನಾ ಅಧಿಕಾರಿಗಳು ಹೇಳಿದ್ದಾರೆ. ಇಲ್ಲಿ ವಾಸಿಸುವ ಪ್ರದೇಶಗಳು, ಗಾಜಿನ ಮೇಲೆ ನಡಿಗೆ ಮತ್ತು ವಿಶ್ವದ ಅತಿ ಎತ್ತರದ ಬಂಗೀ ಜಂಪ್ ಅನ್ನು ನಿರ್ಮಿಸುವ ಯೋಜನೆಯನ್ನು ಹೊಂದಿದೆ.

ಈ ಸೇತುವೆ ಚೀನಾದ ಗ್ರಾಮೀಣ ಪ್ರದೇಶಗಳನ್ನು ಸಂಪರ್ಕಿಸಲು ಸಹಾಯ ಮಾಡುತ್ತದೆ. ಪ್ರಪಂಚದ 100 ಅತಿ ಎತ್ತರದ ಸೇತುವೆಗಳಲ್ಲಿ ಅರ್ಧದಷ್ಟು ಸೇತುವೆಗಳು ಇಲ್ಲಿದೆ. 2016 ರಲ್ಲಿ, ಚೀನಾದ ಅತಿ ಎತ್ತರದ ಸೇತುವೆ ಬೀಪನ್‌ಜಿಯಾಂಗ್‌ನಲ್ಲಿ ತೆರೆಯಲ್ಪಟ್ಟಿತು. ಇದು ಸಮುದ್ರ ಮಟ್ಟದಿಂದ 1,854 ಅಡಿ ಎತ್ತರದಲ್ಲಿದೆ.

ಸೇತುವೆಯು ಪ್ರವಾಸೋದ್ಯಮವನ್ನು ಹೆಚ್ಚಿಸುತ್ತದೆ. ಸ್ಥಳೀಯ ಆರ್ಥಿಕತೆಗೆ ಸಹಾಯ ಮಾಡುತ್ತದೆ. ಪ್ರಯಾಣದ ಸಮಯವನ್ನು ಕಡಿಮೆ ಮಾಡುತ್ತದೆ. ಚೀನಾದ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸುತ್ತದೆ. ಇದು ಚೀನಾದ ಹೆಮ್ಮೆಯ ಸಂಕೇತವಾಗಿದೆ.




**ದೇಶದ ಅಭಿವೃದ್ಧಿಗೆ ಬಹಳ ಮುಖ್ಯ**

**ಈ ಸೇತುವೆಯು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾಗಿದೆ. ಇದು ಸುರಕ್ಷಿತವಾಗಿದೆ. ಪರಿಸರ ಸ್ನೇಹಿಯಾಗಿದೆ. ಇದು ಚೀನಾದ ಭವಿಷ್ಯದ ಬೆಳವಣಿಗೆಗೆ ಒಂದು ಪ್ರಮುಖ ಹೆಜ್ಜೆಯಾಗಿದೆ.ಇಂತಹ ಯೋಜನೆಗಳು ದೇಶದ ಅಭಿವೃದ್ಧಿಗೆ ಬಹಳ ಮುಖ್ಯ. ಇದರಿಂದ ಜನರಿಗೆ ಅನುಕೂಲವಾಗುತ್ತದೆ. ಪ್ರವಾಸೋದ್ಯಮ ಹೆಚ್ಚುತ್ತದೆ. ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.**

- **ಸೇತುವೆಯ ಉಕ್ಕಿನ ಕಂಬಗಳು 22,000 ಮೆಟ್ರಿಕ್ ಟನ್ ತೂಕ, 3 ಐಫೆಲ್ ಟವರ್‌ಗಳ ತೂಕಕ್ಕೆ ಸಮ**
- **ಈ ಸೇತುವೆ ಪ್ರಮುಖ ಪ್ರವಾಸಿ ಆಕರ್ಷಣೆಯಾಗಲಿದೆ ಎಂದು ಚೀನಾ ಅಧಿಕಾರಿಗಳು ಹೇಳಿದ್ದಾರೆ**
- **ನಮ್ಮ ಕೆಲಸವು ಸ್ಪಷ್ಟ ರೂಪಕ್ಕೆ ಬರುವುದನ್ನು ನೋಡಿ ನನಗೆ ಹೆಮ್ಮೆ ಎನಿಸುತ್ತದೆ ಎಂದ ಚೀನಾದ ಅಧಿಕಾರಿಗಳು**

## ಮಿನಿ ನ್ಯೂಸ್

### ಪಟಾಕಿ ಕಾರ್ಖಾನೆಯಲ್ಲಿ ಬೆಂಕಿ ಅವಘಡ: 8 ಮಂದಿ ದುರ್ಮರಣ

**ಅಮರಾವತಿ:** ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಮಹಿಳೆಯರು ಸೇರಿ 8 ಮಂದಿ ಸಾವನ್ನಪ್ಪಿರುವ ದಾರುಣ ಘಟನೆ ಆಂಧ್ರಪ್ರದೇಶದ ಅನಕಪಲ್ಲಿಯಲ್ಲಿ ನಡೆದಿದೆ. ಅವಘಡದಲ್ಲಿ 8 ಜನರು ಸಾವನ್ನಪ್ಪಿದ್ದು, 7 ಜನರು ಗಾಯಗೊಂಡಿದ್ದಾರೆ. ಬೆಂಕಿ ಅವಘಡದ ಕುರಿತು ಆಂಧ್ರ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ವಿಷಾದ ವ್ಯಕ್ತಪಡಿಸಿದ್ದಾರೆ. ಇಬ್ಬರು ಮಹಿಳೆಯರು ಸೇರಿದಂತೆ ಎಂಟು ಜನರು ಸಾವನ್ನಪ್ಪಿದ್ದಾರೆ ಮತ್ತು ಹಲವಾರು ಜನರು ಗಾಯಗೊಂಡಿದ್ದಾರೆ.

ಬೆಂಕಿ ಅವಘಡದ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಗೃಹ ಸಚಿವೆ ವಿ.ಅನಿತಾ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

### ಉಕ್ರೇನ್‌ನ ಸುಮಿ ಮೇಲೆ ರಷ್ಯಾ ಕ್ಷಿಪಣಿ ದಾಳಿ: 21 ಮಂದಿ ಸಾವು

**ಕೀವ್:** ಉತ್ತರ ಉಕ್ರೇನಿಯನ್ ನಗರದ ಸುಮಿಯ ಹೃದಯಭಾಗದಲ್ಲಿ ಭಾನುವಾರ ಬೆಳಗ್ಗೆ ನಡೆದ ರಷ್ಯಾದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಯಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದಾರೆ. 83 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್‌ನ ಆಂತರಿಕ ಸಚಿವ ಇಹೋರ್ ಕ್ಲಿಮೆಂಕೊ ಹೇಳಿದ್ದಾರೆ.

ಈ ವರ್ಷ ಉಕ್ರೇನ್ ಮೇಲೆ ನಡೆದ ಅತ್ಯಂತ ಭೀಕರ ದಾಳಿಯನ್ನು ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಖಂಡಿಸಿದ್ದಾರೆ. ಕಿಡಿಗೇಡಿಗಳು ಮಾತ್ರ ಈ ರೀತಿ ವರ್ತಿಸಲು ಸಾಧ್ಯ. ಸಾಮಾನ್ಯ ಜನರ ಜೀವ ತೆಗೆಯಲಾಗುತ್ತಿದೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿ ಖಂಡನೆ ವ್ಯಕ್ತಪಡಿಸಿದ್ದಾರೆ. ಇಂದು ಜನರು ಚರ್ಚ್‌ಗೆ ಹೋಗುವ ದಿನ. ಪಾಮ್ ಸಂಡೆ, ಜೆರುಸಲೇಂಗೆ ಭಗವಂತ ಆಗಮಿಸಿದ ದಿನ. ಚರ್ಚ್‌ನ ಪ್ರಮುಖ ಹಬ್ಬದ ದಿನದಂದೇ ನಾಗರಿಕರನ್ನು ಉದ್ದೇಶಪೂರ್ವಕವಾಗಿ ಹತ್ಯೆ ಮಾಡಲಾಗುತ್ತಿದೆ ಎಂದು ರಷ್ಯಾ ವಿರುದ್ಧ ಗುಡುಗಿದ್ದಾರೆ.

ಉಕ್ರೇನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿಯಾಗಿರುವ ವಿಟ್ಕಾಫ್ ಭೇಟಿ ನೀಡಿದ್ದರು. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಉಕ್ರೇನ್ ಶಾಂತಿ ಒಪ್ಪಂದದ ಕುರಿತು ಮಾತುಕತೆ ನಡೆಸಿರುವುದಾಗಿ ತಿಳಿಸಿದ್ದರು.

## ಎಐ ಸಹಾಯದಿಂದ ಮಗು ಜನನ: ವಿಶ್ವದಲ್ಲಿ ಅಚ್ಚರಿಯ ಸಾಧನೆ

**ಗ್ವಾಡಲಜಾರಾ:** ವಿಶ್ವದಲ್ಲೇ ಮೊದಲ ಬಾರಿಗೆ ಸಂಪೂರ್ಣ ಸ್ವಯಂಚಾಲಿತ ಐವಿಎಫ್ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ ಸಹಾಯದಿಂದ ಮಗು ಜನಿಸಿದೆ ಅಚ್ಚರಿಯಾದರೂ ಇದು ಸತ್ಯ.

ಈ ವಿಶಿಷ್ಟ ಪ್ರಯೋಗವು ವೈದ್ಯಕೀಯ ವಿಜ್ಞಾನದಲ್ಲಿ ಹೊಸ ಭರವಸೆಗಳನ್ನು ಹುಟ್ಟುಹಾಕಿದೆ ಮಾತ್ರವಲ್ಲದೆ ಐವಿಎಫ್ ತಂತ್ರಜ್ಞಾನಕ್ಕೂ ಹೊಸ ದಿಕ್ಕನ್ನು ನೀಡಿದೆ. ಮೆಕ್ಸಿಕೋದ ಗ್ವಾಡಲಜಾರಾದಲ್ಲಿ ಇಂತಹ ಸಾಧನೆ ಮಾಡಲಾಗಿದೆ.

40 ವರ್ಷದ ಮಹಿಳೆಯೊಬ್ಬರು ಕೃತಕ ಬುದ್ಧಿಮತ್ತೆ ನೆರವಿನ ಐವಿಎಫ್ ವಿಧಾನದ ಮೂಲಕ ಆರೋಗ್ಯವಂತ ಮಗುವಿಗೆ ಜನ್ಮ ನೀಡಿದ್ದಾರೆ.

ವಿಶೇಷವೆಂದರೆ ಈ ಪ್ರಕ್ರಿಯೆಯಲ್ಲಿ, ಮಾನವ ಕೈಗಳ ಬದಲಿಗೆ, ಯಂತ್ರಗಳು ಐಸಿಎಸ್‌ಐ (ಇಂಟ್ರಾ ಸೈಟೋಪ್ಲಾಸ್ಮಿಕ್ ವೀರ್ಯ ಇಂಜೆಕ್ಷನ್)ನ ಸಂಪೂರ್ಣ ಪ್ರಕ್ರಿಯೆಯನ್ನು ನಿರ್ವಹಿಸಿವೆ. ಈ ವ್ಯವಸ್ಥೆಯು ವೀರ್ಯವನ್ನು ಆಯ್ಕೆ ಮಾಡುವುದಲ್ಲದೆ, ಲೇಸರ್ ಮೂಲಕ ಅದನ್ನು ನಿಷ್ಕ್ರಿಯಗೊಳಿಸಿ ಅಂಡಾಣುವಿಗೆ ತಲುಪಿಸಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಪ್ರತಿ ಮೊಟ್ಟೆಗೆ ಸರಿಸುಮಾರು 9 ನಿಮಿಷ 56 ಸೆಕೆಂಡುಗಳು ಬೇಕಾಯಿತು ಎಂದು ತಿಳಿಸಲಾಗಿದೆ.

ಈ ತಂತ್ರಜ್ಞಾನದ ಹಿಂದಿನ ಪ್ರಮುಖ ಭ್ರೂಣ ಶಾಸ್ತ್ರಜ್ಞ ಡಾ. ಜಾಕ್ವೆಸ್ ಕೋಹೆನ್, ಈ ವ್ಯವಸ್ಥೆಯು ಐವಿಎಫ್ ಜಗತ್ತಿನಲ್ಲಿ ಕ್ರಾಂತಿಯನ್ನುಂಟು ಮಾಡಬಹುದು ಎಂದು ಹೇಳುತ್ತಾರೆ. ಇದು ಸ್ಥಿರತೆಯನ್ನು ಹೆಚ್ಚಿಸುತ್ತದೆ, ಮಾನವ ದೋಷಗಳನ್ನು ಕಡಿಮೆ ಮಾಡುತ್ತದೆ ಮತ್ತು ಮೊಟ್ಟೆಗಳ ಗುಣಮಟ್ಟ ಉತ್ತಮವಾಗಿ ಉಳಿಯುತ್ತದೆ. ಈ ಪ್ರಕ್ರಿಯೆಯಲ್ಲಿ, ಐದು ಅಂಡಾಣುಗಳಲ್ಲಿ ನಾಲ್ಕು ಯಶಸ್ವಿಯಾಗಿ ಫಲವತ್ತಾಗಿಸಲ್ಪಟ್ಟವು ಮತ್ತು ಆರೋಗ್ಯಕರ ಭ್ರೂಣವು ರೂಪುಗೊಂಡ ನಂತರ, ಅದನ್ನು ಹೆಪ್ಪುಗಟ್ಟಿಸಿ ವರ್ಗಾಯಿಸಲಾಯಿತು. ಇದರ ಪರಿಣಾಮವಾಗಿ ಮಗುವಿನ ಜನನವಾಯಿತು.

ಮುಂಬರುವ ದಿನಗಳಲ್ಲಿ ಈ ತಂತ್ರಜ್ಞಾನವು ವೇಗವಾಗಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಬೆಳೆಯುತ್ತದೆ ಎಂದು ವೈದ್ಯರು ಹೇಳಿದ್ದಾರೆ. ಇದು ಐವಿಎಫ್ ವೆಚ್ಚವನ್ನು ಕಡಿಮೆ ಮಾಡುತ್ತದೆ, ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸುತ್ತದೆ ಮತ್ತು ಪ್ರಪಂಚದಾದ್ಯಂತ ಲಕ್ಷಾಂತರ ಮಕ್ಕಳಿಲ್ಲದ ದಂಪತಿಗಳಿಗೆ ಮಗುವನ್ನು ಹೊಂದುವ ಹೊಸ ಭರವಸೆಯನ್ನು ನೀಡುತ್ತದೆ. ಕೃತಕ ಬುದ್ಧಿಮತ್ತೆ ಆವಿಷ್ಕಾರದ ಬಳಿಕ ಮನುಷ್ಯನ ಕೆಲಸವನ್ನೆಲ್ಲಾ ಅದೇ ಮಾಡಿ ಮುಗಿಸುತ್ತದೆ ಎಂದು ಹೇಳಲಾಗುತ್ತಿತ್ತು. ಅದು ಎಷ್ಟರ ಮಟ್ಟಿಗೆ ನಿಜ ಆಗಿಹೋಗಿದೆ ಎಂದರೆ ಇಲ್ಲಿಯವರೆಗೆ ಅನುಭವಿ ವೈದ್ಯರು ಮತ್ತು ಪರಿಣಿತ ಕೈಗಳಿಂದ ಮಾತ್ರ ಮಾಡಲಾಗುತ್ತಿದ್ದ ಕೆಲಸವನ್ನು ಈಗ ಈ ಯಂತ್ರಗಳಿಂದಲೂ ಮಾಡಬಹುದು ಎನ್ನುವಂತಾಗಿದೆ.

**ಸಂಪೂರ್ಣ ಸ್ವಯಂಚಾಲಿತ ವ್ಯವಸ್ಥೆ**

**ಐಸಿಎಸ್‌ಐ ತಂತ್ರದಲ್ಲಿ, ಸಾಮಾನ್ಯವಾಗಿ ತಜ್ಞರು ಪ್ರತಿ ವೀರ್ಯವನ್ನು ಮೊಟ್ಟೆಯೊಳಗೆ ಚುಚ್ಚುತ್ತಾರೆ. ಆದರೆ ಆಯಾಸ ಮತ್ತು ಮಾನವ ದೋಷದ ಸಾಧ್ಯತೆಯಿದೆ.**

**ಈಗ ನ್ಯೂಯಾರ್ಕ್ ಮತ್ತು ಮೆಕ್ಸಿಕೋದ ವಿಜ್ಞಾನಿಗಳ ಸಹಾಯದಿಂದ ಒಂದು ತಂಡವು, ಎಐ ಮತ್ತು ಡಿಜಿಟಲ್ ನಿಯಂತ್ರಣವನ್ನು ಬಳಸಿಕೊಂಡು ಈ ಪ್ರಕ್ರಿಯೆಯ ಎಲ್ಲಾ 23 ಹಂತಗಳನ್ನು ನಿರ್ವಹಿಸುವ ಸಂಪೂರ್ಣ ಸ್ವಯಂಚಾಲಿತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ.**




## ಹೆದ್ದಾರಿ ಅಭಿವೃದ್ಧಿಗೆ 10 ಲಕ್ಷ ಕೋಟಿ ಖರ್ಚು: ಗಡ್ಕರಿ

**ನವದೆಹಲಿ:** ದೇಶಾದ್ಯಂತ ಹೆದ್ದಾರಿಗಳನ್ನು ಬಲವರ್ಧನೆಗೊಳಿಸಲು ಮುಂದಿನ ಎರಡು ವರ್ಷಗಳಲ್ಲಿ 10 ಲಕ್ಷ ಕೋಟಿ ರೂ.ಗಳನ್ನು ಹೂಡಿಕೆ ಮಾಡಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಮುಂದಿನ ಎರಡು ವರ್ಷಗಳಲ್ಲಿ ದೇಶದ ಮೂಲಸೌಕರ್ಯವನ್ನು ತೀವ್ರವಾಗಿ ಪರಿವರ್ತಿಸಲು ಕೇಂದ್ರವು ಕೆಲಸ ಮಾಡುತ್ತಿದೆ. ಇದರಿಂದ ಅದು ವಿಶ್ವದ ಅತ್ಯುತ್ತಮವಾದದಕ್ಕೆ ಸರಿಹೊಂದುತ್ತದೆ ಎಂದು ಹೇಳಿದರು.

ಈಶಾನ್ಯ ಮತ್ತು ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸಲು ವಿಶೇಷ ಒತ್ತು ನೀಡುವ ಮೂಲಕ ದೇಶಾದ್ಯಂತ ಹೆದ್ದಾರಿಗಳನ್ನು ಬಲಪಡಿಸಲು ಮುಂದಿನ ಎರಡು ವರ್ಷಗಳಲ್ಲಿ 10 ಲಕ್ಷ ಕೋಟಿ ರೂ.ಗಳ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಾವು ಯೋಜಿಸಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ, ಈಶಾನ್ಯದ ಹೆದ್ದಾರಿಗಳು ಅಮೆರಿಕದ ರಸ್ತೆಗಳಿಗೆ ಸಮಾನವಾಗಿರುತ್ತವೆ ಎಂದು ಗಡ್ಕರಿ ಹೇಳಿದರು. ಈಶಾನ್ಯದ ಕಠಿಣ ಭೂಪ್ರದೇಶ ಮತ್ತು ಗಡಿಗಳಿಗೆ ಸಾಮೀಪ್ಯವನ್ನು ಗಮನದಲ್ಲಿಟ್ಟುಕೊಂಡು ರಸ್ತೆ ಮೂಲಸೌಕರ್ಯವನ್ನು ಹೆಚ್ಚಿಸುವ ತುರ್ತು ಅವಶ್ಯಕತೆಯಿದೆ ಎಂದು ಅವರು ಹೇಳಿದರು. ದೇಶದ ಮೂಲಸೌಕರ್ಯವನ್ನು ತೀವ್ರವಾಗಿ ಪರಿವರ್ತಿಸುವುದು ನಮ್ಮ ಪ್ರಯತ್ನವಾಗಿದೆ. ಇದರಿಂದ ಅದು ವಿಶ್ವದ ಅತ್ಯುತ್ತಮವಾದವುಗಳೊಂದಿಗೆ ಹೊಂದಿಕೆಯಾಗುತ್ತದೆ. ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ರಾಜಸ್ಥಾನ ಮತ್ತು ದೆಹಲಿ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ ಎಂದು ಅವರು ಹೇಳಿದರು. ನಾವು ಪ್ರಸ್ತುತ ಅಸ್ಸಾಂನಲ್ಲಿ 57,696 ಕೋಟಿ ರೂ.ಗಳ ಮತ್ತು ಬಿಹಾರದಲ್ಲಿ ಸುಮಾರು 90,000 ಕೋಟಿ ರೂ.ಗಳ ಯೋಜನೆಗಳನ್ನು ಹೊಂದಿದ್ದೇವೆ. ನಾವು ಪಶ್ಚಿಮ ಬಂಗಾಳದಲ್ಲಿ 42,000 ಕೋಟಿ ರೂ., ಜಾರ್ಖಂಡ್‌ನಲ್ಲಿ ಸುಮಾರು 53,000 ಕೋಟಿ ರೂ. ಒಡಿಶಾದಲ್ಲಿ ಸುಮಾರು 58,000 ಕೋಟಿ ರೂ.ಗಳ ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ ಎಂದು ಗಡ್ಕರಿ ಹೇಳಿದರು.



**784 ಹೆದ್ದಾರಿ ಯೋಜನೆಗಳು**

**ಪೂರ್ವ ರಾಜ್ಯಗಳಲ್ಲಿ 3,73,484 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 784 ಹೆದ್ದಾರಿ ಯೋಜನೆಗಳನ್ನು ಜಾರಿಗೆ ತರಲಾಗುವುದು, ಇದರಲ್ಲಿ 21,355 ಕಿ.ಮೀ. ಅವುಗಳಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್.ಎಚ್.ಎಐ) ಮತ್ತು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಎನ್.ಎಚ್ ಐಡಿಸಿಎಲ್ ) ಯೋಜನೆಗಳು ಸೇರಿವೆ.**

### ಭಾರತಕ್ಕೆ ಪರಮಾಣು ಇಂಧನ ಪುನರುಜ್ಜೀವನದ ಅಗತ್ಯವಿದೆ : ಸಿಂಗ್

**ನ್ಯೂಯಾರ್ಕ್:** ಭಾರತಕ್ಕೆ ಪರಮಾಣು ಇಂಧನ ಪುನರುಜ್ಜೀವನದ ಅಗತ್ಯವಿದೆ ಮತ್ತು ಪರಮಾಣು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ದೇಶಕ್ಕೆ ಸಹಾಯ ಮಾಡಲು ಅಮೆರಿಕ ಆಸಕ್ತಿ ಹೊಂದಿದೆ ಎಂದು ಹೋಲ್ಟೆಕ್ ಸಿಇಒ ಡಾ.ಕ್ರಿಸ್ ಸಿಂಗ್ ಹೇಳಿದ್ದಾರೆ.

ಭಾರತ ಮತ್ತು ಅಮೆರಿಕ ಶುದ್ಧ ಇಂಧನದಲ್ಲಿ ಕಾರ್ಯತಂತ್ರದ ಆಸಕ್ತಿಯನ್ನು ಹಂಚಿಕೊಂಡಿವೆ. ಪರಮಾಣು ಶಕ್ತಿಯು ಏಕೀಕೃತವಾಗಿರಬೇಕು,ಭಾರತವು ಸ್ವಾಭಾವಿಕವಾಗಿ ಅಲ್ಲಿ ಮುಂದಾಳತ್ವ ವಹಿಸಬೇಕು. ಅದಕ್ಕಾಗಿ, ಭಾರತವು ರಫ್ತು ಮಾಡಬಹುದಾದ ತಂತ್ರಜ್ಞಾನವನ್ನು ಹೊಂದಿರಬೇಕು ಎಂದು ಸಿಂಗ್ ನ್ಯೂಜೆರ್ಸಿಯ ಕ್ಯಾಮ್ಡೆನ್ ನಲ್ಲಿರುವ ಕೃಷ್ಣ ಪಿ ಸಿಂಗ್ ಟೆಕ್ನಾಲಜಿ ಕ್ಯಾಂಪಸ್‌ನಲ್ಲಿ ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಹೇಳಿದ್ದಾರೆ. ಹೋಲ್ಟೆಕ್ ಇಂಟರ್ನ್ಯಾಷನಲ್ ಒಂದು ವೈವಿಧ್ಯಮಯ ಇಂಧನ ತಂತ್ರಜ್ಞಾನ ಕಂಪನಿಯಾಗಿದ್ದು, ಇಂಗಾಲ ಮುಕ್ತ ವಿದ್ಯುತ್ ಉತ್ಪಾದನೆಯ ಕ್ಷೇತ್ರದಲ್ಲಿ, ನಿರ್ದಿಷ್ಟವಾಗಿ ವಾಣಿಜ್ಯ ಪರಮಾಣು ಮತ್ತು ಸೌರ ಶಕ್ತಿಯ ಕ್ಷೇತ್ರದಲ್ಲಿ ಪ್ರಮುಖ ತಂತ್ರಜ್ಞಾನ ಆವಿಷ್ಕಾರಕರಾಗಿ ಗುರುತಿಸಲ್ಪಟ್ಟಿದೆ.

## ಹೆಚ್ಚು ಕಾಲ ಇರುವ ವಿದೇಶಿ ಪ್ರಜೆಗಳಿಗೆ ಅಮೆರಿಕ ಎಚ್ಚರಿಕೆ

**ವಾಷಿಂಗ್ಟನ್:** ಅಮೆರಿಕದಲ್ಲಿ 30 ದಿನಗಳಿಗಿಂತ ಹೆಚ್ಚು ಕಾಲ ಇರುವ ವಿದೇಶಿ ಪ್ರಜೆಗಳು ಸರ್ಕಾರದಲ್ಲಿ ನೋಂದಾಯಿಸಿಕೊಳ್ಳಬೇಕು. ನಿಯಮ ಪಾಲಿಸದಿದ್ದಲ್ಲಿ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಡೊನಾಲ್ಡ್ ಟ್ರಂಪ್ ಆಡಳಿತದ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ ತಿಳಿಸಿದೆ.

ನಿರ್ಧಾರವು H-1B ಅಥವಾ ವಿದ್ಯಾರ್ಥಿ ಪರವಾನಗಿಗಳಂತಹ ವೀಸಾಗಳನ್ನು ಹೊಂದಿರುವ H-1B ನಲ್ಲಿರುವವರ ಮೇಲೆ ನೇರವಾಗಿ ಪರಿಣಾಮ ಬೀರುವುದಿಲ್ಲ. ಆದರೆ, ಅನುಮತಿಯಿಲ್ಲದೇ ವಿದೇಶಿ ಪ್ರಜೆಗಳು H-1B ನಲ್ಲಿ ಉಳಿಯುವುದನ್ನು ತಡೆಯಲು ಕಾನೂನುಗಳ ಕಠಿಣ ಜಾರಿಯನ್ನು ಸೂಚಿಸುತ್ತದೆ.

H-1B ವೀಸಾದಲ್ಲಿರುವ ವ್ಯಕ್ತಿಯು ಕೆಲಸ ಕಳೆದುಕೊಂಡರೂ ನಿಗದಿತ ಅವಧಿಯೊಳಗೆ ದೇಶವನ್ನು ತೊರೆಯದಿದ್ದರೆ, ಕಠಿಣ ಕ್ರಮ ಎದುರಿಸಬೇಕಾಗುತ್ತದೆ. ಆದ್ದರಿಂದ, ವಿದ್ಯಾರ್ಥಿಗಳು ಮತ್ತು H-1B ವೀಸಾ ಹೊಂದಿರುವವರು H-1B ನಲ್ಲಿ ತಮ್ಮ ವಾಸ್ತವ್ಯದ ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಅಕ್ರಮ ವಿದೇಶಿಯರಿಗೆ ಸಂದೇಶ ಎಂಬ ಶೀರ್ಷಿಕೆಯ ಪೋಸ್ಟ್‌ವೊಂದನ್ನು ಗೃಹ ಭದ್ರತಾ ಇಲಾಖೆಯು ಹಂಚಿಕೊಂಡಿದೆ. ಅಧಿಕಾರಿಗಳ ಅನುಮತಿಯಿಲ್ಲದೆ ದೇಶದಲ್ಲಿಯೇ ಇರುವ ವಿದೇಶಿ ಪ್ರಜೆಗಳು ಸ್ವಯಂ-ಗಡೀಪಾರು ಆಗಬೇಕು ಎಂದು ಸೂಚಿಸಿದೆ. ಹಾಗೆ ಮಾಡುವುದರಿಂದಾಗುವ ಪ್ರಯೋಜನಗಳನ್ನು ಸಹ ಇದು ಪಟ್ಟಿ ಮಾಡಿದೆ.

ಸ್ವಯಂ-ಗಡೀಪಾರು ಸುರಕ್ಷಿತ. ನಿಮ್ಮ ನಿರ್ಗಮನ ವಿಮಾನವನ್ನು ಆಯ್ಕೆ ಮಾಡುವ ಮೂಲಕ ನಿಮ್ಮ ಸ್ವಂತ ಷರತ್ತುಗಳ ಮೇಲೆ ಹೊರಡಿ. ನೀವು ಅಪರಾಧಿಯಲ್ಲದ ಅಕ್ರಮ ವಿದೇಶಿಯರಾಗಿ ಸ್ವಯಂ-ಗಡೀಪಾರು ಆದರೆ, H-1Bನಲ್ಲಿ ಗಳಿಸಿದ ಹಣವನ್ನು ನಿಮ್ಮ ಬಳಿಯೇ ಇಟ್ಟುಕೊಳ್ಳಬಹುದು ಎಂದು ತಿಳಿಸಿದೆ.

ಸ್ವಯಂ-ಗಡೀಪಾರು ಆಗುವುದು ಭವಿಷ್ಯದಲ್ಲಿ ಕಾನೂನುಬದ್ಧ ವಲಸೆಗೆ ಅವಕಾಶ ಕಲ್ಪಿಸುತ್ತದೆ. ಅಂತಹ ಗಡೀಪಾರು ಮಾಡಿದವರು ಹೊರಡಲು ಸಾಧ್ಯವಾಗದಿದ್ದರೆ ಸಬ್ಸಿಡಿ ವಿಮಾನಕ್ಕೆ ಅರ್ಹರಾಗಬಹುದು ಎಂದು ಇಲಾಖೆ ಮಾಹಿತಿ ನೀಡಿದೆ.



### ಕೋಲ್ಕತ್ತಾ ಮೂಲದ ಕಂಪನಿಗೆ ಸಂಯೋಜಿತ ಪರವಾನಗಿ ಹಸ್ತಾಂತರ

## ಭಾರತದ ಮೊದಲ ಲಿಥಿಯಂ ಗಣಿ ಶೀಘ್ರದಲ್ಲೇ ಕಾರ್ಯಾರಂಭ

**ರಾಯಪುರ:** ರಾಯ್‌ಪುರದಿಂದ ಸುಮಾರು 180 ಕಿ.ಮೀ ದೂರದಲ್ಲಿರುವ ಕೊರ್ಬಾ ಜಿಲ್ಲೆಯ ಕಟ್ಘೋರಾ ಪ್ರದೇಶದಲ್ಲಿ ಮೊದಲ ಲಿಥಿಯಂ ಗಣಿಗಳು ಮತ್ತು ಅಪರೂಪದ ಖನಿಜಾಂಶಗಳ (ಖಇಇ) ಕಾರ್ಯಾಚರಣೆಯ ಚಟುವಟಿಕೆ ಪ್ರಾರಂಭವಾಗಲಿದೆ. ಕಳೆದ ವರ್ಷ ಜೂನ್‌ನಲ್ಲಿ ಕೇಂದ್ರವು ಹರಾಜಿನಲ್ಲಿಟ್ಟ ಕಟ್ಘೋರಾದಲ್ಲಿರುವ ಭಾರತದ ಮೊದಲ ಲಿಥಿಯಂ ಮತ್ತು ಅಪರೂಪದ ಭೂಮಿಯ ಅಂಶಗಳ ಬ್ಲಾಕ್‌ನ ಸಮೀಕ್ಷೆ, ಪರೀಕ್ಷೆ ಮತ್ತು ಗಣಿಗಾರಿಕೆಗಾಗಿ ಕೋಲ್ಕತ್ತಾ ಮೂಲದ ಕಂಪನಿಗೆ ಸಂಯೋಜಿತ ಪರವಾನಗಿಯನ್ನು ಹಸ್ತಾಂತರಿಸಲಾಗಿದೆ.

ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ ಕಿಶನ್ ರೆಡ್ಡಿ ಮತ್ತು ಛತ್ತೀಸ್‌ಗಢ ಮುಖ್ಯಮಂತ್ರಿ ವಿಷ್ಣು ದಿಯೋ ಸಾಯಿ ಅವರು ರಾಯ್‌ಪುರದಲ್ಲಿ ಪರವಾನಗಿ ಒಪ್ಪಂದದ ದಾಖಲೆಯನ್ನು ಜಂಟಿಯಾಗಿ ನೀಡಿದರು. ಮಾರಾಟಕ್ಕೆ ಇಡಲಾಗಿದ್ದ ಕಟ್ಘೋರಾ ಲಿಥಿಯಂ ಮತ್ತು ಖಇಇ ಬ್ಲಾಕ್‌ನ ದೇಶದ ಮೊದಲ ಲಿಥಿಯಂ ಹರಾಜನ್ನು ಕೋಲ್ಕತ್ತಾ ಮೂಲದ ಮೈಕಿ ಸೌತ್ ಮೈನಿಂಗ್ ಪ್ರೈವೇಟ್ ಲಿಮಿಟೆಡ್ ಇ-ಹರಾಜಿನ ಮೂಲಕ ಶೇ. 76.05 ರಷ್ಟು ಅತ್ಯಧಿಕ ಬಿಡ್ ಪ್ರೀಮಿಯಂನೊಂದಿಗೆ ಪಡೆದುಕೊಂಡಿದೆ.

ಭಾರತದ ಭೂವೈಜ್ಞಾನಿಕ ಸಮೀಕ್ಷೆ ನಡೆಸಿದ ಮಾದರಿ ಅಧ್ಯಯನ ಮತ್ತು ಪರಿಶೋಧನೆಯಲ್ಲಿ ಗಮನಾರ್ಹ ಲಿಥಿಯಂ ನಿಕ್ಷೇಪಗಳನ್ನು ಈ ಹಿಂದೆ ಪತ್ತೆಯಾಗಿತ್ತು. ಕಟ್ಘೋರಾದ ಸುಮಾರು 250 ಹೆಕ್ಟೇರ್ ಪ್ರದೇಶದಲ್ಲಿ ಲಿಥಿಯಂನ ದೊಡ್ಡ ನಿಕ್ಷೇಪಗಳ ಉಪಸ್ಥಿತಿಯನ್ನು ಜಿಎಸ್‌ಐ ದೃಢಪಡಿಸಿದೆ. ಜಿಎಸ್‌ಐ ನಡೆಸಿದ ಆರಂಭಿಕ ಸಮೀಕ್ಷೆಯಲ್ಲಿ, ಸುಮಾರು 250 ಹೆಕ್ಟೇರ್ ಪ್ರದೇಶದಲ್ಲಿ, ಸುಮಾರು 10 ಪಿಪಿಎಂ ನಿಂದ 2 ಸಾವಿರ ಪಿಪಿಎಂ (ಪ್ರತಿ ಮಿಲಿಯನ್‌ಗೆ ಭಾಗಗಳು) ವರೆಗಿನ ಲಿಥಿಯಂ ಅಂಶ ಕಂಡುಬಂದಿದೆ.

ಈ ಬ್ಲಾಕ್‌ನಲ್ಲಿ ಅಪರೂಪದ ಭೂಮಿಯ ಅಂಶಗಳ ಉಪಸ್ಥಿತಿಯೂ ಪತ್ತೆಯಾಗಿದೆ. ಕಳೆದ ವರ್ಷ ಕಾಶ್ಮೀರದ ರಿಯಾಸಿಯಲ್ಲಿರುವ ಲಿಥಿಯಂ ಬ್ಲಾಕ್‌ಗಾಗಿ ನಡೆದ ಆರಂಭಿಕ ಹರಾಜು ನಿರೀಕ್ಷಿತ ಆಸಕ್ತಿಯನ್ನು ಹುಟ್ಟುಹಾಕಲಿಲ್ಲ, ಇದರಿಂದಾಗಿ ಕಟ್ಘೋರಾ ಪರೀಕ್ಷೆ ಮತ್ತು ಗಣಿಗಾರಿಕೆಗಾಗಿ ಸಂಯೋಜಿತ ಪರವಾನಗಿಯೊಂದಿಗೆ ಭಾರತದ ಮೊದಲ ಲಿಥಿಯಂ ಗಣಿಗಾರಿಕೆ ಉದ್ಯಮವಾಗಿ ಹೊರಹೊಮ್ಮಿತು.

ಇದು ದೇಶದಲ್ಲಿ ಶೀಘ್ರದಲ್ಲೇ ಕಾರ್ಯನಿರ್ವಹಿಸಲಿರುವ ಮೊದಲ ಲಿಥಿಯಂ ಗಣಿಯಾಗಿದ್ದು, ರಾಜ್ಯ ಮತ್ತು ದೇಶ ಎರಡೂ ಹೊಸ ಬೆಳವಣಿಗೆಯತ್ತ ಮುನ್ನಡೆಯಲು ಸಹಾಯ ಮಾಡುತ್ತದೆ.



**ಚೀನಾಗೆ ಪೈಪೋಟಿ ಖಾಸಗಿ ಸಂಸ್ಥೆಗೆ ಬಿಡ್**

### ಮದುವೆಯಾಗುವುದಾಗಿ ನಂಬಿಸಿ ವೈದ್ಯೆ ಮೇಲೆ ಅತ್ಯಾಚಾರ

**ಮುಂಬೈ:** ಮದುವೆಯಾಗುವುದಾಗಿ ಭರವಸೆ ನೀಡಿ ವೈದ್ಯೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ 30 ವರ್ಷದ ಐಪಿಎಸ್ ಅಧಿಕಾರಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದಲ್ಲಿ ಈ ಘಟನೆ ನಡೆದಿದ್ದು, ಮಹಿಳೆ ಇತ್ತೀಚೆಗೆ ನಾಗ್ಪುರದ ಇಮಾಮ್ವಾಡಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಅವರು ಹೇಳಿದರು.

ದೂರುದಾರರ ಪ್ರಕಾರ, ವೈದ್ಯೆ ಮತ್ತು ಆ ವ್ಯಕ್ತಿ ಸಾಮಾಜಿಕ ಮಾಧ್ಯಮ ವೇದಿಕೆ ಇನ್‌ಸ್ಟಾಗ್ರಾಂ ಮೂಲಕ ಸಂಪರ್ಕಕ್ಕೆ ಬಂದಿದ್ದಾರೆ. ಆಗ ಆರೋಪಿಯು ಕೇಂದ್ರ ಲೋಕಸೇವಾ ಆಯೋಗ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದರೆ, ಮಹಿಳೆ ಎಂಬಿಬಿಎಸ್ ಕೋರ್ಸ್ ಓದುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅವರಿಬ್ಬರು ಸ್ನೇಹಿತರಾದ ನಂತರ, ಆರೋಪಿ ಮಹಿಳೆಯನ್ನು ಮದುವೆಯಾಗುವುದಾಗಿ ಭರವಸೆ ನೀಡಿ ಆಕೆಯ ಜೊತೆ ದೈಹಿಕ ಸಂಬಂಧ ಬೆಳೆಸಿದ್ದಾನೆ. ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಗೆ ಆಯ್ಕೆಯಾದ ನಂತರ, ಆರೋಪಿ ಮಹಿಳೆಯಿಂದ ಅಂತರ ಕಾಯ್ದುಕೊಳ್ಳಲು ಮುಂದಾಗಿದ್ದಾನೆ ಮತ್ತು ಮದುವೆಯಾಗಲು ನಿರಾಕರಿಸಿದ್ದಾನೆ ಎಂದು ಅಧಿಕಾರಿ ಹೇಳಿದರು.

### ಸುಮಾರು 300 ಬಿಎಸ್‌ಎಫ್ ಸಿಬ್ಬಂದಿಗಳ ಜೊತೆಗೆ ಐದು ಹೆಚ್ಚುವರಿ ತುಕಡಿಗಳನ್ನು ನಿಯೋಜಿಸಲಾಗಿದೆ

## ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟನೆ: ಹೈಕೋರ್ಟ್ ಆದೇಶ

**ಕೋಲ್ಕತ್ತ:** ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟನ ಮೇಳ ನಡೆದ ಹಿಂಸಾಚಾರದ ಬಳಿಕ ಪಶ್ಚಿಮ ಬಂಗಾಳದ ಮುರ್ಷಿದಾಬಾದನಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸುವಂತೆ ಕೊಲ್ಕತ್ತ ಹೈಕೋರ್ಟ್ ಆದೇಶವನ್ನು ನೀಡಿದೆ.

ಮುರ್ಷಿದಾಬಾದ್‌ನಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸುಮಾರು 300 ಬಿಎಸ್‌ಎಫ್ ಸಿಬ್ಬಂದಿ ಗಳ ಜೊತೆಗೆ ಐದು ಹೆಚ್ಚುವರಿ ತುಕಡಿಗಳನ್ನು ನಿಯೋಜಿಸಲಾಗಿದೆ. ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ನ್ಯಾಯಮೂರ್ತಿಗಳಾದ ಸೌಮನ್ ಸೇನ್ ಮತ್ತು ರಾಜಾ ಬಸು ಚೌಧರಿ ಅವರ ಪೀಠ, ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಸಮರ್ಪಕವಾಗಿಲ್ಲ, ಗಲಭೆಕೋರರನ್ನು ಬಂಧಿಸಲು ಕ್ರಮ ಕೈಗೊಳ್ಳಬೇಕು.

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಡೆಯುತ್ತಿರುವ ಹಿಂಸಾಚಾರದ ಬಗ್ಗೆ ಕಣ್ಣು ಮುಚ್ಚಿ ಕೂತಿರಲು ಸಾಧ್ಯವಿಲ್ಲ. ನಾಗರಿಕರಿಗೆ ಸೂಕ್ತ ಭದ್ರತೆ ಮತ್ತು ರಕ್ಷಣೆ ನೀಡಬೇಕಾದ್ದು ಸರ್ಕಾರದ ಕರ್ತವ್ಯ. ಈ ಪ್ರದೇಶದಲ್ಲಿ ಶಾಂತಿ ನೆಲಿಸುವಂತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದೆ.

ಶುಕ್ರವಾರದ ಪ್ರಾರ್ಥನೆಯ ನಂತರ ಭುಗಿಲೆದ್ದ ಹಿಂಸಾಚಾರ ಮುರ್ಷಿದಾಬಾದ್ ಜಿಲ್ಲೆಯ ಹಲವು ಭಾಗಗಳಿಗೆ ವ್ಯಾಪಿಸಿದ್ದು, ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯಾಗಿವೆ. ಕಳೆದ ರಾತ್ರಿ ಪೊಲೀಸರು, ಅರೆಸೇನಾ ಪಡೆಗಳು ಸಂಪೂರ್ಣ ಗಸ್ತು ತಿರುಗಿದ್ದು, ಸತಿ, ಧುಲಿಯನ್, ಸಂಸರ್ಗಂಜ್ ಮತ್ತು ಜಂಗಿಪುರ ಪ್ರದೇಶಗಳಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿವೆ. ಆದಾಗ್ಯೂ ಹಿಂಸಾಚಾರ ಪೀಡಿತ ಮುರ್ಷಿದಾಬಾದ್‌ನಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸುಮಾರು 300 ಬಿಎಸ್‌ಎಫ್ ಸಿಬ್ಬಂದಿಯಲ್ಲದೆ, ಪಶ್ಚಿಮ ಬಂಗಾಳ ಸರ್ಕಾರದ ಕೋರಿಕೆಯ ಮೇರೆಗೆ ಇನ್ನೂ ಕಂಪನಿಗಳನ್ನು ನಿಯೋಜಿಸಲಾಗಿದೆ.

ಮುರ್ಷಿದಾಬಾದ್, ಮಾಲ್ಡಾ, ದಕ್ಷಿಣ 24 ಪರಗಣ ಮತ್ತು ಹೂಗಿ ಜಿಲ್ಲೆಗಳಲ್ಲಿ ನಡೆದ ಹಿಂಸಾಚಾರದ ಸಂದರ್ಭದಲ್ಲಿ ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಲಾಯಿತು, ಭದ್ರತಾ ಪಡೆಗಳ ಮೇಲೆ ಕಲ್ಲು ತೂರಲಾಯಿತು ಮತ್ತು ರಸ್ತೆಗಳನ್ನು ನಿರ್ಬಂಧಿಸಲಾಯಿತು.

ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಮಾತನಾಡಿ, ರಾಜ್ಯದಲ್ಲಿ ಹಿಂದೂಗಳು ಸುರಕ್ಷಿತವಾಗಿಲ್ಲ ಎಂದು ಆರೋಪಿಸಿದ್ದು, ಮತ್ತೊಂದೆಡೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶಾಂತಿಗಾಗಿ ಮನವಿ ಮಾಡಿದರು ಮತ್ತು ಕೆಲವು ರಾಜಕೀಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಧರ್ಮವನ್ನು ದುರುಪಯೋಗಪಡಿಸಿ ಕೊಳ್ಳಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದ ಮುರ್ಷಿದಾಬಾದಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆಗೆ ಸಂಬಂಧಿಸಿದಂತೆ ಭುಗಿಲೆದ್ದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ ಮೂವರು ಮೃತಪಟ್ಟಿದ್ದಾರೆ. ಪೊಲೀಸ್ ಸಿಬ್ಬಂದಿ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಘಟನೆಗೆ ಸಂಬಂಧಿಸಿ 138ಕ್ಕೂ ಅಧಿಕ ಜನರನ್ನು ಬಂಧಿಸಿದ್ದಾರೆ. ಸಾಧ್ಯವಿರುವ ಎಲ್ಲಾ ಸಹಾಯವನ್ನು ಮಾಡುವುದಾಗಿ ಭರವಸೆ ನೀಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಉದ್ವಿಗ್ನ ಪರಿಸ್ಥಿತಿಯ ಬಗ್ಗೆ ಡಿಜಿಪಿ ರಾಜೀವ್ ಕುಮಾರ್ ಗೃಹ ಕಾರ್ಯದರ್ಶಿಗೆ ಮಾಹಿತಿ ನೀಡಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ ಮತ್ತು ತೀವ್ರವಾಗಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ಸ್ಥಳೀಯವಾಗಿ ನಿಯೋಜಿಸಲಾದ ಬಿಎಸ್‌ಎಫ್ ಪಡೆಗಳು ಸಹಾಯ ಮಾಡಿದ್ದಾರೆ ಮತ್ತು ಹಿಂಸಾಚಾರಕ್ಕೆ ಸಂಬಂಧಿಸಿದಂತೆ 150ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಪ್ರತಿಭಟನೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮಮತಾ ಬ್ಯಾನರ್ಜಿ, ಈ ಕಾನೂನನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

**ಬಿಜೆಪಿ ನಾಯಕ ಸುವೇಂದು ಅಧಿಕಾರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದು, ಹಿಂಸಾಚಾರವನ್ನು ತಡೆಯಲು ಕೇಂದ್ರ ಸಶಸ್ತ್ರ ಪಡೆಗಳ ನಿಯೋಜನೆಗೆ ಆಗ್ರಹಿಸಿತ್ತು. ಅರ್ಜಿಯು ರಾಜಕೀಯ ಪ್ರೇರಿತ ಅರ್ಜಿ ಎಂದು ವಾದಿಸಿದ ರಾಜ್ಯ ಸರ್ಕಾರ, ಹಿಂಸಾಚಾರವನ್ನು ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.**



**ಸಾಮಾನ್ಯ ಸ್ಥಿತಿಗೆ ಮರಳಲು ಸಾಕಷ್ಟು ಕ್ರಮ**


**ಹಿಂಸಾಚಾರದ ಬಗ್ಗೆ ಮೋಹನ್ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ) ಅವರೊಂದಿಗೆ ವಿಡಿಯೋ ಕಾನ್ಫರನ್ಸ್ ನಡೆಸಿದ್ದಾರೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುವಂತೆ ಮತ್ತು ಸಾಧ್ಯವಾದಷ್ಟು ಬೇಗ ಸಾಮಾನ್ಯ ಸ್ಥಿತಿಗೆ ಮರಳಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆ ಕೊಟ್ಟಿದ್ದಾರೆ. ಕೇಂದ್ರವು ಪರಿಸ್ಥಿತಿಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿದೆ ಎಂದು ಗೃಹ ಕಾರ್ಯದರ್ಶಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.**



### 30 ವರ್ಷದ ಮದರಸಾ ಧ್ವಂಸ

**ಪನ್ನಾ:** ವಕ್ಫ್ ತಿದ್ದುಪಡಿ ಕಾಯ್ದೆಯ ನಂತರದ ಮೊದಲ ಪ್ರಮುಖ ಕ್ರಮ ಮಧ್ಯಪ್ರದೇಶದ ಪನ್ನಾ ಜಿಲ್ಲೆಯಲ್ಲಿ ನಡೆದಿದೆ. ಅನುಮತಿಯಿಲ್ಲದೆ ನಿರ್ಮಿಸಲಾದ 30 ವರ್ಷ ಹಳೆಯ ಮದರಸಾವನ್ನು ನಿರ್ವಾಹಕರೇ ಕೆಡವಿದ್ದಾರೆ. ಮಧ್ಯಪ್ರದೇಶದ ಪನ್ನಾ ಜಿಲ್ಲೆಯಲ್ಲಿ ಸುಮಾರು 30 ವರ್ಷಗಳಿಂದ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡು ಅಕ್ರಮ ಮದರಸಾ ನಡೆಸಲಾಗುತ್ತಿತ್ತು. ಆದರೆ ವಕ್ಫ್ ಕಾಯ್ದೆ ಜಾರಿಗೆ ಬಂದ ತಕ್ಷಣ, ಆಯೋಜಕರು ಸ್ವತಃ ಈ ಮದರಸಾವನ್ನು ಶನಿವಾರ ಕೆಡವಿದ್ದಾರೆ.

ಈ ಅಕ್ರಮ ಮದರಸಾ ಕುರಿತು ಅನೇಕ ದೂರುಗಳು ದಾಖಲಾಗಿವೆ.ಅದರ ಹೆಸರಿನಲ್ಲಿ ದೊಡ್ಡ ಪ್ರಮಾಣದ ದೇಣಿಗೆ ಸಂಗ್ರಹಿಸಲಾಗುತ್ತಿದ್ದು, ಇದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಪನ್ನಾ ಜಿಲ್ಲೆಯ ಬಿಡಿ ಕಾಲೋನಿ ಯಲ್ಲಿರುವ ಅಕ್ರಮ ಮದರಸಾದ ಬಗ್ಗೆ ಆಡಳಿತ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಸಂಸದ ವಿಷ್ಣು ದತ್ ಶರ್ಮಾ ಅವರಿಗೆ ದೂರು ಸಲ್ಲಿಸಲಾಗಿದೆ. ದೂರಿನ ನಂತರ, ಎಸ್‌ಡಿಎಂ ಮದರಸಾ ಆಯೋಜಕರಿಗೆ ನೋಟಿಸ್ ನೀಡಿದೆ.



# ರಣರೋಚಕ ಪಂದ್ಯ ಗೆದ್ದ ಮುಂಬೈ

## ಕನ್ನಡಿಗನ ಬ್ಯಾಟಿಂಗ್ ವ್ಯರ್ಥ, ಕೇವಲ 12 ರನ್‌ಗಳಿಂದ ಸೋತ ಡೆಲ್ಲಿ



**ತಿಲಕ್ ಹೊಡಿಬಡಿ ಬ್ಯಾಟಿಂಗ್**

ಅಂತು ಇಂತೂ ಮುಂಬೈ ಇಂಡಿಯನ್ಸ್ ತಂಡ ಗೆಲುವಿನ ಟ್ರ್ಯಾಕ್‌ಗೆ ಮರಳಿದೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಟೀಮ್ ಕೇವಲ 12 ರನ್‌ಗಳಿಂದ ಭರ್ಜರಿ ಗೆಲುವು ಸಾಧಿಸಿದೆ.

ಇದರಿಂದ ಡೆಲ್ಲಿಯ ಗೆಲುವಿನ ಓಟಕ್ಕೆ ಮುಂಬೈ ಬಿಗ್ ಬ್ರೇಕ್ ಹಾಕಿ ನಿಲ್ಲಿಸಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ಅಕ್ಷರ್ ಪಟೇಲ್ ಟಾಸ್ ಗೆದ್ದು ಎದುರಾಳಿ ಮುಂಬೈ ಇಂಡಿಯನ್ಸ್ ಅನ್ನು ಬ್ಯಾಟಿಂಗ್ ಆಹ್ವಾನ ಮಾಡಿದರು. ಇದರಿಂದ ಓಪನರ್ ಆಗಿ ಬ್ಯಾಟಿಂಗ್ ಆರಂಭಿಸಿದ ರೋಹಿತ್ ಶರ್ಮಾ, ರಯಾನ್ ರಿಕೆಲ್ಟನ್ ಆರಂಭದಲ್ಲೇ ದೊಡ್ಡ ಹೊಡೆತ ಬಿದ್ದಿತು. ವಿಫಲ ಬ್ಯಾಟಿಂಗ್ ಮುಂದುವರೆಸಿದ ರೋಹಿತ್ 18 ರನ್‌ಗೆ ವಿಕೆಟ್ ಒಪ್ಪಿಸಿದರು. ರೋಹಿತ್ ಬಳಿಕ ಸೂರ್ಯಕುಮಾರ್ ಬ್ಯಾಟಿಂಗ್‌ಗೆ ಬಂದರು.


ಇನ್ನೊಬ್ಬ ಓಪನರ್ ರಯಾನ್ ರಿಕೆಲ್ಟನ್ ಕೇವಲ 25 ಎಸೆತಗಳಲ್ಲಿ 41 ರನ್ ಚಚ್ಚಿ, ಕುಲ್‌ದೀಪ್ ಸ್ಪಿನ್‌ಗೆ ಬೋಲ್ಡ್ ಆದರು. ಸೂರ್ಯಕುಮಾರ್ 28 ಎಸೆತಗಳಲ್ಲಿ 40 ರನ್ ಚಚ್ಚಿ, ಕುಲ್‌ದೀಪ್‌ಗೆ ವಿಕೆಟ್ ಒಪ್ಪಿಸಿದರು. ಪಾಂಡ್ಯ 2 ರನ್‌ನಿಂದ ವಿಫಲರಾದ್ರೆ, ತಿಲಕ್ ವರ್ಮಾ 27 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್‌ನಿಂದ ಅರ್ಧಶತಕ ಗಳಿಸಿದರು. ಕೊನೆಯಲ್ಲಿ ನಮನ್ ಧೀರ್ ಅತ್ಯದ್ಭುತ ಧೀರನ ಬ್ಯಾಟಿಂಗ್ ಪ್ರದರ್ಶಿಸಿ ಕೇವಲ 17 ಎಸೆತದಲ್ಲಿ 38 ರನ್ ಚಚ್ಚಿದ್ದರು. ಇದರಿಂದ ಮುಂಬೈ ಇಂಡಿಯನ್ಸ್ 20 ಓವರ್ ಗಳಲ್ಲಿ 5 ವಿಕೆಟ್‌ಗೆ 206 ರನ್‌ಗಳ ಗುರಿ ನೀಡಿತ್ತು.

ಈ ಟಾರ್ಗೆಟ್ ಹಿಂದೆ ಬಿದ್ದ ಡೆಲ್ಲಿ ಕ್ಯಾಪಿಟಲ್ಸ್ ಓಪನರ್ಸ್ ತಂಡದ ಖಾತೆ ತೆರೆಯುವ ಮೊದಲೇ ಮೆಕ್‌ಗುರ್ಕ್ ಡಕೌಟ್ ಆದರು. ಬಳಿಕ ಅಭಿಷೇಕ್ ಪೊರೆಲ್ ಜೊತೆ ಬ್ಯಾಟಿಂಗ್‌ಗೆ ಬಂದ ಕನ್ನಡಿಗ ಕರುಣ್ ನಾಯರ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ಮಾಡಿದರು. ಕೇವಲ 40 ಬಾಲ್‌ಗಳನ್ನು ಎದುರಿಸಿದ ಕರುಣ್, 12 ಬೌಂಡರಿ, 5 ಭರ್ಜರಿ ಸಿಕ್ಸರ್‌ಗಳಿಂದ 89 ರನ್‌ಗಳ ಗಳಿಸಿ ಆಡುವಾಗ ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ಬೋಲ್ಡ್ ಆದರು. ಇದರಿಂದ ಕೇವಲ 11 ರನ್‌ಗಳಿಂದ ಸೆಂಚುರಿ ಮಿಸ್ ಮಾಡಿಕೊಂಡರು.

ಕಳೆದ ಪಂದ್ಯದಲ್ಲಿ ಬೆಂಗಳೂರಲ್ಲಿ ಅಬ್ಬರಿಸಿದ್ದ ಕೆ.ಎಲ್ ರಾಹುಲ್ ಡೆಲ್ಲಿ ಮೈದಾನದಲ್ಲಿ 15 ರನ್‌ಗೆ ಔಟ್ ಆಗಿ ನಿರಾಸೆ ಮೂಡಿಸಿದರು. ಅಭಿಷೇಕ್ ಪೊರೆಲ್ 33, ನಾಯಕ ಅಕ್ಷರ್ 9, ಸ್ಟಬ್ಸ್ 1, ಅಶುತೋಷ್ ಶರ್ಮಾ 17 ರನ್ ಗಳಿಸಿ ಪಂದ್ಯ ಗೆಲ್ಲಿಸುವ ಅವಕಾಶ ಕೈಚೆಲ್ಲಿದರು. ವಿಪ್ರಜ್ ನಿಗಮ್ 14 ರನ್‌ಗೆ ಸ್ಟಂಪ್ ಔಟ್ ಆದರು. ಕುಲ್‌ದೀಪ್, ಮೋಹಿತ್ ಶರ್ಮಾ ತಲಾ 1 ರನ್‌ಗೆ ಔಟ್ ಆಗಿದ್ದರಿಂದ ಡೆಲ್ಲಿ ಕೇವಲ 193 ರನ್‌ಗಳನ್ನು ಮಾತ್ರ ಗಳಿಸಲು ಶಕ್ತವಾಯಿತು. ಕೊನೆಯಲ್ಲಿ ಸರಿಯಾದ ಬ್ಯಾಟಿಂಗ್ ಮಾಡುವರು ಯಾರು ಇಲ್ಲದ ಕಾರಣ ಡೆಲ್ಲಿ ಸೋಲೊಪ್ಪಿಕೊಂಡಿತು. ಹೀಗಾಗಿ ಮುಂಬೈ ಇಂಡಿಯನ್ಸ್ ಕೇವಲ 12 ರನ್‌ಗಳಿಂದ ತನ್ನ 2ನೇ ಗೆಲುವು ಪಡೆದು ಸಂಭ್ರಮಿಸಿತು.

# ನಿಕೋಲಸ್ ಪೂರನ್ ಸಿಕ್ಸರ್‌ಗೆ ಅಭಿಮಾನಿಯ ಹಣೆ ಓಪನ್

ಇಂಡಿಯನ್ ಪ್ರೀಮಿಯರ್ ಲೀಗ್‌ನ 26ನೇ ಪಂದ್ಯದ ವೇಳೆ ಲಕ್ನೋ ಸೂಪರ್ ಜೈಂಟ್ಸ್ ತಂಡದ ಬ್ಯಾಟರ್ ನಿಕೋಲಸ್ ಪೂರನ್ ಬಾರಿಸಿದ ಸಿಕ್ಸ್‌ನಿಂದಾಗಿ ಅಭಿಮಾನಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಲಕ್ನೋನ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ಹಾಗೂ ಗುಜರಾತ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಟಾಸ್ ಗೆದ್ದ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಗುಜರಾತ್ ಟೈಟಾನ್ಸ್ ತಂಡವನ್ನು ಮೊದಲು ಬ್ಯಾಟಿಂಗ್‌ಗೆ ಆಹ್ವಾನಿಸಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಗುಜರಾತ್ ಟೈಟಾನ್ಸ್ ತಂಡಕ್ಕೆ ಶುಭ್‌ಮನ್ ಗಿಲ್ (60) ಹಾಗೂ ಸಾಯಿ ಸುದರ್ಶನ್ (56) ಉತ್ತಮ ಆರಂಭ ಒದಗಿಸಿದ್ದರು. ಈ ಅರ್ಧಶತಕಗಳ ನೆರವಿನೊಂದಿಗೆ ಗುಜರಾತ್ ಟೈಟಾನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 180 ರನ್ ಕಲೆಹಾಕಿತು. 181 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ಐಡೆನ್ ಮಾರ್ಕ್ರಮ್ (58) ಉತ್ತಮ ಆರಂಭ ಒದಗಿಸಿದ್ದರು. ಇನ್ನು ಇಡೀ ಪಂದ್ಯದ ಚಿತ್ರಣ ಬದಲಿಸಿದ್ದು ನಿಕೋಲಸ್ ಪೂರನ್. 3ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಪೂರನ್ 34 ಎಸೆತಗಳಲ್ಲಿ 7 ಭರ್ಜರಿ ಸಿಕ್ಸ್ ಹಾಗೂ 1 ಫೋರ್‌ನೊಂದಿಗೆ 61 ರನ್ ಬಾರಿಸಿದ್ದರು. ಈ ಏಳು ಸಿಕ್ಸರ್‌ಗಳಲ್ಲಿ ಒಂದು ಸಿಕ್ಸ್ ನೇರವಾಗಿ ಸ್ಟೇಡಿಯಂನಲ್ಲಿ ಕೂತಿದ್ದ ಕ್ರಿಕೆಟ್ ಪ್ರೇಮಿಯೊಬ್ಬರ ಹಣೆಗೆ ಹೋಗಿ ಬಡಿದಿದೆ. ರಭಸದಿಂದ ತೂರಿ ಬಂದ ಚೆಂಡು ಬಡಿದು ಅವರ ಹಣೆಯು ಓಪನ್ ಆಗಿದ್ದು, ತಕ್ಷಣವೇ ಸ್ಟೇಡಿಯಂ ಸಿಬ್ಬಂದಿಗಳು ಪ್ರಾಥಮಿಕ ಚಿಕಿತ್ಸೆ ಒದಗಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಇದೀಗ ಗಂಭೀರವಾಗಿ ಗಾಯಗೊಂಡಿರುವ ಅಭಿಮಾನಿಯ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.



# ತವರಿನ ಸೋಲಿನ ಬೆನ್ನಲ್ಲೇ ಬೆಂಗಳೂರು ಜಯಭೇರಿ

## ಕಿಂಗ್ ಕೊಹ್ಲಿ, ಸಾಲ್ಟ್ ವಿಸ್ಫೋಟಕ ಬ್ಯಾಟಿಂಗ್‌ನಿಂದ ಈ ಗೆಲುವು



**ಕೇವಲ 1 ವಿಕೆಟ್ ಕಳೆದುಕೊಂಡು ಗೆಲುವು**

ತವರಿನ ಅಂಗಳದಲ್ಲಿ ಸಂಜು ಸ್ಯಾಮ್ಸನ್ ನೇತೃತ್ವದ ರಾಜಸ್ಥಾನ್ ರಾಯಲ್ಸ್ ತಂಡವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು 9 ವಿಕೆಟ್‌ಗಳಿಂದ ಬಗ್ಗು ಬಡಿದಿದೆ. ಫಿಲಿಪ್ ಸಾಲ್ಟ್ ಹಾಗೂ ಕಿಂಗ್ ಕೊಹ್ಲಿ ಈ ಇಬ್ಬರ ಭರ್ಜರಿ ಹಾಫ್ ಸೆಂಚುರಿಯಿಂದ ಆರ್‌ಸಿಬಿ ಗೆಲುವು ಪಡೆಯಿತು.

ಜೈಪುರದ ಸವಾಯಿ ಮಾನ್ಸಿಂಗ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿ, ರಾಜಸ್ಥಾನ್ ರಾಯಲ್ಸ್ ಆಟಗಾರರನ್ನು ಬ್ಯಾಟಿಂಗ್ ಮಾಡಲು ಆಹ್ವಾನ ಮಾಡಿದರು. ಆರ್‌ಆರ್ ಪರ ಆರಂಭಿಕರಾಗಿ ಕ್ರೀಸ್‌ಗೆ ಆಗಮಿಸಿದ ಕ್ಯಾಪ್ಟನ್ ಸಂಜು ಸ್ಯಾಮ್ಸನ್ ಹಾಗೂ ಯಶಸ್ವಿ ಜೈಸ್ವಾಲ್ ಉತ್ತಮ ಆರಂಭ ಪಡೆಯಲಿಲ್ಲ. ನಾಯಕ ಸಂಜು 15 ರನ್‌ಗೆ ವಿಕೆಟ್ ಒಪ್ಪಿಸಿದರು. ಆದರೆ ಓಪನರ್ ಯಶಸ್ವಿ ಜೈಸ್ವಾಲ್ ಅಮೋಘವಾದ ಅರ್ಧಶತಕ ಸಿಡಿಸಿದರು. ಕೇವಲ 35 ಎಸೆತದಲ್ಲಿ 1 ಸಿಕ್ಸರ್ ಹಾಗೂ 7 ಭರ್ಜರಿ ಬೌಂಡರಿ ಇಂದ ಹಾಫ್ ಸೆಂಚುರಿ ಗಳಿಸಿದರು. ಒಟ್ಟು 47 ಎಸೆತಗಳಲ್ಲಿ ಜೈಸ್ವಾಲ್ 10 ಫೋರ್, 2 ಸಿಕ್ಸರ್‌ನಿಂದ 75 ರನ್‌ಗೆ ಎಲ್‌ಬಿಗೆ ಬಲಿಯಾದರು. ಹೆಟ್ಮೆರ್ 9, ಧ್ರುವ್ ಜುರೆಲ್ 35 ರನ್‌ಗಳ ನೆರವಿನಿಂದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 174 ರನ್‌ಗಳ ಸಾಧಾರಣ ಟಾರ್ಗೆಟ್ ಅನ್ನು ನೀಡಿತ್ತು.

ಈ ಗುರಿ ಬೆನ್ನು ಹತ್ತಿದ್ದ ಆರ್‌ಸಿಬಿ ಆರಂಭದಲ್ಲೇ ಸಿಡಿಲಬ್ಬರದ ಬ್ಯಾಟಿಂಗ್ ಮಾಡಿತು. ಓಪನರ್ ಆಗಿ ಕ್ರೀಸ್‌ಗೆ ಬಂದ ವಿರಾಟ್ ಕೊಹ್ಲಿ, ಫಿಲಿಪ್ ಸಾಲ್ಟ್, ರಾಯಲ್ ಬೌಲರ್‌ಗಳಿಗೆ ಬೆಂಡೆತ್ತಿದರು. ಹೀಗಾಗಿಯೇ ಸಾಲ್ಟ್ ಕೇವಲ 28 ಎಸೆತಗಳಲ್ಲಿ 50 ರನ್ ಗಳಿಸಿದರು. ಬ್ಯಾಟಿಂಗ್ ಮುಂದುವರೆಸಿದ್ದ ಸಾಲ್ಟ್, ಒಟ್ಟು 5 ಬೌಂಡರಿ ಹಾಗೂ 6 ಸಿಕ್ಸರ್‌ಗಳಿಂದ ಕೇವಲ 33 ಎಸೆತದಲ್ಲಿ 65 ರನ್‌ಗೆ ಔಟ್ ಆದರು. ಇವರ ನಂತರ ಕ್ರೀಸ್‌ಗೆ ಆಗಮಿಸಿದ ದೇವದತ್ ಪಡಿಕ್ಕಲ್, ವಿರಾಟ್ ಕೊಹ್ಲಿ ಒಳ್ಳೆಯ ಸಾಥ್ ಕೊಟ್ಟರು. ಇದರಿಂದ ಕಿಂಗ್ ಕೊಹ್ಲಿ 42 ಎಸೆತಗಳಲ್ಲಿ 3 ಬೌಂಡರಿ 2 ಸಿಕ್ಸರ್‌ನಿಂದ ಅರ್ಧಶತಕ ಪೂರೈಸಿದರು. ಇದು ಈ ಟೂರ್ನಿಯಲ್ಲಿ ಕೊಹ್ಲಿಯ 3ನೇ ಅರ್ಧಶತಕವಾದರೆ, ಅವರ ಐಪಿಎಲ್ ವೃತ್ತಿ ಜೀವನದ 59ನೇ ಹಾಫ್‌ಸೆಂಚುರಿ ಆಗಿದೆ. ಕೊನೆಗೆ ವಿರಾಟ್ ಕೊಹ್ಲಿ ಅಜೇಯ 62 ರನ್ ಹಾಗೂ ದೇವದತ್ ಪಡಿಕ್ಕಲ್ ಅಜೇಯ 40 ರನ್‌ಗಳಿಂದ ಆರ್‌ಸಿಬಿ, ಆರ್‌ಆರ್ ವಿರುದ್ಧ ಜಯಭೇರಿ ಬಾರಿಸಿತು.

# ಅಂಕ ಪಟ್ಟಿಯಲ್ಲಿ ಪಾತಾಳಕ್ಕೆ ಕುಸಿದ ತಲಾ ಪಡೆ



**ಡೆಲ್ಲಿ ತಂಡ ಅಗ್ರಸ್ಥಾನ**

ಇಂಡಿಯನ್ ಪ್ರೀಮಿಯರ್ ಲೀಗ್‌ನ 27 ಪಂದ್ಯಗಳು ಮುಗಿದೆ. ಈ ಪಂದ್ಯಗಳ ಮುಕ್ತಾಯದ ಬೆನ್ನಲ್ಲೇ ಐಪಿಎಲ್ ಅಂಕ ಪಟ್ಟಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಅಗ್ರಸ್ಥಾನದಲ್ಲಿದ್ದರೆ, ಚೆನ್ನೈ ಸೂಪರ್ ಕಿಂಗ್ಸ್ ಕೊನೆಯ ಸ್ಥಾನವನ್ನು ಅಲಂಕರಿಸಿದೆ. ಗುಜರಾತ್ ಟೈಟಾನ್ಸ್ ವಿರುದ್ಧದ ಗೆಲುವಿನೊಂದಿಗೆ ಲಕ್ನೋ ಸೂಪರ್ ಜೈಂಟ್ಸ್ ಮೂರನೇ ಸ್ಥಾನಕ್ಕೇರಿದರೆ, ಅತ್ತ ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದು ಸನ್ ರೈಸರ್ಸ್ ಒಂದು ಸ್ಥಾನ ಮೇಲೇರಿದೆ. ಇದರಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಕೊನೆಯ ಸ್ಥಾನಕ್ಕೆ ಕುಸಿದಿದೆ.

ಶುಭ್‌ಮನ್ ಗಿಲ್ ಮುಂದಾಳತ್ವದ ಗುಜರಾತ್ ಟೈಟಾನ್ಸ್ ತಂಡವು ಈವರೆಗೆ 6 ಪಂದ್ಯಗಳನ್ನಾಡಿದ್ದು, ಈ ವೇಳೆ 4 ಪಂದ್ಯಗಳಲ್ಲಿ ಜಯ ಸಾಧಿಸಿದೆ. ಅದರಂತೆ +1.081 ನೆಟ್ ರನ್ ರೇಟ್‌ನೊಂದಿಗೆ ಒಟ್ಟು 8 ಅಂಕಗಳನ್ನು ಕಲೆಹಾಕಿ 2ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ.

ರಿಷಭ್ ಪಂತ್ ನಾಯಕತ್ವದ ಲಕ್ನೋ ಸೂಪರ್ ಜೈಂಟ್ಸ್ ತಂಡವು ಈವರೆಗೆ 6 ಪಂದ್ಯಗಳನ್ನಾಡಿದ್ದು, ಈ ವೇಳೆ 4 ರಲ್ಲಿ ಜಯ ಸಾಧಿಸಿ, ಎರಡಲ್ಲಿ ಸೋಲನುಭವಿಸಿದೆ. ಈ ಮೂಲಕ +0.162 ನೆಟ್ ರನ್ ರೇಟ್‌ನೊಂದಿಗೆ 3ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಅಜಿಂಕ್ಯ ರಹಾನೆ ನಾಯಕತ್ವದ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು ಈವರೆಗೆ 6 ಪಂದ್ಯಗಳನ್ನಾಡಿದ್ದು, ಈ ವೇಳೆ ಮೂರರಲ್ಲಿ ಜಯ ಸಾಧಿಸಿದೆ. ಈ ಮೂಲಕ +0.803 ನೆಟ್ ರನ್ ರೇಟ್‌ನೊಂದಿಗೆ ಆರು ಅಂಕಗಳನ್ನು ಪಡೆದು 4ನೇ ಸ್ಥಾನವನ್ನು ಅಲಂಕರಿಸಿದೆ. ಆರ್‌ಸಿಬಿ ತಂಡವು 5 ಪಂದ್ಯಗಳಲ್ಲಿ 2 ರಲ್ಲಿ ಮ್ಯಾಚ್‌ನಲ್ಲಿ ಸೋಲನುಭವಿಸಿದೆ. ಹೀಗಾಗಿ ಒಟ್ಟು 6 ಅಂಕಗಳನ್ನು ಹೊಂದಿದ್ದರೂ, ನೆಟ್ ರನ್ ರೇಟ್‌ನಲ್ಲಿ ಹಿಂದೆ ಉಳಿಯುವ ಮೂಲಕ 5ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಆರ್‌ಸಿಬಿ ತಂಡದ ಪ್ರಸ್ತುತ ನೆಟ್ ರನ್ ರೇಟ್ +0.539 ಶ್ರೇಯಸ್ ಅಯ್ಯರ್ ಮುಂದಾಳತ್ವದಲ್ಲಿ ಕಣಕ್ಕಿಳಿಯುತ್ತಿರುವ ಪಂಜಾಬ್ ಕಿಂಗ್ಸ್ ತಂಡವು ಆಡಿದ 5 ಮ್ಯಾಚ್‌ಗಳಲ್ಲಿ ಎರಡರಲ್ಲಿ ಸೋಲನುಭವಿಸಿದೆ. ಈ ಮೂಲಕ +0.065 ನೆಟ್ ರನ್ ರೇಟ್‌ನೊಂದಿಗೆ 6 ಅಂಕಗಳನ್ನು ಪಡೆದಿರುವ ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ.

ಇನ್ನುಳಿದಂತೆ ರಾಜಸ್ಥಾನ್ ರಾಯಲ್ಸ್ (4 ಅಂಕಗಳು), ಸನ್‌ರೈಸರ್ಸ್ ಹೈದರಾಬಾದ್ (4 ಅಂಕಗಳು), ಮುಂಬೈ ಇಂಡಿಯನ್ಸ್ (2 ಅಂಕಗಳು) ಮತ್ತು ಚೆನ್ನೈ ಸೂಪರ್ ಕಿಂಗ್ಸ್ (2 ಅಂಕಗಳು) ಕ್ರಮವಾಗಿ 7 ರಿಂದ 10ನೇ ಸ್ಥಾನಗಳನ್ನು ಅಲಂಕರಿಸಿದೆ.



# ಈ ವರ್ಷವೇ ರಚಿತಾ ರಾಮ್ ಮದುವೆ

**ಅಪ್‌ಡೇಟ್ ಕೊಟ್ಟ ರವಿಚಂದ್ರನ್**

ನಟಿ ರಚಿತಾ ರಾಮ್ ಕನ್ನಡದ ಬಲು ಬೇಡಿಕೆಯ ನಟಿಯರಲ್ಲಿ ಒಬ್ಬರು. ಸಾಕಷ್ಟು ಸಂಖ್ಯೆಯ ಅಭಿಮಾನಿಗಳನ್ನು ರಚಿತಾ ರಾಮ್ ಹೊಂದಿದ್ದಾರೆ.

ರಚಿತಾ ರಾಮ್ ಸಿನಿಮಾಗಳ ಜೊತೆಗೆ ಅವರ ಮದುವೆ ಬಗ್ಗೆಯೂ ಆಗಾಗ್ಗೆ ಸುದ್ದಿ ಆಗುತ್ತಲೇ ಇರುತ್ತದೆ. ಅಭಿಮಾನಿಗಳಂತೂ ಮದುವೆ ಯಾವಾಗ ಎಂದು ಕೇಳುತ್ತಲೇ ಇರುತ್ತಾರೆ. ಇದೀಗ ಈ ಪ್ರಶ್ನೆಗೆ ಉತ್ತರ ಸಿಕ್ಕಿದೆ. ರಚಿತಾ ರಾಮ್ ಅವರು ದೊಡ್ಡ ಮಟ್ಟದಲ್ಲಿ ಜನಪ್ರಿಯತೆ ಪಡೆದಿದ್ದಾರೆ. ಅವರಿಗೆ ಈಗ 32 ವರ್ಷ. ಅವರು ಇನ್ನೂ ಮದುವೆ ಆಗಿಲ್ಲ ಏಕೆ ಎಂಬುದು ಅನೇಕರ ಪ್ರಶ್ನೆ. ಅವರು ಲವ್ ವಿಚಾರದಲ್ಲಿ ಯಾರ ಜೊತೆಯೂ ಸುದ್ದಿ ಆಗಿಲ್ಲ. ಅವರ ಮದುವೆ ಯಾವಾಗ ಎಂಬ ಪ್ರಶ್ನೆ ಎದುರಾಗುತ್ತಲೇ ಇರುತ್ತವೆ. ಆದರೆ, ಇದಕ್ಕೆ ಅವರು ಉತ್ತರ ಕೊಡುವ ಗೋಜಿಗೆ ಹೋಗಿಲ್ಲ. ಈಗ ಅವರ ಮದುವೆ ಬಗ್ಗೆ ರವಿಚಂದ್ರನ್ ಅವರು ಮಾಹಿತಿ ನೀಡಿದ್ದಾರೆ. 'ಭರ್ಜರಿ ಬ್ಯಾಚುಲರ್ಸ್ ಸೀಸನ್ 2' ವೇದಿಕೆ ಮೇಲೆ ಈ ಬಗ್ಗೆ ಚರ್ಚೆ ಆಗಿದೆ.

ಡಾಲಿ ಧನಂಜಯ್ ನಿರ್ಮಾಣದ, ನಾಗಭೂಷಣ, ಧನಂಜಯ್, ಮಲೈಕಾ ವಸುಪಾಲ್ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರದ ಪ್ರಚಾರಕ್ಕಾಗಿ ಈ ತಂಡ 'ಭರ್ಜರಿ ಬ್ಯಾಚುಲರ್ಸ್ ಸೀಸನ್ 2' ವೇದಿಕೆ ಮೇಲೆ ಆಗಮಿಸಿದೆ. ಈ ವೇಳೆ ಬ್ಯಾಚುಲರ್ಸ್ ಜೀವನ ಹಾಗೂ ಮದುವೆ ಬಳಿಕದ ಜೀವನದ ಬಗ್ಗೆ ಚರ್ಚೆ ನಡೆದಿದೆ. ಈ ವೇಳೆ ಒಂದು ಅಚ್ಚರಿಯ ವಿಚಾರ ರಿವೀಲ್ ಆಗಿದೆ. 'ಮದುವೆ ಮೊದಲ ಜೀವನ, ಮದುವೆ ಬಳಿಕದ ಜೀವನ ಹೇಗಿದೆ' ಎಂದು ಧನಂಜಯ್ ಅವರಿಗೆ ಕೇಳಲಾಯಿತು. ಇದಕ್ಕೆ ಉತ್ತರಿಸಿದ ಡಾಲಿ, 'ಮದುವೆ ಮೊದಲು ನಾಗ ಸಿಕ್ಕರೆ ಅಲ್ಲೇ ಸೆಟಲ್, ನಿರಂಜನ್ ಸಿಕ್ಕರೆ ಅಲ್ಲೇ ಸೆಟಲ್. ಈಗ ಮನೆಗೆ ಹೋಗಬೇಕು' ಎಂದರು ಧನಂಜಯ್. 'ಇಲ್ಲೇನೋ ಸಮಸ್ಯೆ ಇದೆ' ಎಂದರು ಆ್ಯಂಕರ್ ನಿರಂಜನ್. 'ಬ್ಯಾಚುಲರ್ ಜೀವನ ಒಂದು ಚಾಪ್ಟರ್, ಮದುವೆ ಬಳಿಕದ ಜೀವನ ಒಂದು ಚಾಪ್ಟರ್. ಮಗು ಆದಮೇಲೆ ಒಂದು ಚಾಪ್ಟರ್' ಎಂದಿದ್ದಾರೆ ರವಿಚಂದ್ರನ್. 'ರಚಿತಾ ರಾಮ್ ಅವರು ಇನ್ನೂ ಬ್ಯಾಚುಲರ್ ಆಗಿರೋದು ನೋಡಿ ಹೊಟ್ಟೆ ಉರಿಯುತ್ತಿದೆ' ಎಂದು ಡಾಲಿ ಧನಂಜಯ್ ಹೇಳಿದರು. 'ಈ ವರ್ಷ ಅವರು ಮದುವೆ ಆಗುತ್ತಿದ್ದಾರೆ' ಎಂದು ರವಿಚಂದ್ರನ್ ಘೋಷಣೆ ಮಾಡಿಯೇ ಬಿಟ್ಟರು. ಇದನ್ನು ಕೇಳಿ ಎಲ್ಲರಿಗೂ ಶಾಕ್ ಆಯಿತು. ಇದನ್ನು ರವಿಚಂದ್ರನ್ ಅವರು ಹಾಸ್ಯಕ್ಕೆ ಹೇಳಿದ್ದಾರೋ ಅಥವಾ ನಿಜವನ್ನು ಹಾಸ್ಯದ ರೂಪದಲ್ಲಿ ಹೇಳಿದ್ದಾರೋ ಎನ್ನುವ ಪ್ರಶ್ನೆ ಮೂಡಿದೆ.


# ಶರಣ್ ಕಂಠದಲ್ಲಿ ಟಕೀಲಾ ಹಾಡು



**ಶರಣ್ ಉತ್ತಮ ಗಾಯಕ**

'ಟಕೀಲಾ' ಸಿನಿಮಾಗೆ ದೇವರಾಯನದುರ್ಗ, ಬೆಂಗಳೂರು, ಸಕಲೇಶಪುರ ಮುಂತಾದೆಡೆ ಶೂಟಿಂಗ್ ಮಾಡಲಾಗಿದೆ. ನಟ ಧರ್ಮ ಕೀರ್ತಿರಾಜ್ ಅವರು ಈ ಸಿನಿಮಾದಲ್ಲಿ ಮುಖ್ಯ ಭೂಮಿಕೆ ನಿಭಾಯಿಸಿದ್ದಾರೆ. ಡಾ. ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದ ಹಾಡಿಗೆ ಶರಣ್ ಅವರು ಧ್ವನಿ ನೀಡಿದ್ದಾರೆ. ಈ ಚಿತ್ರಕ್ಕೆ ಕೆ. ಪ್ರವೀಣ್ ನಾಯಕ್ ಆಯಕ್ಷನ್-ಕಟ್ ಹೇಳಿದ್ದಾರೆ. ನಟ ಶರಣ್ ಕಂಠದಲ್ಲಿ ಮೂಡಿಬಂತು 'ಟಕೀಲಾ' ಸಿನಿಮಾದ ಹೊಸ ಹಾಡು ಖ್ಯಾತ ನಟ ಶರಣ್ ಅವರು ಉತ್ತಮ ಗಾಯಕ ಕೂಡ ಹೌದು. ಈಗಾಗಲೇ ಅವರ ಕಂಠದಲ್ಲಿ ಬಂದ ಅನೇಕ ಹಾಡುಗಳು ಸೂಪರ್ ಹಿಟ್ ಆಗಿವೆ. ಅವರ ಧ್ವನಿಯಲ್ಲಿ ಸಾಂಗ್ ಕೇಳಲು ಅಭಿಮಾನಿಗಳು ಇಷ್ಟಪಡುತ್ತಾರೆ. ಅಂಥವರಿಗೆ ಇಲ್ಲಿದೆ ಗುಡ್ ನ್ಯೂಸ್. 'ಟಕೀಲಾ' ಸಿನಿಮಾದ ಹೊಸ ಹಾಡಿಗೆ ಶರಣ್ ಅವರು ಧ್ವನಿ ನೀಡಿದ್ದಾರೆ. ಈ ಬಗ್ಗೆ ಚಿತ್ರತಂಡ ಮಾಹಿತಿ ನೀಡಿದೆ. 'ಟಕೀಲಾ' ಸಿನಿಮಾಗೆ ಕೆ. ಪ್ರವೀಣ್ ನಾಯಕ್ ಅವರು ನಿರ್ದೇಶನ ಮಾಡಿದ್ದಾರೆ. ಬಿಗ್ ಬಾಸ್ ಖ್ಯಾತಿಯ ಧರ್ಮ ಕೀರ್ತಿರಾಜ್ ಅವರು ಈ ಸಿನಿಮಾದಲ್ಲಿ ಮುಖ್ಯ ಪಾತ್ರ ಮಾಡಿದ್ದಾರೆ. ಶೀರ್ಷಿಕೆ ಕಾರಣದಿಂದ 'ಟಕೀಲಾ' ಸಿನಿಮಾ ಗಮನ ಸೆಳೆಯುತ್ತಿದೆ. ಈ ಸಿನಿಮಾದಲ್ಲಿ ಶರಣ್ ಹಾಡಿರುವ ಗೀತೆಗೆ ಡಾ. ನಾಗೇಂದ್ರ ಪ್ರಸಾದ್ ಅವರು ಸಾಹಿತ್ಯ ಬರೆದಿದ್ದಾರೆ. 'ಟಕೀಲಾ' ಸಿನಿಮಾದಲ್ಲಿ ಧರ್ಮ ಕೀರ್ತಿರಾಜ್ ಜೊತೆ ನಿಖಿತಾ ಸ್ವಾಮಿ ಅವರು ನಾಯಕಿಯಾಗಿ ನಟಿಸಿದ್ದಾರೆ. ನಾಗೇಂದ್ರ ಅರಸ್, ಸುಮನ್ ಶರ್ಮ, ಕೋಟೆ ಪ್ರಭಾಕರ್, ಅರುಣ್ ಮೇಸ್ತ್ರು ಮುಂತಾದವರು ಈ ಸಿನಿಮಾದ ಪಾತ್ರವರ್ಗದಲ್ಲಿ ಇದ್ದಾರೆ. 'ಟಕೀಲಾ' ಸಿನಿಮಾಗೆ ಕೆ. ಪ್ರವೀಣ್ ನಾಯಕ್ ಅವರು ನಿರ್ದೇಶನ ಮಾಡುವುದರ ಜೊತೆಗೆ ಕಥೆ, ಸಂಭಾಷಣೆ, ಚಿತ್ರಕಥೆ ಹಾಗೂ ಸಾಹಿತ್ಯ ಕೂಡ ಬರೆದಿದ್ದಾರೆ. ಕೆ. ಪ್ರವೀಣ್ ನಾಯಕ್ ಅವರು ಈ ಮೊದಲು 'ಜಡ್', 'ಮೀಸೆ ಚಿಗುರಿದಾಗ', 'ಹೂ ಅಂತಿಯಾ ಉಹೂ ಅಂತೀಯ' ಸಿನಿಮಾಗಳಿಗೆ ನಿರ್ದೇಶನ ಮಾಡಿದ್ದರು.


# ಪವನ್‌ಗೆ ಮೋದಿ ಸಹಾಯ



ನಟ ಪವನ್ ಕಲ್ಯಾಣ್ ಅವರ ಪುತ್ರ, ಮಾರ್ಕ್ ಶಂಕರ್ ಇತ್ತೀಚೆಗೆ ಅಗ್ನಿ ಅವಘಡದಲ್ಲಿ ಸಿಲುಕಿದಾಗ ಎಲ್ಲರಿಗೂ ಆತಂಕ ಆಗಿತ್ತು. ಆ ಕಷ್ಟದ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ಸಹಾಯ ಮಾಡಿದ್ದರು. ಅದಕ್ಕಾಗಿ ಈಗ ಪವನ್ ಕಲ್ಯಾಣ್ ಅವರು ಈಗ ಧನ್ಯವಾದ ಅರ್ಪಿಸಿದ್ದಾರೆ. ಆ ಕುರಿತು ಇಲ್ಲಿದೆ ಮಾಹಿತಿ..

ಟಾಲಿವುಡ್ ನಟ, ಆಂಧ್ರ ಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ಕುಟುಂಬಕ್ಕೆ ಇತ್ತೀಚೆಗೆ ಒಂದು ಸಮಸ್ಯೆ ಎದುರಾಗಿತ್ತು. ಪವನ್ ಕಲ್ಯಾಣ್ ಪುತ್ರ, ಮಾರ್ಕ್ ಶಂಕರ್ ಅಗ್ನಿ ಅವಘಡದಲ್ಲಿ ಗಾಯಗೊಂಡಿದ್ದ. ಸಿಂಗಾಪುರದಲ್ಲಿ ಸಂಭವಿಸಿದ ಈ ಘಟನೆಯಿಂದ 8 ವರ್ಷದ ಮಾರ್ಕ್ ಶಂಕರ್‌ಗೆ ಸುಟ್ಟ ಗಾಯಗಳಾದವು. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ಅಗ್ನಿ ಅವಘಡ ಸಂಭವಿಸಿದಾಗ ಪವನ್ ಕಲ್ಯಾಣ್ ಕುಟುಂಬಕ್ಕೆ ನರೇಂದ್ರ ಮೋದಿ ಸಹಾಯ ಮಾಡಿದ್ದರು. ಅದಕ್ಕಾಗಿ ಈಗ ಪವನ್ ಕಲ್ಯಾಣ್ ಅವರು ಮೋದಿಗೆ ಧನ್ಯವಾದ ತಿಳಿಸಿದ್ದಾರೆ. ಸೋಶಿಯಲ್ ಮೀಡಿಯಾ ಮೂಲಕ ಅವರು ಧನ್ಯವಾದ ತಿಳಿಸಿದ್ದಾರೆ.






# ಕೋಟ್ಯಂತರ ರೂ. ಕಳೆದುಕೊಂಡ ಸಮಂತಾ

**ಬಾಲಿವುಡ್ ಸಖತ್ ಮಿಂಚು**

ನಟಿ ಸಮಂತಾ ದಕ್ಷಿಣ ಭಾರತದ ಅತ್ಯಂತ ದುಬಾರಿ ನಟಿಯರಲ್ಲಿ ಒಬ್ಬರು. ಪ್ರತಿ ಸಿನಿಮಾಕ್ಕೆ ದೊಡ್ಡ ಮೊತ್ತದ ಸಂಭಾವನೆಯನ್ನು ಸಮಂತಾ ಪಡೆಯುತ್ತಾರೆ. ಅಂದಹಾಗೆ ಸಮಂತಾ ಕಳೆದ ವರ್ಷ ಕೋಟ್ಯಂತರ ರೂಪಾಯಿ ನಷ್ಟವನ್ನು ಅನುಭವಿಸಿದರಂತೆ. ಆದರೆ ಹಣ ನಷ್ಟವಾಗಿದ್ದಕ್ಕೆ ನಟಿ ಸಮಂತಾಗೆ ಬೇಸರ ಏನಿಲ್ಲ, ಬದಲಿಗೆ ಸಂತೋಷವೇ ಇದೆಯಂತೆ. ಏನಿದು ಸಮಾಚಾರ ಇಲ್ಲಿ ತಿಳಿಯಿರಿ...

ನಟಿ ಸಮಂತಾ, ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆವ ನಟಿಯರಲ್ಲಿ ಒಬ್ಬರು. ಈಗ ತೆಲುಗು ಚಿತ್ರರಂಗದಲ್ಲಿ ತುಸು ಬೇಡಿಕೆ ಕಡಿಮೆ ಆಗಿದೆ. ಆದರೆ ಬಾಲಿವುಡ್‌ನಲ್ಲಿ ಸಖತ್ ಮಿಂಚುತ್ತಿದ್ದಾರೆ. ಒಂದರ ಹಿಂದೊಂದು ಬಿಗ್‌ಬಜೆಟ್ ವೆಬ್ ಸರಣಿಗಳಲ್ಲಿ ಸಮಂತಾ ಋತ್ ಪ್ರಭು ನಟಿಸುತ್ತಿದ್ದಾರೆ. ಸಮಂತಾ, ನಾಗ ಚೈತನ್ಯ ವಿಚ್ಛೇದನದ ಬಳಿಕ ತುಸು ಹೆಚ್ಚಾಗಿ ಉದ್ದಿಮೆಗಳಲ್ಲಿ ಹಣ ಹೂಡಿಕೆ ಮಾಡುತ್ತಿದ್ದಾರೆ. ವಿಚ್ಛೇದನದಿಂದ ಯಾವುದೇ ಪರಿಹಾರ ಧನ ಪಡೆಯದ ಸಮಂತಾ, ಸ್ವಂತವಾಗಿ ದುಡಿದು ಐಶಾರಾಮಿ ಜೀವನವನ್ನೇ ನಡೆಸುತ್ತಿದ್ದಾರೆ. ಆದರೆ ಸಮಂತಾಗೆ ಕಳೆದ ವರ್ಷ ಕೋಟ್ಯಂತರ ರೂಪಾಯಿ ಹಣ ನಷ್ಟವಾಗಿದೆ. ಆದರೆ ಆ ಬಗ್ಗೆ ಯಾವುದೇ ಬೇಸರ ಇಲ್ಲ ಎಂದಿದ್ದಾರೆ ಚೆಲುವೆ. ಸಮಂತಾ, ಸಿನಿಮಾ, ವೆಬ್ ಸರಣಿಗಳು ಮಾತ್ರವೇ ಅಲ್ಲದೆ ಹಲವು ಜಾಹೀರಾತುಗಳಲ್ಲಿಯೂ ನಟಿಸುತ್ತಾರೆ. ಆದರೆ ಕಳೆದ ಕೆಲ ವರ್ಷಗಳಿಂದ ಆರೋಗ್ಯದ ಕಡೆಗೆ ಬಹಳ ಗಮನ ಹರಿಸಿರುವ ನಟಿ ಸಮಂತಾ, ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದೇ ಕಾರಣಕ್ಕೆ ಯೂಟ್ಯೂಬ್ ಚಾನೆಲ್ ತೆರೆದು ಪಾಡ್‌ಕಾಸ್ಟ್‌ಗಳನ್ನು ಮಾಡಿದ್ದಾರೆ. ತಮ್ಮ ಇನ್‌ಸ್ಟಾಗ್ರಾಂ, ಟ್ವಿಟ್ಟರ್ ಬಳಸಿಕೊಂಡು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಕಾರಣದಿಂದಾಗಿಯೇ ಸಮಂತಾ ಹಲವು ಆರೋಗ್ಯಕ್ಕೆ ಹಾನಿಕಾರಕ ಆಗಬಹುದಾದಂಥಹಾ ಜಾಹೀರಾತುಗಳಲ್ಲಿ ನಟಿಸಿಲ್ಲವಂತೆ.

# ಸಿನಿಮಾ ಗೆದ್ದರೆ ಮಾತ್ರ ಸಂಭಾವನೆ



ಬಾಲಿವುಡ್ ನಟ ಅಕ್ಷಯ್ ಕುಮಾರ್, ವರ್ಷಕ್ಕೆ ಅತಿ ಹೆಚ್ಚು ಸಿನಿಮಾಗಳಲ್ಲಿ ನಟಿಸುವ ಏಕೈಕ ಸೂಪರ್ ಸ್ಟಾರ್ ನಟ. ಸಂಭಾವನೆ ಬಗ್ಗೆ ಬಹಳ ಕಟ್ಟು-ನಿಟ್ಟಾಗಿರುವ ಅಕ್ಷಯ್ ಕುಮಾರ್, ಕೆಲಸದ ವಿಷಯದಲ್ಲಿಯೂ ಅಷ್ಟೇ ಕಟ್ಟು-ನಿಟ್ಟು. ಅಂದಹಾಗೆ ಪೃಥ್ವಿರಾಜ್ ಸುಕುಮಾರ್ ಹೇಳಿರುವಂತೆ, ಸಿನಿಮಾ ಹಿಟ್ ಆಗದಿದ್ದರೆ ಸಂಭಾವನೆಯನ್ನೇ ತೆಗೆದುಕೊಳ್ಳುವುದಿಲ್ಲವಂತೆ ಅಕ್ಷಯ್ ಕುಮಾರ್. ನಟ ಅಕ್ಷಯ್ ಕುಮಾರ್ ಅವರು ಪ್ರತಿ ಚಿತ್ರಕ್ಕೆ 100 ಕೋಟಿ ರೂಪಾಯಿವರೆಗೆ ಸಂಭಾವನೆ ಪಡೆಯುತ್ತಾರೆ ಎಂದೆಲ್ಲ ಹೇಳಲಾಗುತ್ತಿದೆ. ಆದರೆ, ಈ ವರೆಗೆ ಸಂಭಾವನೆ ಬಗ್ಗೆ ಅವರು ಒಂದೇ ಒಂದು ಹೇಳಿಕೆ ನೀಡಿಲ್ಲ. ಆದರೆ, ಇತ್ತೀಚೆಗೆ ಪೃಥ್ವಿರಾಜ್ ಸುಕುಮಾರನ್ ಅವರು ಈ ಬಗ್ಗೆ ಮಾತನಾಡಿದ್ದರು. ಅಕ್ಷಯ್ ಕುಮಾರ್ ಅವರು ಸಿನಿಮಾ ಹಿಟ್ ಆದರೆ ಮಾತ್ರ ಸಂಭಾವನೆ ಪಡೆಯುತ್ತಾರೆ ಎನ್ನುವ ಮೂಲಕ ಶಾಕಿಂಗ್ ವಿಚಾರವನ್ನು ಹೇಳಿಕೊಂಡಿದ್ದರು. 2023ರಲ್ಲಿ ಬಂದ 'ಸೆಲ್ಫೀ' ಸಿನಿಮಾ ಸೋತಿದೆ. ಈ ಚಿತ್ರಕ್ಕೆ ಪೃಥ್ವಿರಾಜ್ ಕೂಡ ನಿರ್ಮಾಪಕರಲ್ಲಿ ಒಬ್ಬರು. ಇದಕ್ಕೆ ಕಾರಣವೂ ಇದೆ. ಏಕೆಂದರೆ, ಮಲಯಾಳಂನ 'ಡ್ರೈವಿಂಗ್ ಲೈಸೆನ್ಸ್' ಚಿತ್ರದ ನಿರ್ಮಾಣ ಮಾಡಿದ್ದು ಪೃಥ್ವಿರಾಜ್. ಇದರ ಹಿಂದಿ ರಿಮೇಕ್‌ಗೆ ಪೃಥ್ವಿರಾಜ್ ಕೂಡ ನಿರ್ಮಾಪಕರಾದರು. ಇವರು ಅಕ್ಷಯ್ ಕುಮಾರ್ ಸಂಭಾವನೆ ವಿಚಾರವಾಗಿ ಮಾತನಾಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966